
# ಅಪರಂಜಿ

ತಿಳಿನಗೆಯ ಕಾರಂಜಿ

ಡಿಸೆಂಬರ್ -2020




ಬಿಡಿ ಪ್ರತಿ: ರೂ.10.00

**ಸಂಪಾದಕ ಮಂಡಳಿ**

**ಸಂಪಾದಕರು**

ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**

ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**

ಶ್ರೀ ಎಚ್.ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**

ಶ್ರೀ ಉಲ್ಲಾಸ ರಾಯಸಂ

**ಟ್ರಸ್ಟಿಗಳು**

ಶ್ರೀ ಎಂ ಶಿವಕುಮಾರ್

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ

ಶ್ರೀ ಸಿ.ಆರ್. ಸತ್ಯ

ಶ್ರೀ ಕೆ. ರವೀಂದ್ರ ರಾವ್

ಶ್ರೀ ವಿ. ಆರ್. ಭರತ್



**ಚಂದಾ ವಿವರ:**

**ಬಿಡಿ ಪ್ರತಿ: ರೂ. 10/-**

**ವಾರ್ಷಿಕ ಚಂದಾ: ರೂ. 100/-**

**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:

ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ




# ಅಪರಂಜಿ

ತಿಳಿನಗೆಯ ಕಾರಂಜಿ


**ಸಂಪುಟ 38**

**ಸಂಚಿಕೆ - 3**

**ಡಿಸೆಂಬರ್-2020**


## *ಈ ಸಂಚಿಕೆಯಲ್ಲಿ.....*


| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 2 |
| ನಮ್ಮ ನಿಮ್ಮಲ್ಲಿ | ಶಿವಕುಮಾರ್ | 4 |
| ಸೀತಕ್ಕನ ದರ್ಬಾರ್ | ಶ್ರವಣಕುಮಾರಿ ಟಿ.ಎಸ್. | 7 |
| ವಿಮಾಣ ಪ್ರಯಾಣದ ಅವಾಂತರ | ಜಿ.ಎಸ್. ರಾಮಸ್ವಾಮಿ | 11 |
| ರೀ ನೀರು ಹಾಕ್ಕೊಳ್ರೀ | ಎನ್. ಶಂಕರ ರಾವ್ | 14 |
| ನುಡಿಯಿತು ವೀಣೆ | ಚಿತ್ರಾ ರಾಮಚಂದ್ರನ್ | 15 |
| ತುಂತುರು | ದಂನಳ | 19 |
| ಬಾಳು ಕನ್ನಡವೇ | ಜಯಶ್ರೀ ದೇಶಪಾಂಡೆ | 20 |
| ಮನೆ ಮಾರಾಟ | ಡಾ.ಶ್ಯಾಮಲಾ ರವಿಶಂಕರ್ | 25 |
| ಪುಸ್ತಕ ವಿಮರ್ಶೆ | ಆರತಿ ಘಟಿಕಾರ್ | 26 |
| ಅಡುಗೆ ಮನೆ ಲವ್ | ಬೇಲೂರು ರಾಮಮೂರ್ತಿ | 27 |
| ಪಕೋಡ ಮತ್ತು ಥಿಂಕಿಂಗ್ ಪವರು | ಎಚ್. ಗೋಪಾಲಕೃಷ್ಣ | 30 |
| ನಮ್ಮ ಟಿ.ವಿ. ಕಾರ್ಯಕ್ರಮಗಳಲ್ಲಿ | ಕೆ.ಎಸ್. ಸೋಮೇಶ್ವರ | 33 |
| ಸಾವಿನ ಮನೆಯಲ್ಲಿ | ವಸುಮತಿ ಉಡುಪ | 37 |
| ಟೈಪಾಯಣ ನೋ ಕರಕ್ಷನ್ಸ್ | ಧಾರಿಣಿ ಮಾಯಾ | 39 |


ಮುಖಪುಟ ವ್ಯಂಗ್ಯಚಿತ್ರ :
**ಗುಜ್ಜಾರ್ / ಆನಂದ**


*ಪ್ರಕಾಶಕರು :* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: koravanji42@hotmail.com ದೂರವಾಣಿ: 080-23345259



*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com



For Online payment of subscription: KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
**Please mention your subscription number.**

*ಮುದ್ರಣ : ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ : ಒಮೇಗಾ ಲೇಸರ್‌ಟೆಕ್*



# ಅಪರಂಜಿ ಕಿಡಿ

**●ಪ್ರಕಾಶ್**

**ಸ್ವಾತಂತ್ರ ದೇವತೆಯೆಂದೇ ಹೆಸರಾದ ಸ್ಟಾಚ್ಯೂ ಅಫ್ ಲಿಬರ್ಟಿ**

**ನಾಲ್ಕು ವರ್ಷಗಳಲ್ಲಿ ಮೊದಲಬಾರಿಗೆ ನಸುನಕ್ಕಳಂತೆ !!**

****

ಸ್ಯಾಂಡಲ್‌ವುಡ್ ಪ್ರಕರಣ ತನಿಖೆ !! –ಸುದ್ದಿ

**ಏಕೋ ಚಂದನದ ಸುವಾಸನೆ ಕುಗ್ಗುತ್ತಿದೆ. !!**

****

ಕೃಷ್ಣ ಜನ್ಮಸ್ಥಾನ : ನವೆಂಬರ್ ನಲ್ಲಿ ವಿಚಾರಣೆ – ಪತ್ರಿಕೆ

**ಹರೇ ರಾಮಾ ........................!!**

****

ಉಪನಗರ ರೈಲಿನಿಂದ ರಿಯಾಲ್ಟಿಗೆ ಹೊಸ ಆಯಾಮ – ಸುದ್ದಿ

**ಹಳಿ ತಪ್ಪದಿದ್ದರೆ ಸಾಕು. !!**

****

**ಡಿವೈಡೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಎಂದು ಹೊಸ**
**ನಾಮಕರಣವಾಗುವುದು ಖಚಿತವಲ್ಲವಂತೆ !!**

****

ಒಂದೂವರೆ ಕೋಟಿ ಕದ್ದ ಬಾಣಸಿಗನ ಸೆರೆ. – ಪತ್ರಿಕೆ

**ಈಗ ಅವನ ಬೇಳೆ ಬೇಯುವುದಿಲ್ಲ !!**

****

ಬೇರೆಯವರ ವಿಚಾರ ನಮಗೆ ಬೇಡ – ಡಿ.ಕೆ.ಶಿ.

**ಹೌದು ನಮಗೂ ಹಾಗೇ ಅನ್ನಿಸುತ್ತೆ !!**

****

ರಾಯಲ್ ಛಾಲೆಂಜರ್ಸ್ ಗೆ ಸೋಲು – ಕ್ರೀಡಾ ಸುದ್ದಿ

**ವಿರಾಟಪರ್ವ ಮುಗಿದಂತಿದೆ !!**

****

# ಅಪರಂಜಿ ಬಳಗಕ್ಕೆ ಆಹ್ವಾನ

**ಆತ್ಮೀಯ ಓದುಗರೇ,**

ನಿಮ್ಮ ಬಂಧು ಬಳಗ ಕಡೇ ಪಕ್ಷ ಮುಂದಿನ ಹತ್ತು ವರ್ಷಗಳವರೆಗೆ ಪ್ರತಿ ತಿಂಗಳು ನಿಮ್ಮನ್ನು ಹೃದಯತುಂಬಿ ನೆನಸಿಕೊಳ್ಳುವಂಥಾ ಒಂದು ಸುವರ್ಣ ಅವಕಾಶ ನಿಮ್ಮ ಮುಂದಿದೆ. ಅದು ಅಪರಂಜಿ ಓದುಗ ಬಳಗವನ್ನು ಹೆಚ್ಚಿಸುವುದು. ನೀವು ಮಾಡಬೇಕಾದುದಿಷ್ಟೆ. ನಿಮ್ಮ ಬಂಧುಗಳಿಗೆ /ಸ್ನೇಹಿತರಿಗೆ ನೀವು ಅಪರಂಜಿಯನ್ನು ಉಡುಗೊರೆಯಾಗಿ ಕೊಡಬಹುದು. **ಪ್ರತಿ ತಿಂಗಳು ಅಪರಂಜಿ ಅವರ ಮನೆಗೆ ಹೋದಾಗ ಅವರು ನಿಮ್ಮನ್ನು ಕೃತಜ್ಞತಾಭಾವದಿಂದ ನೆನೆಯುತ್ತಾರೆ.** ಅದಕ್ಕೆ ನೀವು ಈ ಕೆಳಗಿನ ಅರ್ಜಿಯನ್ನು ತುಂಬಿ ನಮಗೆ ಕಳಿಸಿದರೆ ಸಾಕು. ನಂತರದ ದಿನಗಳಲ್ಲಿ ಅಪರಂಜಿ ನಿಮ್ಮ ಬಂಧುಗಳ/ಸ್ನೇಹಿತರ ಮನೆಗೆ ಅಂಚೆಯಲ್ಲಿ ತಲುಪುತ್ತದೆ. **ಪ್ರತಿ ಹೊಸ ವಾರ್ಷಿಕ ಚಂದಾದಾರರಿಗೆ 100/– ರೂಪಾಯಿಯಂತೆ ಮತ್ತು ಪ್ರತಿ ಹತ್ತು ವರ್ಷದ ಚಂದಾದಾರರಿಗೆ 750/– ರೂಪಾಯಿಯಂತೆ ಚೆಕ್/ಡಿಡಿ/ಆನ್ ಲೈನ್ ಮೂಲಕ ಕೊರವಂಜಿ ಕಾರ್ಯಾಲಯದ ವಿಳಾಸಕ್ಕೆ ಅಥವಾ ಸಂಪರ್ಕ ವಿಳಾಸಕ್ಕೆ ಅಥವಾ ಬ್ಯಾಂಕ್ ಮೂಲಕ ಸಲ್ಲಿಸಬಹುದು.** ಬ್ಯಾಂಕ್ ವಿವರಗಳನ್ನೂ ಕೊಟ್ಟಿದ್ದೇವೆ.

## ಅರ್ಜಿ ನಮೂನೆ

ಇವರಿಂದ : ಹೆಸರು ......................................................................................

ಚಂದಾದಾರರ ಸಂಖ್ಯೆ: ...............................................................................

ಉಡುಗೊರೆಯಾಗಿ ಅಪರಂಜಿಯನ್ನು ಪ್ರತಿ ತಿಂಗಳೂ ಈ ಕೆಳಕಂಡ ವಿಳಾಸಗಳಿಗೆ ತಲುಪಿಸಿ.

1) ಹೆಸರು : ..............................................................................................

ವಿಳಾಸ: ....................................................................................................

..................................................................................................................

ದೂರವಾಣಿ :............................ ಈಮೇಲ್ ವಿಳಾಸ:.............................

2) ಹೆಸರು : ..............................................................................................

ವಿಳಾಸ: ....................................................................................................

..................................................................................................................

ದೂರವಾಣಿ :............................ ಈಮೇಲ್ ವಿಳಾಸ:.............................

---

| | |
|---|---|
| **Account Name :** | **KORAVANJI APARANJI TRUST** |
| **Account Number :** | 109804180000056 |
| **IFSC Code :** | SVCB0000098 |
| **Name of the Bank:** | SVC Co-operative Bank Ltd. |
| **Branch Code /Name :** | Malleshwaram |
| **Account Type :** | Current |

# “ನಮ್ಮ ನಿಮ್ಮಲ್ಲಿ”

♦ಶಿವಕುಮಾರ್

ಅಮೆರಿಕಾದ ಚುನಾವಣೆಯ ಮತ ಎಣಿಕೆಯ ತಮಾಷೆಯನ್ನು ನೋಡಿ ಯಾರಿಗಾದರೂ ಆಶ್ಚರ್ಯವಾಗಲೇಬೇಕು. ಇನ್ನೂರು ವರ್ಷಗಳಷ್ಟು ಹಳೆಯ ಪ್ರಜಾಪ್ರಭುತ್ವ ಅಂತ ಜಂಭ ಕೊಚ್ಚಿಕೊಳ್ಳುವ ದೇಶ ಹೀಗೆ ಮುಗ್ಗುರಿಸುವುದನ್ನು ನೋಡಿ, ‘ಇದೇಕೆ ಹೀಗೆ? ನಮ್ಮಲ್ಲಿರುವಂತೆ ಅಲ್ಲಿ ಚುನಾವಣಾ ಆಯೋಗ ಇಲ್ಲವೇ? ಸೋತಿರುವ ಅಭ್ಯರ್ಥಿ ಇಷ್ಟು ಪುಂಡಾಟ ಮಾಡಲು ಅಲ್ಲಿ ಹೇಗಾದರೂ ಸಾಧ್ಯ?‘ ಎಂಬೆಲ್ಲ ಪ್ರಶ್ನೆಗಳು ಮನಸ್ಸನ್ನು ಕಾಡುತ್ತಿದ್ದಾಗ ನ್ಯೂಯಾರ್ಕರ್ ಪತ್ರಿಕೆಯಲ್ಲಿನ ಲೇಖನವೊಂದು ನನ್ನ ಕಣ್ಣಿಗೆ ಬಿತ್ತು. ಅಮೆರಿಕೆಯ ಪ್ರಜಾಪ್ರಭುತ್ವದ ಹುಟ್ಟಿನ ಬಗ್ಗೆ, ಅಲ್ಲಿನ ಬಗೆಹರಿಯದ ಸಮಸ್ಯೆಗಳ ಬಗ್ಗೆ ಒಂದು ಹೊಸ ತಿಳಿವನ್ನು ನೀಡುವ ಆ ಲೇಖನದಿಂದ ಹಲವು ಅಂಶಗಳನ್ನು ಆರಿಸಿ  ಇಲ್ಲಿ ನಿಮ್ಮ ಮುಂದೆ ಇರಿಸಿರುವೆ.

ನೂರ ಐವತ್ತು ವರ್ಷಗಳ ಹಿಂದೆ ನಡೆದ ಅಂತರ್ಯುದ್ಧದ (ಸಿವಿಲ್ ವಾರ್) ಸಮಯದಲ್ಲಿದ್ದ  ಜನಾಂಗೀಯ ಬಿರುಕು ಈಗ ಮತ್ತೆ ಗಣನೀಯ ಮಟ್ಟದಲ್ಲಿ ತಲೆಯೆತ್ತಿದೆ. 1858ರಲ್ಲಿ ಲಿಂಕನ್ (ಅವನಿನ್ನೂ ಆಗ ಅಧ್ಯಕ್ಷನಾಗಿರಲಿಲ್ಲ) ಸೆನೆಟ್ ಸ್ಥಾನಕ್ಕೆ ಸ್ಪರ್ಧಿಸಿದ್ದ. ಅವನ ಇದುರಾಳಿ ಡಗ್ಲಸ್ ಎಂಬಾತ. ಚುನಾವಣೆಯ ಮುಖ್ಯ ಚರ್ಚಾ ವಿಷಯವೆಂದರೆ ಕರಿಯರ ಜೀತ ಪದ್ಧತಿಯ ಭವಿಷ್ಯ. ಡಗ್ಲಸ್ ತನ್ನದೇ ಆದ  ‘ಜನಪ್ರಿಯ ಜೀತ‘ ಎಂಬ ಕಾರ್ಯಕ್ರಮದ ಪರವಾಗಿ ವಾದಿಸುತ್ತಿದ್ದ. ಜೀತದಾಳುಗಳನ್ನು ಕರುಣೆಯಿಂದ ನೋಡಿಕೊಂಡು ಅವರಿಂದ ಹೆಚ್ಚು ಉತ್ಪಾದನೆಯನ್ನು ಪಡೆಯುವ ನೀತಿ ಇದು. ಇದಕ್ಕೆ ಪ್ರತಿಯಾಗಿ ಲಿಂಕನ್, ಜೀತಪದ್ಧತಿಯ ಸಂಪೂರ್ಣ ನಿರ್ಮೂಲನಕ್ಕಾಗಿ ಪಣತೊಟ್ಟಿದ್ದ. ಸೆನೆಟ್ ಚುನಾವಣೆಗೆ ಮುಂಚೆ ಇಬ್ಬರೂ ಅನೇಕ ಚರ್ಚಾ ಸ್ಪರ್ಧೆಗಳಲ್ಲಿ ಪಾಲ್ಗೊಳ್ಳಬೇಕಾಗಿತ್ತು. ಈಗಿನ ಅಧ್ಯಕ್ಷ ಚರ್ಚೆಗಳ ಮಟ್ಟವನ್ನು ನೋಡಿದರೆ ಆ ಚರ್ಚೆಗಳು ಬಹು ಸತ್ವಯುತವಾಗಿದ್ದವೆಂದೇ ಹೇಳಬಹುದು. ಒಬ್ಬ ಅಭ್ಯರ್ಥಿ ಒಂದು ಘಂಟೆಯ ಕಾಲ ಮಾತನಾಡಿದ ಬಳಿಕ ಇದುರಾಳಿ ಒಂದೂವರೆ ಘಂಟೆಯ ಉತ್ತರ. ಅನಂತರ ಮೊದಲ ಅಭ್ಯರ್ಥಿಗೆ ಇನ್ನೂ ಅರ್ಧ ಘಂಟೆಯ ಕಾಲ ಮಾತನಾಡಲು ಅವಕಾಶ. ಧ್ವನಿವರ್ಧಕಗಳಿಲ್ಲದ ಆ ದಿನಗಳಲ್ಲಿ  ಅಭ್ಯರ್ಥಿಯ ಗಂಟಲಿನ ಶಕ್ತಿ ಅಭ್ಯರ್ಥಿಯ ಗೆಲುವಿಗೆ ಒಂದು ಅಗತ್ಯ ಪರಿಕರವಾಗಿತ್ತು. ಇಲ್ಲಿನಾಯ್ ಪ್ರಾಂತ್ಯದ ವಿವಿಧ ಊರುಗಳಿಗೆ ಈ ಜೋಡಿ ಭೇಟಿ ನೀಡಿ ತಮ್ಮ ವಾದವನ್ನು ಮಂಡಿಸುತ್ತಿದ್ದರು. ಆಲ್ಫ್ರೆಡ್ ಬನ್ ಎಂಬ ಇಂಗ್ಲಿಷ್ ಯಾತ್ರಿಕ ಈ ಚರ್ಚೆಗಳ ಬಗ್ಗೆ ಬರೆಯುತ್ತ, ‘ಫ್ಯಾಕ್ಟರಿ ಕೆಲಸಗಳನ್ನು ಮುಗಿಸಿ ಸುಸ್ತಾಗಿದ್ದರೂ ಕೆಲಸಗಾರರು ಈ ಚರ್ಚೆಗಳನ್ನು ಕೇಳಲು ಸಭಾಂಗಣಗಳಿಗೆ ನುಗ್ಗಿ ಬರುತ್ತಿದ್ದರು. ಅವರುಗಳ ಉತ್ಸಾಹ ಸ್ವಲ್ಪವೂ ಕುಂದಿರಲಿಲ್ಲ‘ ಎನ್ನುತ್ತಾನೆ. ಲಿಂಕನ್‌ನ ಮಾತುಗಾರಿಕೆ ಕೇಳುಗರ ಮನ ಒಲಿಸುವಂತಿತ್ತು. ‘ ಸರಿ ತಪ್ಪುಗಳ ನಡುವಣ ಘರ್ಷಣೆ ಅನಾದಿ ಕಾಲದಿಂದಲೂ ಇದ್ದದ್ದೇ. ನಮ್ಮ ಜೊತೆಗಾರನೊಬ್ಬನನ್ನು ಪ್ರಾಣಿಯ ಮಟ್ಟಕ್ಕೆ ಇಳಿಸುವ ಜೀತಪದ್ಧತಿ ತಪ್ಪು ಎಂದು ನಾನು ಹೇಳುತ್ತೇನೆ.

ನನ್ನ ಇದುರಾಳಿ ಅದನ್ನೇ ಸರಿ ಎನ್ನುತ್ತಾನೆ. ಆಯ್ಕೆ ನಿಮಗೆ ಬಿಟ್ಟದ್ದು' ಎಂದು ಸ್ಪಷ್ಟವಾಗಿ ಹೇಳುತ್ತಿದ್ದ.

ಇಷ್ಟೆಲ್ಲ ಅಭಿಪ್ರಾಯ ವಿನಿಮಯಗಳಾದರೂ ಈ ನಾಗರೀಕತೆಗೆ ಅಮೆರಿಕೆಯ ಅಂತರ್ಯುದ್ಧವನ್ನಾಗಲೀ, ಲಿಂಕನ್‌ನ ಕಗ್ಗೊಲೆಯನ್ನಾಗಲೀ ತಪ್ಪಿಸುವುದು ಸಾಧ್ಯವಾಗಲಿಲ್ಲ. ಪ್ರಾರಂಭದಿಂದ ಅಮೆರಿಕೆಯ ರಾಜಕೀಯ ಸಂಸ್ಕೃತಿ, ತರ್ಕಬದ್ಧ ವಾದಸರಣಿ ಮತ್ತು ಕುರುಡು ಹಿಂಸೆ ಇವುಗಳ ನಡುವಣ ಹೊಯ್ದಾಟವಾಗಿದೆ. ಈ ಹೊಯ್ದಾಟ, ಈ ಕಾಳಗ ಇಂದಿಗೂ ಜೀವಂತವಾಗಿರುವುದೇ ಒಂದು ವಿಪರ್ಯಾಸ. ರಾಜ್ಯ ಶಾಸ್ತ್ರ ತಜ್ಞರಾದ ಕಲ್ಮೋ ಮತ್ತು ಮೇಸನ್ ಇವರುಗಳ ಪ್ರಕಾರ, ಶತಾಂಶ 15ರಷ್ಟು ರಿಪಬ್ಲಿಕನ್ನರೂ, ಶತಾಂಶ 20ರಷ್ಟು ಡೆಮೋಕ್ರಾಟರೂ, ತಮ್ಮ ಇದುರಾಳಿಗಳು ನಾಶವಾದರೆ ಮಾತ್ರ ದೇಶ ಉದ್ಧಾರವಾದೀತೆಂದು ನಂಬುತ್ತಾರಂತೆ. ಲ್ಯಾರಿ ಡಯಮಂಡ್ ಎಂಬ ರಾಜ್ಯಶಾಸ್ತ್ರಜ್ಞ ಹೀಗೆನ್ನುತ್ತಾನೆ. 'ಪ್ರಜಾಪ್ರಭುತ್ವದ ಪರ ಇರಬೇಕಾದ ನಿಷ್ಠೆ ರಿಪಬ್ಲಿಕನ್ ಪಕ್ಷದಿಂದ ಕಾಣುತ್ತಿಲ್ಲ. ಇದು ಬದಲಾಗಬೇಕಾದರೆ ಆ ಪಕ್ಷದ ಧುರೀಣರು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿಹಿಡಿಯಲು ಹಿಂಜರಿಯಬಾರದು. ಇದಾಗದಿದ್ದರೆ ನಮ್ಮದು ಜಾರುವ ಮರಳಿನ ಪಥವಾಗುವುದರಲ್ಲಿ ಸಂಶಯವಿಲ್ಲ.' ಲಿಂಕನ್‌ನ ಕಾಲದ ಚರ್ಚೆಗಳ ಬೌದ್ಧಿಕ ಮಟ್ಟ ಈಗಿನ ದಿನಗಳಲ್ಲಿ ಕಾಣದಾಗಿರುವುದಕ್ಕೆ ದೃಶ್ಯಮಾಧ್ಯಮ ಬಹುಮಟ್ಟಿಗೆ ಕಾರಣ ಎಂದು ತಜ್ಞರ ಅಭಿಪ್ರಾಯ. 1984ರಲ್ಲಿ ರೀಗನ್ ಮತ್ತು ಮೊಂಡಾಲ್ ಅಧ್ಯಕ್ಷ ಚರ್ಚೆಯಲ್ಲಿ ಭಾಗವಹಿಸಿದಾಗ ಗಂಭೀರ ರಾಜಕಾರಣ ಮನರಂಜನೆಯಾಗಿ ಬದಲಾಯಿತು. ಹಾರಿಕೆಯ ಉತ್ತರಗಳು, ಗಂಭೀರ ಪ್ರಶ್ನೆಗೆ ನಗೆ ಚಟಾಕಿ ಉತ್ತರ ಇವೆಲ್ಲಾ ಅಭ್ಯರ್ಥಿಯ ಗೆಲುವಿಗೆ ಕಾರಣವಾದವು. ಮನರಂಜನೆ ಮತ್ತು ಗಂಭೀರ ರಾಜಕೀಯ ಇವುಗಳ ನಡುವಣ ಸೀಮಾರೇಖೆ ಕ್ರಮೇಣ ಮರೆಯಾಗುತ್ತ ಬಂದಿತು. ಕಿರುತೆರೆಯ ರಿಯಾಲಿಟಿ ಹೋಸ್ಟ್ ಆಗಿದ್ದ ಟ್ರಂಪ್ ಅಮೆರಿಕೆಯ ಅಧ್ಯಕ್ಷಸ್ಥಾನಕ್ಕೆ ಏರಿದ್ದಕ್ಕೆ ಇದೂ ಒಂದು ಕಾರಣ.

ಜಗತ್ತಿನ ಅತ್ಯಂತ ಮುಂದುವರಿದ ರಾಷ್ಟ್ರ ಎಂಬ ಪಟ್ಟವನ್ನು ಹೊತ್ತಿರುವ ಅಮೆರಿಕಾ ದೇಶದ ಜನತೆಯ ಬಹುಪಾಲು ಜನ ವಿದ್ಯಾಭ್ಯಾಸ, ಲೋಕ ಜ್ಞಾನ ಇವುಗಳಿಂದ ವಂಚಿತರಾಗಿದ್ದಾರೆ. ಇರಾಕ್ ಯುದ್ಧ ಪ್ರಾರಂಭವಾಗಿ ಮೂರು ವರ್ಷಗಳ ನಂತರ ನ್ಯಾಷನಲ್ ಜಿಯೋಗ್ರಾಫಿಕ್ ಪತ್ರಿಕೆ ನಡೆಸಿದ ಒಂದು ಸಮೀಕ್ಷೆಯಲ್ಲಿ ಶತಾಂಶ 75 ರಷ್ಟು ಅಮೆರಿಕನ್ನರಿಗೆ ಇರಾಕ್, ಇರಾನ್, ಸೌದಿ ಅರೇಬಿಯಾ ಮತ್ತು ಇಸ್ರೇಲ್ ದೇಶಗಳನ್ನು ಭೂಪಟದಲ್ಲಿ ಗುರುತಿಸಲು ಆಗಲಿಲ್ಲ. ಅಜ್ಞಾನ, ಪೆದ್ದುತನ, ಬಹುಪಾಲು ಅಮೆರಿಕನ್ನರ ಪ್ರಾರಬ್ಧ ಕರ್ಮ. ಅಧ್ಯಕ್ಷ ಜೆಫರ್ಸನ್ ಹೀಗೆನ್ನುತ್ತಾನೆ. 'ಒಂದು ದೇಶ ಅಜ್ಞಾನಿಗಳಾಗಿದ್ದೂ, ಸ್ವತಂತ್ರರಾಗಿದ್ದು ನಾಗರೀಕತೆಯಿಂದ ಬಾಳಲು ಆಶಿಸಿದರೆ ಅದು ಕೇವಲ ಗಗನ ಕುಸುಮ.' 2005 ರಲ್ಲಿ ನಡೆದ ಒಂದು ಸಮೀಕ್ಷೆಯ ಪ್ರಕಾರ ಮೂರರಲ್ಲಿ ಎರಡು ಭಾಗದಷ್ಟು ಜನ ಅಮೆರಿಕನ್ನರು ಸರ್ಕಾರದ ಮೂರು ಅಂಗಗಳನ್ನು ಹೆಸರಿಸುವುದರಲ್ಲಿ ವಿಫಲರಾದರಂತೆ. ಅಷ್ಟೇಕೆ ಅಧ್ಯಕ್ಷ ಟ್ರಂಪ್‌ನ ಗ್ರಹಣ ಶಕ್ತಿ, ಪದ ಸಂಪತ್ತಿ, ಇವುಗಳು ನಾಲ್ಕನೆಯ ತರಗತಿಯ ಮಟ್ಟದ್ದು ಎಂದು ವೈಜ್ಞಾನಿಕ ವರದಿಗಳು ಸಾಬೀತುಪಡಿಸಿವೆಯಂತೆ. ಖ್ಯಾತ ಲೇಖಕಿ ಸೂಸನ್ ಜೇಕಬಿ ತನ್ನ 'ದ ಏಜ್ ಆಫ್ ಅಮೆರಿಕನ್ ಅನ್‌ರೀಸನ್' ಎಂಬ ಪುಸ್ತಕದಲ್ಲಿ, 'ಅಜ್ಞಾನ, ಮೂಢನಂಬಿಕೆ ಮತ್ತು ಬೌದ್ಧಿಕತೆಯ ಬಗ್ಗೆ ತಾತ್ಸಾರ, ಈ ಮೂರೂ ಸೇರಿರುವ ವೈರಾಣುವಿನ ಬಾಧೆಯಿಂದ

ಅಮೆರಿಕಾ ಬಳಲುತ್ತಿದೆ' ಎನ್ನುತ್ತಾಳೆ. ಟ್ರಂಪ್‌ನ ನಿರ್ವಹಣಾ ಶೈಲಿಯ ಬಗ್ಗೆ ಪ್ರಶ್ನಿಸಿದಾಗ ಅಮೆರಿಕನ್ ನಗೆಗಾರ ಜಾನ್ ಮುಲಾನಿ, 'ಟ್ರಂಪ್‌ನ ಶೈಲಿ ಹೈಟೆಕ್ ಆಸ್ಪತ್ರೆಯೊಂದರಲ್ಲಿ ಕುದುರೆಯೊಂದನ್ನು ಬಿಟ್ಟಂತೆ. ಅಮಾಯಕ ಪ್ರಾಣಿಯೊಂದು ತನಗೆ ತಿಳಿಯದ ಪರಿಸರವೊಂದರಲ್ಲಿ ಬಂದಂತೆ. ಕುದುರೆ ಮುಂದಿನ ಕ್ಷಣ ಏನು ಮಾಡುತ್ತದೆಂದು ಕುದುರೆಯೂ ಸೇರಿದಂತೆ ಯಾರಿಗೂ ತಿಳಿದಿರುವುದಿಲ್ಲ' ಎಂದನಂತೆ. ಎಲ್ಲ ಉತ್ತಮ ನಗೆಹನಿಗಳಂತೆ ಇದರಲ್ಲೂ ಬಹುಪಾಲು ಸತ್ಯವಿರುವುದನ್ನು ಕಡೆಗಾಣಿಸಲಾಗದು.

ಈ ಲೇಖನವನ್ನು ಬರೆಯುತ್ತಿರುವ ಸಮಯದಲ್ಲಿ ಟ್ರಂಪ್ ಇನ್ನೂ ತನ್ನ ಸೋಲನ್ನು ಒಪ್ಪಿಕೊಂಡಿಲ್ಲ. ಅಧ್ಯಕ್ಷನಾಗಿ ಚುನಾಯಿತರಾಗಿರುವ ಬೈಡೆನ್ ಮಹಾಶಯರ ಈ ಹೇಳಿಕೆ ಆಶಾದಾಯಕವಾಗಿದೆ 'ನಾವು ಮುಂದುವರಿಯ ಬೇಕಾದರೆ ನಮ್ಮ ಎದುರು ಪಕ್ಷದವರನ್ನ ಶತ್ರುಗಳೆಂದು ತಿಳಿಯಬಾರದು. ನಾನು ಡೆಮೋಕ್ರಾಟಿಕ್ ಪಕ್ಷದಿಂದ ಗೆಲವು ಸಾಧಿಸಿರಬಹುದು. ಆದರೆ ನಾನು ಎಲ್ಲ ಅಮೆರಿಕನ್ನರ ಅಧ್ಯಕ್ಷನಾಗಿ ಸರ್ಕಾರವನ್ನು ನಡೆಸುತ್ತೇನೆ'

ಬಳಲಿ ಬೇಸತ್ತಿರುವ ಅಮೆರಿಕನ್ನರನ್ನು ಈ ಮಾತುಗಳು ನವ ದಿಗಂತದೆಡೆಗೆ ಕೊಂಡೊಯ್ಯುವಂತಾಗಲಿ.

■

---

## ಕಿರು ಕಿರು ಕಿರುಗತೆಗಳು

**ಇಂಟರ್‌ನೆಟ್‌ನಿಂದ ಹಾರಿಸಿದ್ದು**

ತುಂಬಾ ದಿವಸಗಳ ನಂತರ ಶಾಲೆ ತೆರೆಯಲು ಅನುಮತಿ ಸಿಕ್ಕಿದೆ. ಆ ಹೆಣ್ಣು ಮಗುವಿಗೆ ತುಂಬಾ ಸಂತೋಷವಾಗುತ್ತಿದೆ, ಟ್ರಾಫಿಕ್ ಸಿಗ್ನಲ್ ಗಳಲ್ಲಿ ಅವಳು ಮಾರುವ ಪೆನ್ನು ಪೆನ್ಸಿಲ್ ರಬ್ಬರ್ ಗಳು ಮತ್ತೆ ಮಾರಾಟವಾಗಲಿದೆ

***

ಆಕೆ ಪ್ರಖ್ಯಾತ ನಟಿ, ಮಗುವನ್ನು ಶಿಸ್ತಿನ ಪ್ರತಿರೂಪ ಮಾಡಲು ಯತ್ನಿಸುತ್ತಿದ್ದಾಳೆ. ಮಗು ಸೊಟ್ಟ ಗೆರೆ ಬರೆದಾಗ ನೆಟ್ಟಗೆ ಬರಿ ಎಂದು ಬುದ್ಧಿ ಹೇಳುತ್ತಾಳೆ. ವೆಂಟಿಲೇಟರ್ ನೆರವು ಪಡೆದು ಕ್ಷೀಣಿಸುತ್ತಾ ಇರುವ ಮಗುವನ್ನು ನೋಡುತ್ತಾ ಆಕೆ ಬೇಡುತ್ತಾಳೆ... ಇ.ಸಿ.ಜಿ. ಮೆಷಿನ್ ನಲ್ಲಿ ಸೊಟ್ಟ ಗೆರೆಗಳೇ ಬರಲಿ...

***

ಎಲ್ಲರೂ ಒಂದೇ ಗುರಿಯತ್ತ ಹೋಗುತ್ತಾರೆ. ವಿರುದ್ಧ ದಿಕ್ಕಿನೆಡೆಗೆ ಹೋಗುವವರು ಯಶಸ್ಸು ಗಳಿಸುತ್ತಾರೆ. ಇದನ್ನು ನಾನು ಟ್ರಾಫಿಕ್ ಪೊಲೀಸ್‌ಗೆ ಹೇಳುವ ಮೊದಲೇ ಆತ ನನಗೆ ಫೈನ್ ಹಾಕಿ ಬಿಟ್ಟಿದ್ದ!

# ಸೀತಕ್ಕನ ದರ್ಬಾರ್

● **ಶ್ರವಣಕುಮಾರಿ ಟಿ.ಎಸ್.**

ನಮ್ಮ ಸೀತಕ್ಕನಿಗೆ ಅವರ ತಂದೆ ವೆಂಕಟೇಶ ಭಟ್ಟರು ಹೆಸರಿಟ್ಟ ಘಳಿಗೆ ಯಾವುದೋ ಗೊತ್ತಿಲ್ಲ. ಐವರು ಗಂಡು ಮಕ್ಕಳಾದ ನಂತರ ಹುಟ್ಟಿದ ಕುಲಪುತ್ರಿಗೆ ಪರಮ ಸಾಧ್ವಿ ತಮ್ಮಮ್ಮನ ಹೆಸರೆಂದು ಸೀತಾಲಕ್ಷ್ಮಿಯೆಂದು ಅಚ್ಚೆಯಿಂದ ಕರೆದರು. ಆದರೆ ಅವಳು ಬೆಳೆಯುತ್ತಾ ಹೋದ ಹಾಗೆ ಅವಳಿಗೆ ಸೀತೆಗಿಂತ ದುರ್ಗಿಯೋ, ಚಾಮುಂಡಿಯೋ ಚೆನ್ನಾಗಿ ಒಪ್ಪುತ್ತಿತ್ತೆಂದು ಅವರಿವರು ಅಂದು ಆಡಿ ಮಾಡಿದರೆ ಭಟ್ಟರೇನು ಮಾಡಲಾದೀತು? ಒಬ್ಬಳೇ ಮಗಳನ್ನು ಕೆಳಗಿಟ್ಟರೆ ಇರುವೆ ಕಚ್ಚೀತು, ಮೇಲಿಟ್ಟರೆ ಕಾಗೆ ಕಚ್ಚೀತು ಎನ್ನುವಂತೆ ಮುಚ್ಚಟೆಯಿಂದ ಸಾಕಿ ಸಾಕಷ್ಟು ಅನುಕೂಲವಾಗಿದ್ದ ಕುಟುಂಬದ ಒಬ್ಬನೇ ಮಗ ರಾಮರಾಯನಿಗೆ ಮದುವೆ ಮಾಡಿಕೊಟ್ಟರು. ಒಬ್ಬಳೇ ಸೊಸೆಯಾಗಿದ್ದು, ಮನೆತುಂಬಾ ಆಳುಕಾಳುಗಳಿದ್ದ ಮನೆಯಾದ್ದರಿಂದ ತವರು ಮನೆಯ ದರ್ಬಾರೇ ಅಲ್ಲೂ ಮುಂದುವರೆದು ಸೀತಕ್ಕನ ನಸೀಬು ಚೆನ್ನಾಗಿಯೇ ಸಾಗಿತ್ತು. ಅತ್ತೆಗೆ ಒಂದೇ ಕುಡಿಯಿದ್ದರೂ ಸೊಸೆ ಮಾತ್ರ ನಾಲ್ಕು ಗಂಡು, ಒಂದು ಹೆಣ್ಣನ್ನು ಹೆತ್ತು, ಮನೆಯನ್ನು ನಂದಗೋಕುಲವನ್ನಾಗಿ ಮಾಡಿದಳೆಂದು ಅತ್ತೆಮಾವಂದಿರ ಅತೀವ ಪ್ರೀತಿಗೆ ಪಾತ್ರಳಾಗಿದ್ದಳು. ಕಾಲ ಕ್ರಮೇಣ ಅತ್ತೆ ಮಾವಂದಿರು ಕಾಲವಾದದ್ದೇನೋ ಸರಿ. ಆದರೆ ರಾಮರಾಯನೂ ಮಕ್ಕಳು ಕೈಗೆ ಬರುವ ಮುಂಚೆಯೇ ಈಜಲು ಹೋಗಿ ನೀರುಪಾಲಾಗಿ ಸತ್ತದ್ದು ದುರ್ದೈವವೇ ಸರಿ. ಹಾಗೆಂದು ಸೀತಕ್ಕನೇನೂ ಅಳುತ್ತಾ ತಲೆಮೇಲೆ ಕೈಹೊತ್ತು ಕುಳಿತುಕೊಳ್ಳಲಿಲ್ಲ. ಸೆರಗನ್ನು ಸೊಂಟಕ್ಕೆ ಸಿಕ್ಕಿಸಿಕೊಂಡು ಸಮಸ್ತ ವ್ಯವಹಾರವನ್ನು ಸಮರ್ಥವಾಗಿ ಕೈಗೆ ತೆಗೆದುಕೊಂಡಳು. ಆಸ್ತಿ ಪಾಸ್ತಿಯನ್ನು ಚೆನ್ನಾಗಿ ರೂಢಿಸಿಕೊಂಡು, ಮಕ್ಕಳನ್ನೂ ಕೈಜಾರಿ ಹೋಗದಂತೆ ನಿಗಾ ವಹಿಸಿದಳು. ಒಳ್ಳೊಳ್ಳೆಯ ಕಡೆ ನೋಡಿ ಸೊಸೆಯರನ್ನೂ, ಅಳಿಯನನ್ನೂ ತಂದು ತನ್ನ ಅತ್ತೆತನಕ್ಕೆ ಯಾವ ಧಕ್ಕೆಯೂ ಬರದಂತೆಯೇ ನೋಡಿಕೊಂಡಳು.

ಚಿಕ್ಕಂದಿನಿಂದಲೂ ಅಮ್ಮನ ಅಂಕೆಯಲ್ಲೇ ಬೆಳೆದ ಮಕ್ಕಳಿಗೆ ಅವಳು ಆಡಿದ್ದೇ ವೇದವಾಕ್ಯ. ತಾವು ಮಾತ್ರವಲ್ಲ; ತಮ್ಮ ಹೆಂಡತಿಯರೂ ಅಮ್ಮ ಹಾಕಿದ ಗೆರೆಯನ್ನು ದಾಟದಂತೆ ನೋಡಿಕೊಳ್ಳುತ್ತಿದ್ದರು. ಸೊಸೆಯರಿರಲಿ, ಅಳಿಯನಿಗೂ ಅತ್ತೆಯೆಂದರೆ ಒಂದು ಭಯಮಿಶ್ರಿತ ಗೌರವ ಭಾವವೇ ಇತ್ತು ಎನ್ನುವಾಗ ಓದುಗರಿಗೆ ನಮ್ಮ ಸೀತಕ್ಕನ ಜಬರ್ು ಹೇಗಿತ್ತೆಂಬ ಅಂದಾಜಾಗಬಹುದು. ಹಾಗೆಂದು ಎಲ್ಲವೂ ಸರಿಯಾಗಿತ್ತೆಂದೇನೂ ಅಲ್ಲ  ಮನೆಯೆಂದ ಮೇಲೆ ಆಗೀಗ ಮಾಡಿನ ಮೇಲಿನಿಂದ ಕಾಗೆಗಳು 'ಕಾವ್ ಕಾವ್' ಎನ್ನುತ್ತಿದ್ದವು, ಬೆಕ್ಕುಗಳು ಅಡುಗೆಮನೆಯಲ್ಲೇ 'ಮಿಯಾವ್' ಅನ್ನುತ್ತಿದ್ದವು. ಜಗಲಿಯ ಮೇಲೆ ನಾಯಿಗಳು 'ಭೌ'ಗುಡುತ್ತಿದ್ದವು, ಮಂಗಗಳು ಮನೆಯಲ್ಲೆಲ್ಲಾ ಹಾರಾಡಿ ಕುಣಿದಾಡುತ್ತಿದ್ದವು. ಆದರೆ ಎಲ್ಲರ ಅರಚಾಟಗಳೂ ಸೀತಕ್ಕನ ಒಂದು ಆವಾಜಿಗೆ ತಣ್ಣಗಾಗಿ ಸದ್ದು ಬಂದಿದ್ದೇ ಸುಳ್ಳೆನ್ನುವಂತೆ ಕರಗಿಹೋಗುತ್ತಿದ್ದವು! ಹಾಗೂ ಹೀಗೂ ಇಷ್ಟರಮೇಲೂ ಏನೋ ಧೈರ್ಯ ಮಾಡಿ, ಮಗನೋ, ಸೊಸೆಯೋ ದನಿಯೆತ್ತಿದರೆ ಸೀತಕ್ಕ "ಇಷ್ಟವಿದ್ದೋರು, ಇಲ್ಲಿರ್ಬೋದು, ಇಲ್ಲದೋರು ನಂಗೂ, ಈ ಆಸ್ತಿಗೂ ಏನೂ ಸಂಬಂಧ್ವಿಲ್ಲ ಅಂತ ಬರ್ಕೊಟ್ಟು ಹೋಗ್ತಿರ್ಬೋದು, ನಾನಿನ್ನೇನು ಸಾಯ್ತೀನಿ ಅನ್ನೋತಂಕ ನಾನು ಭಾಗವೂ ಮಾಡಲ್ಲ;

ವಿಲ್ಲೂ ಬರೆಯಲ್ಲ" ಎಂದು ಮಂಗಳಾರತಿ ಎತ್ತಿದ ತಕ್ಷಣ, ಹೇಗೇಗೆ ಹಂಚಿಕೊಂಡರೂ ಒಬ್ಬೊಬ್ಬರಿಗೂ ಕೋಟಿ ರೂಪಾಯಿಗೆ ಕಮ್ಮಿಯಿಲ್ಲದಂತೆ ಭಾಗ ಬರುವಾಗ ಯಾರು ತಾನೇ ಬಿಟ್ಟು ಹೋದಾರು? ಒದೆ ತಿಂದ ನಾಯಿ ಕುಯ್ಗುಟ್ಟುತ್ತಾ ಮೂಲೆ ಸೇರುವಂತೆ ಗೊಣಗುಡುತ್ತಾ ತಮ್ಮ ತಮ್ಮ ಗೂಡು ಸೇರಿಕೊಳ್ಳುತ್ತಿದ್ದರು. ಗಂಡುಮಕ್ಕಳೂ, ತಾವೂ ಸಮಾಧಾನ ಮಾಡಿಕೊಂಡು ತಮ್ಮ ಹೆಂಡಂದಿರಿಗೆ ಸಮಾಧಾನ ಹೇಳುತ್ತಿದ್ದರು "ಅಮ್ಮನಿಗೂ ವಯಸ್ಸಾಗ್ತಾ ಬಂತು. ಅವ್ರೇನು ಕೆಟ್ಟವ್ರಲ್ಲ, ಮಾತು ಜೋರಷ್ಟೆ, ಮನಸ್ಸು ಬಂಗಾರ; ಬೇಗ್ನೆ ನಮ್ಮಪ್ಪನ್ನ ಕಳ್ಕೊಂಡ್ ಮೇಲೆ ನಮ್ಮನ್ನೆಲ್ಲಾ ಕಣ್ಣಲ್ಲಿಟ್ಕೊಂಡು ಸಾಕಿದಾರೆ. ಹಿಂದಿದ್ದಷ್ಟು ದಿನ ಮುಂದಿರ್ತಾರಾ, ಸ್ವಲ್ಪ ಸೈರಣೆ ತಂದ್ಕೋ, ಕೋಟಿ ರೂಪಾಯಿ ಆಸ್ತಿ ಪುಕ್ಸಟ್ಟೆ ಅಲ್ಲ" ಅಂತ. ಅಂತೂ ಕದನ ವಿರಾಮ ಘೋಷಣೆಯಾಗಿ ಪಿ.ಓ.ಕೆ. ಯಂತೆ ಒಂದಷ್ಟು ದಿನ ಶಾಂತಿಪಾಲನೆಯಾಗುತ್ತಿತ್ತು– ಮತ್ತೊಂದು ಜಗಳ ಶುರುವಾಗುವ ತನಕ

'ಹಿಂದಿದ್ದಷ್ಟು ದಿನ ಮುಂದೆ ಇರ್ತಾರಾ' ಎಂದು ಸೊಸೆಯರೂ ತಾತ್ಕಾಲಿಕವಾಗಿ ಸಮಾಧಾನ ಮಾಡಿಕೊಂಡರೂ, ತಮಗೇ ಮೊಮ್ಮಕ್ಕಳಾಗಿ ಒಂದು ತಿಂದರೆ ಕಡಿಮೆ, ಎರಡು ತಿಂದರೆ ಹೆಚ್ಚು ಎನ್ನುವಂತಾದಾಗಲೂ ಇನ್ನೂ ಹಿದಕವರೆ ಕೂಟಿನೊಂದಿಗೆ ರಾಗಿಮುದ್ದೆಯನ್ನು ತುಪ್ಪದೊಂದಿಗೆ ಮೆದ್ದು ಅರಗಿಸಿಕೊಳ್ಳುವಷ್ಟು ಗಟ್ಟಿಮುಟ್ಟಾಗಿದ್ದ ಅತ್ತೆಯನ್ನು ನೋಡಿದಾಗ ತಮ್ಮ ಸೊಸೆತನ ಮುಗಿಯುವುದೇ ಸುಳ್ಳೇನೋ ಅನ್ನಿಸಿ ನಿಟ್ಟುಸಿರಿಡುತ್ತಿದ್ದರು. ಮೊದಲಿನಿಂದಲೂ ಊಟ, ಉಪಚಾರಗಳಲ್ಲಿ ಸೊಗಸುತನವನ್ನೇ ಕಂಡುಂಡ ಸೀತಕ್ಕ ತಮ್ಮ ಊಟ, ತಿಂಡಿಯ ಮೆನು ಎಲ್ಲರ ಮನದಲ್ಲೂ ಅಚ್ಚಾಗಿ ಹೋಗುವಂತೆ ನೋಡಿಕೊಂಡಿದ್ದರು. ಇಡ್ಲಿಯೊಂದಿಗೆ ಉದ್ದಿನ ಒಡೆ, ನೆಂಚಿಕೆಗೆ ಗಟ್ಟಿ ಚಟ್ನಿ, ಸಣ್ಣ ಈರುಳ್ಳಿ ಹಾಕಿದ ಸಾಂಬಾರು; ಗರಿಗರಿ ಕೆಂಪನೆ ಮಸಾಲೆ ದೋಸೆಗೆ ಮೇಲೆ ಬೆಣ್ಣೆ; ಪೂರಿಗೆ ಸಾಗು; ಹುಳಿ ಮಾಡಿದ ದಿನ ಹಪ್ಪಳ, ಸಂಡಿಗೆ, ಬಾಳಕ; ಅವರೆಕಾಯಿನ ಕಾಲದಲ್ಲಂತೂ ದಿನಕ್ಕೊಂದು ಬಗೆಯ ಅವರೆಕಾಯಿನ ಖಾದ್ಯ ಎಂಭತ್ತರ ವಯಸ್ಸಿನಲ್ಲಿ ಮರಿಮಗನಿಂದ ಕನಕಾಭಿಷೇಕ ಮಾಡಿಸಿಕೊಂಡು ವಜ್ರದೇಹಿಯಾದ ಸೀತಕ್ಕನಿಗೆ ತೊಂಭತ್ತು ವರ್ಷವಾದಾಗಲೂ, ತಿನ್ನುವ ಅಳತೆ ಸ್ವಲ್ಪ ಕಮ್ಮಿಯಾಯಿತೇ ಹೊರತು ವೈವಿಧ್ಯತೆಯಲ್ಲಿ ಮೋಸ ಮಾಡಿಕೊಳ್ಳಲಿಲ್ಲ. ಗುಂಡಪ್ಪನ ಹೊಟೇಲಿನ ಮೈಸೂರು ಪಾಕು, ಆಚಾರ್ ಬಜ್ಜಿಯಿಂದ ಮೆಣಸಿನ ಕಾಯಿ ಬಜ್ಜಿ, ಪಕೋಡ ಇಂತವೆಲ್ಲಾ ಆಗಾಗ ನೈವೇದ್ಯವಾಗುತ್ತಿದ್ದವು. ಯಾರೊಬ್ಬರ ಬಾಯಿಂದ ಬರುವಷ್ಟಿಲ್ಲ, ತಾನೇ ಸ್ವತಃ ಕೋಡುಬಳೆ, ಚಕ್ಕುಲಿ, ತೇಂಗೊಳ್ಳು, ಬೇಸನ್ ಉಂಡೆ, ಕೊಬ್ಬರಿ ಮಿಠಾಯಿ ಇಂತವನ್ನೆಲ್ಲಾ ಹದವಾಗಿ ಅಂತೆಯೇ ಧಾರಾಳವಾಗಿ ಎಲ್ಲರೂ ನಾಲ್ಕು ದಿನ ತಿನ್ನುವಂತೆ ಮಾಡಿ ತಾನೂ ತಿಂದು ತೃಪ್ತಳಾಗುತ್ತಿದ್ದಳು. ತಿನ್ನುವುದಕ್ಕೂ ಸೈ, ಬಡಿಸುವುದಕ್ಕೂ ಸೈ ನಮ್ಮ ಸೀತಕ್ಕ.

ತನ್ನ ಆರೋಗ್ಯವನ್ನು ಕಾಪಾಡಿಕೊಳ್ಳುವಲ್ಲೂ ಸೀತಕ್ಕನ ಶ್ರದ್ಧೆ ನೋಡಿ ಕಲಿಯುವಂತದು. ದೇವರ ಮನೆಯನ್ನು ದಿನವೂ, ಗುಡಿಸಿ, ಒರೆಸಿ ಪೂಜೆಯ ಪಾತ್ರೆಗಳನ್ನೆಲ್ಲಾ ಫಳಫಳ ತೊಳೆದಿಡುವುದು ಅವಳದ್ದೇ ಕೆಲಸ. ಇಂದಿಗೂ ತನ್ನ ಸೀರೆ ಬಟ್ಟೆಯನ್ನು ತಾನೇ ಒಗೆದು ಹರವಿಕೊಳ್ಳುತ್ತಾಳೆ. ಈ ವಯಸ್ಸಿನಲ್ಲೂ ಒಲೆಯ ಮುಂದೆ ಅವಳದ್ದೇ ಆಧಿಪತ್ಯ. ಸೊಸೆಯರೇನಿದ್ದರೂ ಹೆಚ್ಚಿಕೊಡು, ರುಬ್ಬಿಕೊಡು, ತುರಿದುಕೊಡು ಇಂತಹ ಸುತ್ತು ಕೆಲಸಕ್ಕಷ್ಟೇ. ಉಪ್ಪು, ಹುಳಿ, ಖಾರದ ಹದ ಜಾದುವಿನಂತೆ

ಅಡುಗೆಯಲ್ಲಿ ಬಿದ್ದು ಎಲ್ಲರೂ ಲೊಟ್ಟೆಹೊಡೆದು ತಿನ್ನುವಂತೆ ಇರುತ್ತಿದ್ದುದರಿಂದ ಯಾರಿಗೂ ಆ ಜಾಗವನ್ನು ಆಕ್ರಮಿಸಿಕೊಳ್ಳಬೇಕೆಂದು ಅನ್ನಿಸಲೇ ಇಲ್ಲ ಬಿಡಿ. ಆರೋಗ್ಯದಲ್ಲಿ ಸ್ವಲ್ಪ ಏರುಪೇರಾದರೂ, ಪಥ್ಯ, ಉಪವಾಸ, ಕಷಾಯ, ಚೂರ್ಣ, ಭಸ್ಮಗಳಲ್ಲೇ ವಾಸಿಮಾಡಿಕೊಳ್ಳುತ್ತಿದ್ದಳೇ ಹೊರತು ತನಗಾಗಿ ಆಸ್ಪತ್ರೆಯ ಮುಖ ನೋಡಿದ್ದೇ ಇಲ್ಲ. ಹಣ್ಣು, ತರಕಾರಿಗಳನ್ನು ಧಾರಾಳವಾಗಿ ಬಳಸಿ ಸುಲಭಕ್ಕೆ ಯಾವ ಖಾಯಿಲೆಯೂ ಹತ್ತಿರ ಬಾರದಂತೆ ನೋಡಿಕೊಂಡಿದ್ದಾಳೆ. ಅವಳಮ್ಮನಿಂದ ಸ್ವಲ್ಪ ಮಟ್ಟಿಗೆ ಮನೆವೈದ್ಯವನ್ನೂ ಕರಗತ ಮಾಡಿಕೊಂಡಿದ್ದು ಸಣ್ಣ ಪುಟ್ಟ ಜಾಡ್ಯಕ್ಕೆ ಬಗ್ಗುವವಳೇ ಅಲ್ಲ, ಸೆಡ್ಡು ಹೊಡೆದು ನಿಲ್ಲುವಂತ ಗಟ್ಟಿ ಹೆಂಗಸು. ಮಕ್ಕಳಿಗೂ ಒಂದು ಹಂತದ ತನಕ ಅದೇ ಚಾಲ್ತಿಯಲ್ಲಿದ್ದು, ಕಾಲಾಂತರದಲ್ಲಿ ಬದಲಾದದ್ದು ಬೇರೆ ವಿಷಯ.ಈಗೀಗ ಮಕ್ಕಳು, ಮೊಮ್ಮಕ್ಕಳು ಮಾತ್ರೆ, ಸಿರಪ್ಪುಗಳಿಗೆ ಶರಣಾದಾಗ ಯಾಕೋ ಗಲಾಟೆ ಮಾಡದೆ 'ಅವರವರ ಹಣೆಪಾಡು, ಈಗಿನವಕ್ಕೆ ತಿನ್ನುವ ಚಪಲವೂ ಇಲ್ಲ; ಅರಗಿಸಿಕೊಳ್ಳೋ ಯೋಗ್ಯತೆಯೂ ಇಲ್ಲ' ಎಂದು ಸುಮ್ಮನೆ ಬಿಟ್ಟಿದ್ದಾಳೆ.


ಇಂಥಹ ನಮ್ಮ ಸೀತಕ್ಕನಿಗೆ ಈಗೊಂದು ವಾರದ ಕೆಳಗೆ ಬೆಳಗ್ಗೆ ಏಳುವಾಗಲೇ ಏಕೋ ಎದೆಯಲ್ಲಿ ಛುಳ್ ಛುಳ್ ಎಂದು ನೋವು ಆರಂಭವಾಗಿ ಒದ್ದಾಡಿಹೋಗುವಂತಾಯಿತು. ಎಂದೂ ಹೀಗೆ ನರಳದ ಅಮ್ಮ ನೋವಿನಿಂದ ಕಂಗೆಟ್ಟಾಗ ಮಕ್ಕಳು ಅವಳ ವಿರೋಧವನ್ನೂ ಲೆಕ್ಕಿಸದೆ ಒಂದು ದೊಡ್ಡ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗೆ ಕೊಂಡೊಯ್ದು ತಕ್ಷಣ ಸೇರಿಸಿದ್ದೇ. ಎದೆನೋವು ಎಂದ ತಕ್ಷಣ ಆಸ್ಪತ್ರೆಯವರೂ ಸೀದಾ ಐ.ಸಿ.ಯು ಒಳಗೆ ಹಾಕಿದ್ದೇ. ಸ್ಪೆಷಾಲಿಟಿ ಹಾಸ್ಪಿಟಲ್ ಎಂದ ಮೇಲೆ ಕೇಳಬೇಕೆ, ಒಂದಾದ ಮೇಲೊಂದು ಪರೀಕ್ಷೆಯನ್ನು ಮೂರು ದಿನಗಳ ಕಾಲ ಸಾಂಗವಾಗಿ ನೆರವೇರಿಸಿದರು. ಮಾತೃಭಕ್ತಿಯನ್ನು ನಿರೂಪಿಸಲು ಅವಕಾಶ ಸಿಕ್ಕಿರುವಾಗ ಅದನ್ನು ಕಳೆದುಕೊಳ್ಳಲು ಇಚ್ಛಿಸದೆ ಮಕ್ಕಳೂ ಆಸ್ಪತ್ರೆಯಲ್ಲಿ ಹೇಳಿದ ಎಲ್ಲಾ ಪರೀಕ್ಷೆಗಳನ್ನೂ ಮಾಡಿಸಿ ಕೃತಾರ್ಥರಾದರು. ಸೊಸೆಯರಿಗೂ ಒಬ್ಬರೊಂದಿಗೆ ಒಬ್ಬರು ಹೇಳಿಕೊಳ್ಳಲಾಗದ ಏನೋ ನಿರೀಕ್ಷೆ. ಯಾವುದೋ ಒಂದು ಖಾಯಿಲೆಯೆಂದು ಹೆಸರಿಟ್ಟರೆ ಆ ನೆವದಲ್ಲಿ ಒಂದು ವಿಲ್ಲನ್ನು ಮಾಡಿಸಿ ತಮ್ಮ ಭಾಗಕ್ಕೆ ಬರುವುದಾದರೂ ಏನು ಎಂದು ನಿಶ್ಚಿಂತೆಯಾಗಬಹುದು ಎನ್ನುವ ಒಂದು ದೂರದ ಆಸೆ. ದಿನವೂ ಗಂಡಂದಿರು ಮನೆಗೆ ಬಂದ ತಕ್ಷಣವೇ "ಏನೂಂತ ಹೇಳಿದ್ರು?" ಎನ್ನುವ ಪ್ರಶ್ನೆಗೆ "ಇನ್ನೂ ಏನೂ ಗೊತ್ತಾಗಿಲ್ಲ" ಎನ್ನುವ ಉತ್ತರ ಬಂದಾಗ "ಏನೋ ದೊಡ್ಡ ಖಾಯಿಲೆಯೇ ಇರಬಹುದು" ಎಂದು ತಮ್ಮ ತಮ್ಮಲ್ಲೇ ತೀರ್ಮಾನಕ್ಕೂ ಬಂದರು. ಸೀತಕ್ಕನಿಗೋ ಆಸ್ಪತ್ರೆಯ ಊಟ, ತಿಂಡಿ, ಸರಿಹೊಂದದೆ "ಇದು ಬರಿ ವಾಯು ಅಷ್ಟೇ. ಶುಂಠಿ ಲೇಹ್ಯ, ಜೀರಕಾರಿಷ್ಠ ನಾಕು ದಿನ ತೊಗೊಂಡರೆ ಸರಿಹೋಗತ್ತೆ ನನ್ನ ಮನೆಗೆ ಕಳಿಸಿ" ಎಂದು ಆಕೆ ಹಲುಬಿದರೂ, ಆಸ್ಪತ್ರೆಯವರಿಗೆ ಒಬ್ಬ ಪೇಶೆಂಟಿನಿಂದ ವಸೂಲಾಗುವಷ್ಟು ವಸೂಲಾಗದೆ ಕಳಿಸುವುದಾದರೂ ಹೇಗೆ! ದಿನಕ್ಕೊಂದು ಹೊಸ ಪರೀಕ್ಷೆಯನ್ನು ಮಾಡುತ್ತಾ ಸೀತಕ್ಕನಿಗೆ ಏನೋ ಆಗೇ ಬಿಟ್ಟಿದೆ ಎನ್ನುವ ಭ್ರಮೆಯನ್ನು ಮಕ್ಕಳಿಗೆ ಹುಟ್ಟಿಸಿದರು. ಆದರೆ ಸೀತಕ್ಕ ಅಂತಹ ಭ್ರಮೆಗೆ ಸಿಗುವವಳೇ?!

ಎಷ್ಟೆಂದು ಸಹಿಸಿಕೊಂಡಾಳು. ಐದನೆಯ ದಿನ "ಇನ್ನೊಂದು ಗಂಟೆಯೊಳಗೆ ಇಲ್ಲಿಂದ ಕಳಿಸದಿದ್ದರೆ ಡ್ರಿಪ್ ಬಾಟಲನ್ನು ಕಿತ್ತುಹಾಕಿ ನಾನೇ ಎದ್ದುಹೋಗ್ತೀನಿ"

ಎಂದುಐ.ಸಿ.ಯು.ನಲ್ಲೇ ಒಂದು ದೊಡ್ಡ ಆವಾಜ್ ಹಾಕಿದಾಗ ಇದ್ದ ಬದ್ದ ಸಿಸ್ಟರುಗಳೆಲ್ಲಾ ಓಡಿ ಹೋಗಿ ಡಾಕ್ಟರನ್ನು ಕರೆದುಕೊಂಡು ಬಂದು ಅವರಿಂದ ಹೇಳಿಸಲು ಪ್ರಯತ್ನಿಸಿದರು. ಡಾಕ್ಟರದೇನು ಭಯವೇ ಸೀತಕ್ಕನಿಗೆ "ನೋಡಪ್ಪಾ ನೀನು ನನ್ನ ಮೊಮ್ಮಗನ ವಯಸ್ಸಿನೋನು. ನಂಗೇನೂ ಆಗಿಲ್ಲ ಅಂತ ನಂಗೂ ಗೊತ್ತು, ನಿಂಗೂ ಗೊತ್ತು. ಸುಮ್ನೆ ಕಳಿಸಿದ್ಯಾ ಸರ್ಹೋಯ್ತು. ಇಲ್ಲಾಂದ್ರೆ ಎದ್ದು ಹೋಗ್ತೀನಷ್ಟೇ" ಎಂದಾಗ ಆ ಎಳೆಡಾಕ್ಟರೂ ಸ್ವಲ್ಪ ಹೆದರಿ "ಆಯ್ತು ಬಿಲ್ ಸೆಟ್ಲ್ ಮಾಡೋಕೆ ಅರ್ಧ ಗಂಟೆ ಟೈಂ ಕೊಡಿ. ಮುಂದೇನಾದ್ರೂ ಹೆಚ್ಚು ಕಮ್ಮಿಯಾದ್ರೆ ನನ್ ಜವಾಬ್ದಾರೀನೇ ಅಂತ ನಿಮ್ಮಗ ಬರ್ಕೊಟ್ಟು ಕರ್ಕೊಂಡು ಹೋಗ್ಲಿ" ಎಂದು ಹೆದರಿಸಲು ನೋಡಿದರು. ಹೆದರುವ ಪಿಂಡವೇ ಸೀತಕ್ಕ! "ಅಯ್ಯೋ ಸತ್ರೆ ಸಾಯ್ತೀನೇಳಯ್ಯಾ. ತೊಂಭತ್ತೂರು ವರ್ಷದ ಮುದ್ಕಿ ಸತ್ರೆ ಮನೇಲಿ ಹಬ್ಬ ಮಾಡ್ಕೊಂಡು ತಿಂತಾರೆ. ಅಳೋರ್ಯಾರು. ಆಯಸ್ಸಿರೋ ತಂಕ ಯಮಧರ್ಮನ ಭಂಟ್ರೂ ಹತ್ರ ಬರಲ್ಲ" ಎಂದು ಪಕ್ಕದಲ್ಲಿದ್ದ ಸಿಸ್ಟರಿಗೆ "ನೀನೇ ಈ ಸೂಜಿ ತೆಗೀತೀಯಾ ನಾನೇ ತೆಗೀಲಾ?" ಜಬರಿಸಿದಳು. ತನ್ನ ಮುಖವನ್ನೇ ನೋಡಿದವಳಿಗೆ ಡಾಕ್ಟರ್ "ತೆಗೆದುಬಿಡಮ್ಮ. ಡಿಸ್ಚಾರ್ಜ್ ಮಾಡಿಬಿಡೋಣ. ಅವರ ಮಗನ ಹತ್ರ ಸೈನ್ ಮಾಡಿಸ್ಕೋತೀನಿ ಅವ್ರದ್ದೇ ಜವಾಬ್ದಾರೀಂತ" ಇನ್ನೂ ಮಾತೇ ಮುಗಿಸಿರಲಿಲ್ಲ, "ಕೊಡಯ್ಯಾ ಆ ಪೇಪರ್ರು, ಮಗ ಯಾಕೆ? ನಾನೇ ಸೈನ್ ಮಾಡ್ಕೊಡ್ತೀನಿ" ಎಂದು ದಬಾವಣೆ ಮಾಡಿ ಅಂತೂ ಡಿಸ್ಚಾರ್ಜ್ ಮಾಡಿಸಿಕೊಂಡು ಮನೆಗೆ ಹೊರಟಳು.

ಬೆಳಗ್ಗೆ ತಿಂಡಿ ತಿಂದು ಅತ್ತೆಗೇನಾಗಿರಬಹುದು ಎನ್ನುವ ಚರ್ಚೆಯಲ್ಲಿ ಮುಳುಗಿದ್ದ ಸೊಸೆಯರಿಗೆ ಕಾರಿನ ಹಾರ್ನ್ ಕೇಳಿ ಅಚ್ಚರಿಯಾಯಿತು. ಊಟ ಮಾಡಕ್ಕೆ ಒಂದು ಗಂಟೆಗೆ ಬರಬೇಕಾದ ಆಸ್ಪತ್ರೆ ಡ್ಯೂಟಿಯಲ್ಲಿದ್ದ ಗಂಡಸರು ಈಗ್ಲೇ ಬಂದಿದ್ದು ಅಂದ್ರೆ 'ಏನಾದ್ರೂ ಆಗೇ ಹೋಯ್ತೆ?!' ಎಂದು ಒಬ್ಬರು ಇನ್ನೊಬ್ಬರ ಮುಖದಲ್ಲಿ ಉತ್ತರ ಹುಡುಕಿ ಏನೋ ನಿರೀಕ್ಷೆಯಿಂದ ತಲೆಬಾಗಿಲಿಗೆ ಬಂದರು. ಕಾರಿನಿಂದಿಳಿದ ಸೀತಕ್ಕ ಮದುವೆ ಮನೆಯಿಂದ ಬಂದಂತೆ ಸಂಭ್ರಮದಿಂದ ಗೇಟು ತೆಗೆಯುತ್ತಾ ಅಚ್ಚರಿಯಿಂದ ನೋಡುತ್ತಿದ್ದ ಸೊಸೆಗೆ "ಬಿಸಿಯಾಗಿ ಚೆನ್ನಾಗಿ ಕಾಯಿತುರಿ ಹಾಕಿ ಒಂದಿಷ್ಟು ಉಪ್ಪಿಟ್ಟು ಮಾಡೋಗು, ನಾಕ್ದಿನದಿಂದ ಸಪ್ಪಸಪ್ಪಗಿನ ಊಟ ತಿಂಡಿ ತಿಂದು ನಾಲಿಗೆ ಕೆರ ಆದಂಗಾಗಿದೆ" ಎನ್ನುತ್ತಾ ಬಲಗಾಲಿಟ್ಟು ಗೃಹಪ್ರವೇಶ ಮಾಡಿದರು. ಮುಖ ಮುಖ ನೋಡಿಕೊಂಡ ಸೊಸೆಯರು ಮಾತಿಲ್ಲದೆ ಅಡುಗೆಮನೆಗೆ ಸರಿದರು. ■



# ನನ್ನ ವಿಮಾನ ಪ್ರಯಾಣದ ಅವಾಂತರ!!

**● ಜಿ.ಎಸ್. ರಾಮಸ್ವಾಮಿ**

ಬೆಂಗಳೂರಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಹೊಸದಾಗಿ ನಿರ್ಮಾಣವಾಗಿ ಸುಮಾರು ದಿನಗಳು ಕಳೆದಿದೆ. ಪ್ರಯಾಣಿಕರನ್ನು ವಿಮಾನ ನಿಲ್ದಾಣಕ್ಕೆ ತಲುಪಿಸುವುದು ಹಾಗೂ ಕರೆತರುವುದು ನನಗೆ ಸರ್ವೇಸಾಮಾನ್ಯ. ಅದರಲ್ಲೂ ನನ್ನ ಮಗಳು ಕೊಲಕತ್ತೆಯಲ್ಲಿ ಲಾ ಕಲಿಯುತ್ತಿದ್ದು, ಅವಳಿಗೆ ಮೂರು ತಿಂಗಳಿಗೊಮ್ಮೆ ಬೆಂಗಳೂರಿನ ಹವಾ ಹಾಗೂ ಅಮ್ಮನ ಅಡುಗೆ ಸೇವನೆಗೆ ಬರುತ್ತಿದ್ದಳು. ಆಗೆಲ್ಲಾ ನನ್ನ ವಾಹನ ಚಾಲಕಸೇವೆ ನಡೆಯುತ್ತಲೇ ಇತ್ತು. ನಮ್ಮದು ದೊಡ್ಡ ಕುಟುಂಬ. ಯಾರಾದರೂ ಬರುತ್ತಲೇ ಇರುತ್ತಾರೆ. ಕೊರೊನ ಗಲಾಟೆಯಲ್ಲಿ ಈಗ ಸ್ವಲ್ಪ ವಿರಳವಾಗಿದೆ.

ಮುಖ್ಯ ವಿಷಯವೆಂದರೆ ಇಷ್ಟೂ ಜನರನ್ನು ವಿಮಾನ ನಿಲ್ದಾಣದಿಂದ ಮನೆಗೆ, ಮನೆಯಿಂದ ವಿಮಾನ ನಿಲ್ದಾಣಕ್ಕೆ ಸಾಗಿಸುವ ಸೇವೆಯಲ್ಲಿ ನನಗೂ ಈ ನಿಲ್ದಾಣದಿಂದ ಹಾರುವ ಆಸೆ ಕಾಡುತ್ತಿತ್ತು. ವಿಮಾನಯಾನ ಹೊಸದಲ್ಲ. ಆದರೂ ಹೊಸ ನಿಲ್ದಾಣದಿಂದ ಹೋಗಬೇಕೆಂಬಾಸೆ.

ನನ್ನ ಮಗಳ ಘಟಿಕೋತ್ಸವ ಸಮಾರಂಭದಲ್ಲಿ ಪಾಲ್ಗೊಳ್ಳಲು ಕೊಲ್ಕತ್ತಾಗೆ ಹೋಗುವ ಅವಕಾಶ ಒದಗಿ ಬಂತು. ನನ್ನ ಕುವರಿಯು ಮುಂಬಯಿಂದ ಕೊಲಕತ್ತೆಗೆ ಬರುವುದೆಂದೂ, ನಾನು ಬೆಂಗಳೂರಿನಿಂದ ಕೊಲಕತ್ತೆಗೆ ಹೋಗುವುದೆಂದೂ ನಿಶ್ಚಯವಾಯಿತು. ಅಂತೂ ನಾನು ಹೊಸ ವಿಮಾನನಿಲ್ದಾಣದಿಂದ ಪ್ರಯಾಣಿಸುವ ದಿನ ಬಂತು.

ನನ್ನ ವಿಮಾನ ಬೆಳಿಗ್ಗೆ 6 ಗಂಟೆಗೆ ಹೊರಡುವುದಿತ್ತು ನಾನು 4 ಗಂಟೆಗೆ ಎದ್ದು ಉಬರ್ ಕರೆಸಿ 5 ಗಂಟೆಗೆ ಮುಂಚೆಯೇ ನಿಲ್ದಾಣ ತಲುಪಿದೆ. ಚೆಕ್ ಇನ್ ನಡೆದು ವಿಮಾನವನ್ನೇರಿ ಕುಳಿತದ್ದೂ ಆಯಿತು. ವಿಮಾನದ ಬಾಗಿಲು ಇನ್ನೇನು ಮುಚ್ಚಬೇಕು. ಆಗ ನನ್ನ ಮಗಳು ಮುಂಬಯಿಂದ ಕರೆಮಾಡಿದಳು.

'ಅಪ್ಪಾ, ನನ್ನ ಪ್ರಯಾಣ ರದ್ದಾಗಿದೆ. ಮಲ್ಯನ ವಿಮಾನಗಳೊಂದೂ ಹೋಗುತ್ತಿಲ್ಲ ಮತ್ತು ಬೇರೆ ಯಾವುದರಲ್ಲೂ ಸೀಟು ಸಿಗುತ್ತಿಲ್ಲ' ಎಂದಳು.

ಮಗಳು ಬರುತ್ತಿಲ್ಲ, ನಾನು ಹೋಗುತ್ತಿರುವುದು ಅವಳ ಘಟಿಕೋತ್ಸವಕ್ಕೆ. ಈಗ ಅವಳು ಹೋಗುವುದಿಲ್ಲ, ಅಂದರೆ ನಾನು ಒಬ್ಬನೇ ಕೊಲಕತ್ತೆಗೆ ಹೋಗಿ ಏನು ಮಾಡುವುದು? ಕ್ಷಣಾರ್ಧದಲ್ಲಿ ನಿರ್ಣಯ ಮಾಡಿದೆ.

ತಕ್ಷಣ ನನ್ನ ಚಿಕ್ಕ ಕೈಚೀಲ (ಬ್ಯಾಕ್-ಪ್ಯಾಕ್) ಕೈಗೆತ್ತಿಕೊಂಡು ಬಾಗಿಲೆಡೆಗೆ ದೌಡಾಯಿಸಿದೆ. ಧಡಧಡನೆ ಕೆಳಗಿಳಿದು. ನಾನು ಹೋಗುವುದಿಲ್ಲ ವಿಮಾನ ಹೋಗಲಿ ಎಂದೆ.

ವಿಮಾನನಿಲ್ದಾಣದ ಸಿಬ್ಬಂದಿ ನನ್ನನ್ನು ಹತ್ತಿರದಲ್ಲಿ ಹೋಗುತ್ತಿದ್ದ ವಾಹನದಲ್ಲಿ ಹತ್ತಿಸಿ, ನಿಲ್ದಾಣನಿರೀಕ್ಷಕರ ಕೊಠಡಿಗೆ ಸೇರಿಸಲು ವ್ಯವಸ್ಥೆಮಾಡಿದರು. ಅಲ್ಲಿಂದ ಶುರು ವಿಚಾರಣೆ, ನೀವು ಯಾಕೆ ಹೋಗುತ್ತಿಲ್ಲ? ನಿಮಗೆ ಫೊನಾಯಿಸಿದವರ ನಂಬರ್ ಕೊಡಿ, ಅವರು ನಿಮಗೇನಾಗಬೇಕು. ಹೀಗೆ ಹತ್ತಾರು ವಿಚಾರಣೆ. ಅದೂ

ಒಬ್ಬರಾದಮೇಲೆ ಒಬ್ಬರು, ನಾಕು ಜನ.

ಇವರ ಪ್ರಶ್ನಾವಳಿಗಳೆಲ್ಲ, ವಿಮಾನ ಕೊಲಕತ್ತೆಯಲ್ಲಿ ಇಳಿಯುವವರೆಗೆ ನನ್ನನ್ನು ಅಲ್ಲಿ ಹಿಡಿದಿಡುವ ಪರಿ ಎನ್ನುವುದು ಮೊದಲೇ ಅರ್ಥವಾದರೂ, ನಾನೇನೂ ಮಾಡುವಂತಿರಲಿಲ್ಲ.

3 ಘಂಟೆ ಕಳೆದ ಮೇಲೆ ವ್ಯವಸ್ಥಾಪಕನು ನೀವಿನ್ನು ಹೋಗಬಹುದು ಎಂದನು. ಅಂತೂ ಇಂತೂ ಕುಂತಿಮಕ್ಕಳಿಗೆ ರಾಜ್ಯವಿಲ್ಲ, ನನಗೆ ಹೊಸ ನಿಲ್ದಾಣದಿಂದ ವಿಮಾನಪ್ರಯಾಣ ಇಲ್ಲವಾಯಿತು.

ಸುಮಾರು ಆರು ತಿಂಗಳವರೆಗೆ ಈ ಘಟನೆ  ನಮ್ಮ ಕುಟುಂಬದವರ ಮನೋರಂಜನೆಗೆ ಒಳ್ಳೆಯ ವಿಷಯವಾಗಿತ್ತು!!

ಇದಾದ ಕೆಲವು ವರ್ಷಗಳ ನಂತರ ನನ್ನ ನಾದಿನಿಯ ಮಗಳ ಮದುವೆ ನಿಶ್ಚಯವಾಯ್ತು. ಮಡದಿಯ ಒಬ್ಬಳೇ ತಂಗಿಯ ಒಬ್ಬಳೇ ಮಗಳ, ಅಮೇರಿಕದಲ್ಲಿ ನಡೆಯುವ ಮದುವೆಗೆ ನಾನು ಹೋಗದಿದ್ದರೆ ಹೇಗೆ?

ಆಯಿತು, ಚೆನ್ನೈ ವೀಸಾ ಪಯಣ, ಟಿಕೀಟು ಬುಕ್ಕಿಂಗ್ ನೋಡುತ್ತಿದ್ದಂತೆ ಪ್ರಯಾಣದ ದಿನವೂ ಬಂತು. ಅಂತೂ ಈ ಸಾರಿ ಹೊಸ ನಿಲ್ದಾಣದಿಂದ ಹೊರಡುವುದು ಗ್ಯಾರಂಟಿ.

ರಾತ್ರಿ ಪ್ರಯಾಣ, ಸಿಂಗಾಪುರದ ಹಾದಿಯಲ್ಲಿ ಕ್ಯಾಲಿಫೋರ್ನಿಯಾಗೆ. ನಾನು ನನ್ನ ಪತ್ನಿ ನಿಲ್ದಾಣ ತಲುಪಿದೆವು. ಅಲ್ಲಿ ಇಮಿಗ್ರೇಶನ್ ಬೂತ್ನಲ್ಲಿ ನಮ್ಮಿಬ್ಬರನ್ನೂ ನಿಲ್ಲಿಸಿ, ನೀವು ಹೇಗೆ ಹೋಗುತ್ತೀರಿ? ನಿಮ್ಮನ್ನು ಕಳಿಸಲು ಆಗುವುದಿಲ್ಲ ಎಂದರು.

ಅರೇ, ಇದೇನಿದು? ಪಾಸ್ಪೋರ್ಟ್ ಕೊಟ್ಟಿರುವವರೇ ಹೀಗೆ ಹೇಳಿದರೆ ಹೇಗೆ? ಆಗ ಗೊತ್ತಾಯ್ತು ನಮ್ಮಿಬ್ಬರ ರಹದಾರಿ, ಕೈಯಲ್ಲಿ ಬರೆದಿದ್ದು ಅಂತ. ನಮ್ಮ ರಹದಾರಿ 18 ವರುಷ ಹಿಂದಿನದು. ಈಗೆಲ್ಲಾ ಛಾಪುಮಾಡಿರುತ್ತಾರೆ ಹಾಗೂ ಅದನ್ನು ಯಂತ್ರಗಳಲ್ಲಿ ಓದಬಹುದು. (ಈ ವಿಷಯವಾಗಿ ಸುತ್ತೋಲೆ ಬಂದು ಒಂದೂವರೆ ವರುಷವಾಗಿದೆ.) ಅವರುಗಳು ಹತ್ತು ನಿಮಿಷ ವಿಚಾರಮಾಡಿ 'ನಾವು ಇಲ್ಲಿಂದ ಕಳಿಸುತ್ತೇವೆ ಅಲ್ಲಿಯವರು ವಾಪಸ್ ಕಳಿಸಬಹುದು ' ಎಂದು ನಮ್ಮನ್ನು ವಿಮಾನದ ಕ್ಯೂಗೆ ತಳ್ಳಿದರು.

ಸಿಂಗಾಪುರ ತಲುಪಿದ್ದೇನೋ ಆಯಿತು. ಅಲ್ಲಿ 11 ಘಂಟೆ ಬ್ರೇಕ್, ಏನು ಮಾಡುವುದು? ಅತ್ತಿತ್ತ ನೋಡಿದಾಗ 'ಫ್ರೀ ಸಿಂಗಾಪುರ ದರ್ಶನ' ಫಲಕ ಕಾಣಿಸಿತು. ತಕ್ಷಣ ಆ ಕ್ಯೂನಲ್ಲಿ ನಿಂತೆವು. ಅದೂ ನಿಶ್ಚಯವಾಯಿತು. ಸರಿಯಾಗಿ 8 ಘಂಟೆಗೆ ಇಲ್ಲಿಯೇ ಬನ್ನಿ ಎಂದರು, ಸರಿ ತಿಂಡಿ ತಿಂದು ಸರದಿಯ ಸಾಲಿನಲ್ಲಿ ನಿಂತೆವು. ಅಲ್ಲಿಂದ ಇಮ್ಮಿಗ್ರೇಶನ್ ಕ್ಯೂ! ನಮ್ಮಿಬ್ಬರ ರಹದಾರಿ ತಕರಾರು ಮತ್ತೆ!! ಆ ಅಧಿಕಾರಿಗೆ, ಪಾಪ, ನಮ್ಮವರ ಬರವಣಿಗೆ ಓದುವುದೂ ಕಷ್ಟ! ಕಷ್ಟಪಟ್ಟು ಮುಗಿಸಿ 'ಮತ್ತೆ ಹೀಗೆ ಬಂದರೆ ನಾನು ನಿಮ್ಮನ್ನು ಸಿಂಗಾಪುರಕ್ಕೆ ಬಿಡುವುದೇ ಇಲ್ಲ" ಎಂದು ಧಮ್ಕಿ ಹಾಕಿ, ಫ್ರೀಟ್ರಿಪ್ ಕ್ಯೂಗೆ ಹೊತ್ತುಹಾಕಿದ.

ಸಂಜೆಯವರೆವಿಗೆ ಸಿಂಗಾಪುರ ದರ್ಶನವಾಯಿತು. ಅಲ್ಲಿಂದ ಹಾಂಗ್–ಕಾಂಗ್. ಅಲ್ಲಿ ಒಂದುವರೆ ಘಂಟೆ ಕಾಲಾಡಿಸಲು ಅವಕಾಶ, ಮತ್ತೆ ಪಯಣ.

ಸ್ಯಾನ್-ಫ್ರಾನ್ಸಿಸ್ಕೊ ನಿಲ್ದಾಣದಲ್ಲಿ ನಮ್ಮ ತಪಾಸಣೆ. ಎಲ್ಲರಿಗೂ ಒಂದೇ ಸರದಿಯ ಸಾಲು ನಮ್ಮ ಸರದಿ ಬರುವ ವೇಳೆಗೆ 150 ನಿಮಿಷ. ಬಂದಾಗ ನಮಗೆ ಬೇರೆಯೇ ಕೌಂಟರ್, ಯಂತ್ರ ಓದದ ರಹದಾರಿ ಹೊಂದಿದ್ದವರು ನಾವಿಬ್ಬರೇ! ಏನ್ಸಾಮೀ ನೀವೇ ಬಕೋರ್ಂಡು ಬಂದ್ಬಿಟ್ರಾ? ನಿಂ ಹೆಸರು ಸರಿಯಾಗಿ ಬಿಡಿಸಿ ಒಂದೊಂದೇ ಅಕ್ಷರ ಹೇಳಿ ಅಂದ. ಎಲ್ಲಾ ಆದಮೇಲೆ 'ಸುಸ್ವಾಗತ' ಹೇಳಿ ಹೊರಗೆ ಬಿಟ್ಟ.

ಸದ್ಯ ಬಂದೆವಲ್ಲಾ!! 50 ದಿನ ಮದುವೆಯ ತಯಾರಿ ಸಂಭ್ರಮ. ಎಲ್ಲ ಮುಗಿಯಿತು. ನನ್ನ ನಾದಿನಿ ಹಾಗು ಷಡ್ಡ ನಮಗಾಗಿ 4 ದಿನಗಳ ಸಂಚಾರ ಕಾರ್ಯಕ್ರಮವನ್ನು ಏರ್ಪಡಿಸಿದ್ದರು. ಅದರಲ್ಲಿ ಸೀಯಾಟಲ್‌ಗೆ ವಿಮಾನದ ಮೂಲಕ ತೆರಳಿ ಅಲ್ಲಿಂದ ವಾಪಸ್ಸು ಬಸ್ಸಿನಲ್ಲಿ ಬರುವ ಕಾರ್ಯಕ್ರಮ. ಯಥಾ ಪ್ರಕಾರ 2 ತಾಸು ಮುಂಚೆ ವಿಮಾನ ನಿಲ್ದಾಣಕ್ಕೆ ಹೋದೆವು. ನನ್ನ ಪತ್ನಿ ಸ್ವಲ್ಪ ಮುಂದೆ ಹೋಗಿ ಸೆಕ್ಯೂರಿಟಿ ಮಾಡಿಸಿಕೊಂಡು ಕಾಯುತ್ತೇನೆಂದು ಹೋದಳು. ಹತ್ತು ನಿಮಿಷದಲ್ಲಿ ನನಗೆ 'ಬೇಗ ಬಾ' ಎಂದು ಕರೆ ಬಂತು. ಇದೇನಪ್ಪಾ ಎಂದು ಓಡಿದೆ.

ಅಲ್ಲಿ ಸೆಕ್ಯೂರಿಟಿಯಲ್ಲಿ ನನ್ನ ರಹದಾರಿ ಕೊಟ್ಟರೆ, 'ನಿಮ್ಮದೂ ಇದೇ ಕಥೆನಾ' ಎಂದ. ಸಿಂಗಾಪುರದಂತೆ ಇಲ್ಲಿಯೂ ಅದೇ ತಕರಾರು. ಪಾಪ, ಎಷ್ಟು ಕಷ್ಟ, ನಮ್ಮವರ ಬರವಣಿಗೆ ನಮಗೆ ಚೆನ್ನಾಗಿ ಕಂಡರೂ ಓದುವ ಅಭ್ಯಾಸವೇ ಬಿಟ್ಟುಹೋಗಿರುವವರಿಗಂತೂ ಹಿಂಸೆ. 'ಇಲ್ಲಿ ನಿಲ್ಲಿ, ನಾನು ನನ್ನ ಬಾಸ್ ಹತ್ತಿರ ಕೇಳಿಬರುತ್ತೇನೆ' ಎಂದು ಒಳಗೆ ಹೋದವನು ಹತ್ತು ನಿಮಿಷವಾದ ಮೇಲೆ ಬಂದು ಇಬ್ಬರ ರಹದಾರಿಯನ್ನು ಆಮೂಲಾಗ್ರವಾಗಿ ಕ್ಸೆರಾಕ್ಸ್ ಮಾಡಿಕೊಂಡು ಇಟ್ಟುಕೊಂಡು, ನಮ್ಮನ್ನು ಹೋಗಲು ಬಿಟ್ಟ.

ಇದಾದಮೇಲೆ ಎಲ್ಲೂ ತಡೆಯಿಲ್ಲದೆ ಬಂದು ನಮ್ಮೂರು ಸೇರಿದೆವು. ಬಂದೊಡನೆಯೇ ರಹದಾರಿ ರಿಪೇರಿ (ಅಲ್ಲ ಹೊಸದೇ) ಆಯಿತು.

■

---

# ಕಿರು ಕಿರು ಕಿರುಗತೆಗಳು

**ಇಂಟರ್‌ನೆಟ್‌ನಿಂದ ಹಾರಿಸಿದ್ದು**

ಶ್ರೀಮಂತ ದಂಪತಿಗಳಿಗೆ ಹುಟ್ಟಿದ ಈ ಮಗು ಅದೃಷ್ಟವಂತ ಎಂದು ನೆರೆ ಹೊರೆ ಖುಷಿ ಪಟ್ಟರು
ಸ್ವರ್ಗದಲ್ಲೆಲ್ಲೋ ಇನ್ನೂ ಜಗತ್ತೇ ನೋಡಿರದ ಮೂರು ಹೆಣ್ಣು ಕೂಸುಗಳು ಕಣ್ಣೀರು ಹಾಕಿದವು

***

"ನೀನು ನನ್ನ ಜೀವನವನ್ನೇ ಹಾಳು ಮಾಡಿದೆ, ನಾನು ಸಂಸ್ಥೆಯ ಉನ್ನತ ಅಧಿಕಾರಿ ಆಗುತ್ತಿದ್ದೆ... " ಅವಳ ಯೋಚನೆ ಹೀಗಿತ್ತು.
ಪುಟ್ಟ ಕೂಸು ಅವಳ ಕಿರು ಬೆರಳನ್ನು ಗಟ್ಟಿಯಾಗಿ ಹಿಡಿಯಿತು.....
ಒಬ್ಬಳು ತಾಯಿಯ ಜನ್ಮವಾಯಿತು

# ರೀ ನೀರು ಹಾಕ್ಕೊಳ್ಳೀ..

**ಎನ್. ಶಂಕರರಾವ್**

ಅಭ್ಯಂಜನ ಸ್ನಾನ ನಮ್ಮ ಸಂಸ್ಕಾರದ/ ಸಂಸಾರದ ಅವಿಭಾಜ್ಯ ಅಂಗ.

ಚಿಕ್ಕ ವಯಸ್ಸಿನಿಂದಲೂ ಅಮ್ಮ ಹಬ್ಬ ಹರಿದಿನಗಳಲ್ಲಿ, ಹುಟ್ಟುಹಬ್ಬದ ಸಂಭ್ರಮದಲ್ಲಿ ಎಣ್ಣೆ ನೀರು ಹಾಕುತ್ತಿದ್ದರು.

ನಂತರ ಹೆಣ್ಣು ಕೊಟ್ಟ ಮಾವನ ಮನೆಯಲ್ಲಿ ಸಹ ಮದುವೆಯಾದ ಕೆಲವು ವರ್ಷಗಳು ದೀಪಾವಳಿ ಹಬ್ಬದಲ್ಲಿ ಈ ರಾಜೋಪಚಾರ ನಡೆಯಿತು.

ನಂತರ ಕಾಲಾಯತಸ್ಮೈ ನಮ:

ಹರಳೆಣ್ಣೆ ಹಚ್ಚಿ ಕೊಳ್ಳುವುದು ಕಡಿಮೆಯಾಯಿತು.

ಕಾರಣ ಹಚ್ಚೋರೂ ಕಡಿಮೆ, ತಲೆ ಉಜ್ಜಿಕೊಳ್ಳೋಕೆ ಫ್ರೋಜನ್ ಶೌಲ್ಡರ್!

ಎಣ್ಣೆ ಸೀಗೆಕಾಯಿ ತರಹ ಗಂಡ–ಹೆಂಡತಿ ಪ್ರತಿಮನೆಯಲ್ಲೂ ಇದ್ದಾಗ, ಇನ್ನು ಇದಕ್ಕೆ ಏನು ಕೆಲಸ!

ಸರಿ ವಾರಕ್ಕೆ ಒಂದು ಬಾರಿ ಕೊಬ್ಬರಿ ಎಣ್ಣೆ ಹಚ್ಚಿಕೊಂಡು ಶ್ಯಾಂಪೂ ಸ್ನಾನ ಶುರುವಾಯಿತು.

ಕೆಲಸಕ್ಕೆ ಹೋಗುತ್ತಿದ್ದಾಗ ತುಂಬಾ ಬ್ಯುಸಿ. ಯಾರು ಮನೆಯಲ್ಲಿ "ಕಮ್ಮೋಡ್" ಸ್ವಚ್ಛತೆ ಮಾಡುತ್ತಾರೆ, ಎಂದು ಗಮನಿಸಿಯೇ ಇರಲಿಲ್ಲ. ಪಾಪ ಹೆಂಡತಿದೇ ಎಲ್ಲಾ ಜವಾಬ್ದಾರಿ.

ಈಗ ಕೆಲವು ವರ್ಷಗಳ ಹಿಂದೆ ನಿವೃತ್ತನಾದೆ. ಮನೆಯ ಕೆಲಸಗಳನ್ನು ಒಂದೊಂದಾಗಿ ನನಗೆ ಟ್ರಾನ್ಸಫರ್ ಮಾಡಿದಳು. ಮೊದಲು ಪ್ರೀತಿಯಿಂದ ನಂತರ ನಿಮಗೆ ಏನೂ ಕೆಲಸವಿಲ್ವಲ್ಲ ಸ್ವಲ್ಪ ಮಾಡಿ ಅಂತ!!

ಸರಿ ಈ ನಡುವೆ ರೀ ನೀವು ವಾರಕ್ಕೆ ಒಂದು ಬಾರಿ ನೀರು ಹಾಕ್ಕೊಳ್ಳಿ, ಮೈಕೈ ನೋವು ಎಲ್ಲಾ ಹೋಗುತ್ತೆಅಂತ ಹೇಳಿದಳು.

ನಾನು ಏನಪ್ಪಾ ಇಷ್ಟೊಂದು ಪ್ರೀತಿ ನನ್ಮೇಲೆ ಅಂತ ಖುಷಿ ಪಟ್ಟೆ!

ಆಮೇಲೆ ರೀ, ನೀರು ಹಾಕೊಳ್ಳಕ್ಕೆ ಮುಂಚೆ ಸ್ವಲ್ಪ ಎರಡೂ ಬಾತ್ರೂಂನ ಹಾರ್ಪಿಕ್ ಹಾಕಿ ಕ್ಲೀನ್ ಮಾಡಿಬಿಡ್ತೀರ ಪ್ಲೀಸ್, ಅಂದಳು! ಸರಿ ಅವಳು ಅಷ್ಟು ಕೇಳುತ್ತಿದ್ದಾಳೆ ಅಂತ ಶುರುಮಾಡಿದೆ.

ಕೆಲವು ಸಂಸ್ಥೆಗಳು ಈ ಕೆಲಸ ಮಾಡುತ್ತಾರೆ ಅಂತ ತಿಳಿದು, ಅದನ್ನು ಟ್ರೈ ಮಾಡಿದೆ.

ಅವರು ವರ್ಷಕ್ಕೆ ಮೂರು ಸಲ ಚೆನ್ನಾಗಿ ಕ್ಲೀನ್ ಮಾಡುತ್ತಾರೆ, ಆದರೆ ತುಂಬಾ ಹಣ ಖರ್ಚು.

ಸರಿ ಇದೆಲ್ಲಾ ವಾರಕ್ಕೆ ಒಂದು ಬಾರಿ ಆದರೆ ಮನಸ್ಸಿಗೆ ತೃಪ್ತಿ. ಈಗ ಅದು ನನಗೆ ವಹಿಸಿದ ಭಾನುವಾರದ ಕೆಲಸವಾಗಿದೆ.

ನಮ್ಮ ಗಾಂಧಿ ತಾತ ಶುರುಮಾಡಿದ ಪರಂಪರೆ, ಸ್ವಚ್ಛ ಭಾರತ್ ಆಂದೋಲನದ ಭಾಗ ಅಂದು ಕೊಂಡು ಮಾಡಕ್ಕೆ ಶುರುಮಾಡಿದೆ.

ಏನೇ ಆದರೂ ಒಮ್ಮೆ ಈ ಕೆಲಸ ಗಂಡಸರು ಮನೆಯಲ್ಲಿ ಮಾಡಿ ನೋಡಿ. ನಿಮ್ಮ ಈಗೋ ಎಲ್ಲಾ ಮಾಯವಾಗುತ್ತದೆ. ಭೂಮಿ ಮೇಲೆ ಕಾಲು ನಿಲ್ಲುತ್ತದೆ.

ಭಾನುವಾರ ಬೆಳಿಗ್ಗೆ ಪೇಪರ್ ಓದುತ್ತಾ ಕೂತಿದ್ದೆ ಮಡದಿಯ ಸುಂದರ ಧ್ವನಿ ಕೇಳಿಸಿತು...

‘ರೀ ಇವತ್ತು ನೀರು ಹಾಕ್ಕೊಳ್ಳಿ’ ....

■

# ನುಡಿಯಿತು ವೀಣೆ!

● ಚಿತ್ರಾ ರಾಮಚಂದ್ರನ್

"ಶಾಲು! ಇವತ್ತು ಫಾರಿನ್ ಕ್ಲಯೆಂಟ್ಸ್ ಜೊತೆ ವಿಡಿಯೋ ಕಾನ್ಫರೆನ್ಸ್ ಇದೆ! ಬರೋದು ರಾತ್ರಿ ಎಷ್ಟು ಹೊತ್ತಾಗತ್ತೋ ಏನೋ! ಇವತ್ತು ವಾಚ್ ಮ್ಯಾನ್ ಬೇರೆ ರಜ ಹಾಕಿದ್ದಾನೆ! ಒಬ್ಬಳೇ ಇರಲು ಭಯವಾದ್ರೆ ನಿನ್ನ ಫ್ರೆಂಡ್ ಮನೇಲಿ ಬಿಟ್ಟು ಹೋಗ್ತೀನಿ. ಬರೋವಾಗ ಪಿಕ್ ಅಪ್ ಮಾಡ್ಕೊಳ್ತೀನಿ. ಅಮ್ಮ ಇದ್ದಾಗ ಇಂತ ಯಾವ ಸಮಸ್ಯೆಯೂ ಇರ್ಲಿಲ್ಲ!" ಎಂದ ಹೇಮಂತ.

ನಿಜ! ಅತ್ತೆಯವರು ಇದ್ದಾಗ ಯಾವ ಸಮಸ್ಯೆಯೂ ಇರಲಿಲ್ಲ! ಮಗನನ್ನೂ ಸೊಸೆಯನ್ನೂ ಒಂದೇ ರೀತಿ ಕಾಣುವ ಅತ್ತೆಯರು ಎಷ್ಟು ಸೊಸೆಗಳಿಗೆ ಸಿಗುತ್ತಾರೆ? ಇನ್ನೂ ಹೇಳಬೇಕೆಂದರೆ ಅವಳನ್ನು ತನ್ನ ಮಗಳಂತೆಯೇ ಕಾಣುತ್ತಿದ್ದರು ಅತ್ತೆಯವರು. ಹೇಮಂತ ಮನೆಗೆ ಹಿಂದಿರುಗುವುದು ತಡವಾದಾಗ ಇಲ್ಲವೇ ಅವನು ವಿದೇಶಕ್ಕೆ ತೆರಳ ಬೇಕಾಗಿ ಬಂದಾಗ ಅತ್ತೆಯವರು ಮನೆಗೂ ಸೊಸೆಗೂ ಕಾವಲಾಗಿ ಜೊತೆಯಲ್ಲೇ ಇರುತ್ತಿದ್ದರು. ಅಂತಹ ಸಮಯಗಳಲ್ಲಿ ಅವರು ಕಚೇರಿಗಳಿಗೇನಾದರೂ ಒಪ್ಪಿಕೊಂಡಿದ್ದರೆ ಶಾಲಿನಿಯನ್ನೂ ಜೊತೆಯಲ್ಲೇ ಕರೆದೊಯ್ಯುತ್ತಿದ್ದರು.

"ಸೆಲೆಬ್ರಿಟಿಗಳೇ ಹೀಗೆ! ಇದೆಲ್ಲ ಬರಿ ತೋರಿಕೆಯ ಪ್ರೀತಿಯಷ್ಟೇ! ಎಲ್ಲ ಬರಿ ಷೋ!" ಅತ್ತೆಗೂ ತನಗೂ ಇದ್ದ ಸೌಜನ್ಯ ಸಂಬಂಧವನ್ನು ಸಹಿಸಲಾರದೆ ಅಣಕಿಸಿದವರು ಎಷ್ಟೋ ಮಂದಿ!

"ಏನೂ ಯೋಚ್ನೆ ಮಾಡ್ಬೇಡಮ್ಮ! ನಿನ್ನ ಅತ್ತೆ ಯಾವಾಗ್ಲೂ ನಿನ್ನ ಜೊತೆಯೇ ಇರ್ತಾರೆ! ದೇವರಾಗಿ ಇದ್ದು ನಿನ್ನ ಸದಾ ಕಾಪಾಡ್ಕೊಂಡಿರ್ತಾರೆ! "ಕಳೆದ ತಿಂಗಳಷ್ಟೇ ಜರುಗಿದ ಅತ್ತೆಯವರ ವೈಕುಂಠ ಸಮಾರಾಧನೆಗೆ ಆಗಮಿಸಿದ್ದ ದೊಡ್ಡಪ್ಪ ಶಾಲಿನಿಯ ಕಳೆಗುಂದಿದ್ದ ಮೊಗವನ್ನು ಕಂಡು, ಅವಳನ್ನು ಸಂತೈಸಿ ಆಡಿದ್ದ ಮಾತುಗಳು ಈಗ ನೆನಪಿಗೆ ಬಂದವು!

"ಈಗ್ಲೂ ಅತ್ತೆ ನನ್ನನ್ನ ನೋಡ್ಕೋತಾರೆ! ನನಗೆ ಯಾವ ಭಯವೂ ಇಲ್ಲ! ನೀವು ಹೋಗಿ ಬನ್ನಿ!" ಎಂದು ಧೈರ್ಯವಾಗಿ ಗಂಡನನ್ನು ಕಳುಹಿಸಿಕೊಟ್ಟಳು ಶಾಲಿನಿ.

ಇರುಳು ಕವಿಯುವ ಮುನ್ನವೇ ಕಿಟಕಿ ಬಾಗಿಲುಗಳನ್ನೆಲ್ಲ ಮುಚ್ಚಿ ಭದ್ರಪಡಿಸಿದ ಶಾಲಿನಿ ಅತ್ತೆಯವರ ಕೋಣೆ ಹೊಕ್ಕಳು. ರತ್ನಕಂಬಳಿ ಹಾಸಿದ್ದ ಒಂದು ಮಂಚದಮೇಲೆ ಅತ್ತೆಯವರ ವೀಣೆ! ಕಪಾಟಿನಲ್ಲಿ ಅವರು ಸಂಗ್ರಹಿಸಿದ್ದ ಸಂಗೀತಕ್ಕೆ ಸಂಭಂದಪಟ್ಟ ಪುಸ್ತಕಗಳು, ವೀಣಾ ವಾದನಕ್ಕೆ ಅವರು ಗಳಿಸಿದ್ದ ಪ್ರಶಸ್ತಿಗಳು, ಫೋಟೋಗಳು, ಮ್ಯೂಸಿಕ್ ಆಲ್ಬಂಗಳು! ಅತ್ತೆಯವರು ತೀರಿಕೊಂಡಮೇಲೂ ಅವರ ಕೋಣೆಯನ್ನು ಇದ್ದದ್ದು ಇದ್ದ ಹಾಗೆಯೇ ಸಂರಕ್ಷಿಸಿಕೊಂಡು ಬಂದಿದ್ದಳು ಶಾಲಿನಿ.

ಗೋಡೆಯಮೇಲೆ ತೈಲ ವರ್ಣ ಚಿತ್ರದಲ್ಲಿ ನಗುತ್ತಿದ್ದ ಅತ್ತೆಯವರ ಮೊಗವನ್ನು ಒಂದು ನಿಮಿಷ ನಿಂತು ನೋಡಿದಳು. ಎಂದಿನಂತೆ 'ಗುಡ್ ನೈಟ್ ಅತ್ತೆ!' ಎಂದವಳು ದೀಪ ಆರಿಸಿ ಹೊರಕ್ಕೆ ನಡೆದಳು. ಬೇಗ ಊಟ ಮುಗಿಸಿ ಮಹಡಿಯಲ್ಲಿದ್ದ ತನ್ನ ಕೋಣೆ ಸೇರಿಕೊಂಡಳು.

ಹೇಗೂ ಹೇಮಂತನಿಗೆ ಸಿನೆಮಾ ನೋಡುವುದರಲ್ಲಿ ಅಷ್ಟೇನೂ ಆಸಕ್ತಿ ಇರಲಿಲ್ಲ. ಆದ್ದರಿಂದ ಈಗ ಮನೆಯಲ್ಲಿ ತಾನೊಬ್ಬಳೇ ಇರುವ ಸಮಯದಲ್ಲಿ ತನ್ನ ಸ್ನೇಹಿತಿ

ಶಿಫಾರಸು ಮಾಡಿದ್ದ ಪಿಕ್ಚರ್ ನೋಡಬಾರದೇಕೆ ಎನ್ನಿಸಿತು. ಭೂತವಿರುವುದಾಗಿ ನಂಬಲ್ಪಡುವ ಸ್ಥಳಗಳಿಗೆ ಹೋಗಿ, ತಪಾಸಣೆ ನಡೆಸಿ, ಅಲ್ಲಿ ಭೂತವೂ ಇಲ್ಲ ಏನೂ ಇಲ್ಲ ಎಂದು ನಿರೂಪಿಸುವ ಟಿ. ವಿ ಚಾನೆಲ್ ಪ್ರತಿನಿಧಿಯೋರ್ವನ ಕಥೆ! ರೋಚಕ ದೃಶ್ಯಗಳೊಂದಿಗೆ ಪಿಕ್ಚರ್ ಶುರುವಾದಾಗ ಥಟ್ಟನೆ ಕರೆಂಟ್ ಹೋಯಿತು!

ಮನೆ ಎದುರಿಗಿದ್ದ ಸಾರ್ವೆ ತೋಪಿನಿಂದ ಜೋರಾಗಿ ಊಳಿಟ್ಟು ನುಗ್ಗಿ ಬಂದ ಗಾಳಿ ಕಿಟಕಿಗಳನ್ನು ರಪ ರಪ ಬಡಿಯಿತು! ಗುರುಗುಟ್ಟುತ್ತಿದ್ದ ಗುಡುಗು ಮತ್ತು ಕಣ್ಣು ಕೋರೈಸುವಂತೆ ಮಿಂಚು ಜೋರು ಮಳೆಯಾಗಲಿರುವುದನ್ನು ಸೂಚಿಸಿದವು. ಹಾಸಿಗೆಯ ಮೇಲೆ ಕುಳಿತು ದಿಂಬಿನಮೇಲೆ ಒರಗಿಕೊಂಡು ಕರೆಂಟಿಗಾಗಿ ಕಾಯ ತೊಡಗಿದಳು ಶಾಲಿನಿ. 'ಐಡಲ್ ಮೈಂಡ್ ಇಸ್ ಅ ಡೆವಿಲ್'ಸ್ ವರ್ಕ್ ಶಾಪ್' ಎಂಬ ಹೇಳಿಕೆಯನ್ನು ಸಮರ್ಥಿಸುವಂತೆ ಸುಮ್ಮನಿರಲಾರದೆ ಎಲ್ಲೆಲ್ಲೋ ಸುತ್ತಾಡಿದ ಯೋಚನೆಗಳು ಕೊನೆಗೆ ಭೂತದ ವಿಷಯಕ್ಕೆ ಬಂದು ನಿಂತವು!

ಚಿಕ್ಕಂದಿನಲ್ಲಿ ಕೇಳಿದ್ದ ದೆವ್ವದ ಕಥೆಗಳೆಲ್ಲ ನೆನಪಿಗೆ ಬಂದವು. ದೆವ್ವಗಳಿಗೆ ಕಾಲುಗಳೇ ಇರುವುದಿಲ್ಲವೆಂದು ಒಂದು ಕಥೆ! ದೆವ್ವ ತನ್ನ ಕಾಲುಗಳನ್ನು ಒಲೆಯಲ್ಲಿ ಸೌದೆಯಂತೆ ಬಳಸಿ ಅಡುಗೆ ಮಾಡಿತು ಎಂದು ಮತ್ತೊಂದು ಕಥೆ! ಗೆಜ್ಜೆಯ ಝಲ್ ಝಲ್, ಮಲ್ಲಿಗೆಯ ಘಮ ಘಮ, ಬಿಳಿ ಹೊಗೆಯಂತಿದ್ದ ದೆವ್ವ , ಕಪ್ಪು ಆಕಾರ ಹೊಂದಿದ್ದ ದೆವ್ವ , ಬಿಳಿ ಸೀರೆಯುಟ್ಟು ಉದ್ದನೆಯ ಕೂದಲನ್ನು ಕೆದರಿಕೊಂಡಿದ್ದ ಮೋಹಿನಿ ದೆವ್ವ! ಎಷ್ಟೊಂದು ತರಾವರಿ ದೆವ್ವಗಳ ಕೆಥೆಗಳು!

ಭೂತದ ಇರುವಿಕೆ ನಿಜವೋ ಸುಳ್ಳೋ ಎಂದು ಅವಳು ತನ್ನ ತಂದೆಯವರನ್ನು ಒಮ್ಮೆ ಪ್ರಶ್ನಿಸಿದ್ದಳು. 'ಭೂತವೂ ಇಲ್ಲ ದೆವ್ವವೂ ಇಲ್ಲ! ಇದರ ಬಗ್ಗೆಯೆಲ್ಲ ತಲೆ ಕೆಡಿಸ್ಕೊಳ್ದೆ ಓದ್ಕೋ ಹೋಗಮ್ಮ!' ಎಂದು ರೇಗಿದ್ದರು ತಂದೆಯವರು .

ಭೂತ, ದೆವ್ವ, ಆತ್ಮಗಳ ಬಗ್ಗೆ ಚಿಕ್ಕಂದಿನಲ್ಲೇ ಏರ್ಪಟ್ಟಿದ್ದ ಕುತೂಹಲದ ಕಾರಣ ತನ್ನ ಪ್ರಶ್ನೆಗೆ ಉತ್ತರವನ್ನು ಹುಡುಕುವುದರ ಸಲುವಾಗಿ ಅದರ ಬಗ್ಗೆ ಅನೇಕ ಪುಸ್ತಕಗಳನ್ನು ಓದುವುದು, ಅಂತರ್ಜಾಲದಲ್ಲಿ ಬ್ರೌಸ್ ಮಾಡುವುದು, ಮುಂತಾದ ಚಟುವಟಿಕೆಗಳು ಶಾಲಿನಿಯ ಹವ್ಯಾಸವೇ ಆಗಿಹೋಗಿತ್ತು .

ಹಗ್ಗವನ್ನು ಹಾವು ಅಂದುಕೊಳ್ಳೋ ಹಾಗೆ ದೆವ್ವ ಅನ್ನೋದೂ ಒಂದು ರೀತಿಯ ಭ್ರಮೆ ಎಂಬುದು ಕೆಲವರ ಅಭಿಪ್ರಾಯ! ಬೆಳಕು – ಕತ್ತಲೆ , ನೋವು – ನಲಿವು , ಸುಖ – ದುಃಖ ಮುಂತಾದ ದ್ವಂದ್ವಗಳು ಇರೋ ಹಾಗೆ , ದೈವ – ದೆವ್ವ ಇರುವುದೂ ಸಾಧ್ಯವೇ ಎಂಬುದು ಇನ್ನೂ ಕೆಲವರ ವಾದ!

ಸತ್ತವರೆಲ್ಲ ದೆವ್ವವಾಗಿಬಿಟ್ಟರೆ ಪ್ರಪಂಚದ ತುಂಬ ದೆವ್ವಗಳದ್ದೇ ರಾಜ್ಯವಾಗುತ್ತಿತ್ತಲ್ಲವೇ? ಅಲ್ಲದೆ ಪುನರಪಿ ಜನನಂ ಎಂಬ ಸತ್ಯ ವಾಕ್ಯವೇ ಸುಳ್ಳಾಗುತ್ತಿರಲಿಲ್ಲವೇ? ನಿಜಕ್ಕೂ ಸತ್ತಮೇಲೆ ಏನಾಗುತ್ತದೆ? ತನ್ನ ಇಂತಹ ಪ್ರಶ್ನೆಗಳಿಗೆ ಉತ್ತರ ಹುಡುಕಿ ವೇದಾಂತ ಪುಸ್ತಕಗಳನ್ನೂ ಓದ ತೊಡಗಿದ್ದಳು ಶಾಲಿನಿ! ಯುಟ್ಯೂಬಲ್ಲಿ ಅನೇಕ ವೇದಾಂತಿಗಳ ಭಾಷಣಗಳನ್ನು ಸಹ ಕೇಳಿಸಿಕೊಳ್ಳ ತೊಡಗಿದ್ದಳು!

'ಸ್ಥೂಲ ಶರೀರ ಪಂಚ ಭೂತಗಳೊಂದಿಗೆ ಲೀನವಾಗುತ್ತದೆ. ಸೂಕ್ಷ್ಮ ಶರೀರವು ತನ್ನ ನೆನಪುಗಳು , ಸಂಸ್ಕಾರಗಳು ಮತ್ತು ವಾಸನಾದಿಗಳನ್ನು ಹೊತ್ತು ಅದರ ಕರ್ಮಕ್ಕನುಗುಣವಾದ ಲೋಕಕ್ಕೆ ತೆರಳುತ್ತದೆ' ಎಂದು ಓರ್ವ ಸ್ವಾಮಿಗಳು ಉವಾಚಿಸಿದ್ದರು! ಸೂಕ್ಷ್ಮ ಶರೀರ ಬೇರೆ ಲೋಕಕ್ಕೆ ತೆರಳಿದಮೇಲೆ , ಭೂಲೋಕದಲ್ಲಿ ದೆವ್ವ ಎನ್ನಲಾಗುವ ಸ್ಪಿರಿಟ್ಸ್ ಹೇಗೆ ಇರಲು ಸಾಧ್ಯ? ಅತ್ತೆಯವರು ಸೂಕ್ಷ್ಮ ಶರೀರ ಪಡೆದಿದ್ದರೆ ಅದು ಈಗ

ಎಲ್ಲಿರಬಹುದು? ಬೇರೆ ಲೋಕದಲ್ಲೇ ಇಲ್ಲ ಇದೇ ಭೂಲೋಕದಲ್ಲೇ?

ಶಾಲಿನಿ ಯೋಚಿಸುತ್ತಿದ್ದ ಹಾಗೆಯೇ ಎಲ್ಲೋ ರಭಸದಿಂದ ಒಂದು ಸಿಡಿಲೆರಗಿತು. ಗುರುಗುಟ್ಟುತ್ತಿದ್ದ ಗುಡುಗು ಜೋರಾಗಿ ಸ್ಫೋಟಿಸಿ ಅವಳ ಯೋಚನೆಯ ಸರಣಿಯನ್ನು ತುಂಡರಿಸಿತು! ಕರೆಂಟ್ ಬರುವ ಸುಳಿವೇ ಇಲ್ಲ. ನೀರು ಕುಡಿಯಲೆಂದು ಏಳಲು ಹೋದವಳು ಥಟ್ಟನೆ ಕುಳಿತಲ್ಲಿಯೇ ಕುಳಿತಳು! 'ಜೋ' ಎಂದು ಸುರಿಯತೊಡಗಿದ್ದ ಮಳೆಯ ಗದ್ದಲವನ್ನೂ ಮೀರಿ ಇನ್ಯಾವುದೋ ಒಂದು ದನಿ ಗಮನಕ್ಕೆ ಬಂದಿತು. ಕ್ಷೀಣವಾಗಿ ಕೇಳಿಸುತ್ತಿದ್ದ ದನಿ ಬರುಬರುತ್ತ ಜೋರಾಗುತ್ತಲೇ ಹೋಯಿತು!

ಯಾರದು ಅಳುತ್ತಿರುವುದು! ನಾಯಿ ಇರಬಹುದೇ? ಯಾರ ಮನೆಯದ್ದೋ? ಇಲ್ಲ ಬೀದಿ ನಾಯೀ ಇರಬಹುದೇ? ಛೆ! ಏಕೆ ಈ ರೀತಿ ಅಳುತ್ತಿದೆ? ಶಾಲಿನಿಗೆ ಹೊಟ್ಟೆಯಲ್ಲಿ ಹುಳಿ ಹಿಂಡಿದಂತೆ ಸಂಕಟವಾಯಿತು. ಜಾಡಿಸುತ್ತಿದ್ದ ಮಳೆಯ ಶಬ್ದವನ್ನೂ ಮೀರಿ ಒಂದೇ ಸಮನೆ ಶಂಖ ಊದಿದಂತೆ ಆ ನಾಯಿ ಅಳ ತೊಡಗಿತು!

'ದೆವ್ವಗಳನ್ನ ಕಂಡರೆ ನಾಯಿಗಳು ಅಳುತ್ತವೆ! ' ಎಂದು ಎಲ್ಲೋ ಓದಿದ ನೆನಪಾದಾಗ ಶಾಲಿನಿಯ ಒಡಲು ಕಂಪಿಸತೊಡಗಿತು. ಅದರ ಕೂಗು ಸಹಿಸಲಾರದೆ ಹಾಸಿಗೆಗೆ ಶರಣಾಗಿ ದಿಂಬಲ್ಲಿ ಮುಖ ಹುದುಗಿಸಿಕೊಂಡಳು.

ನಾಯಿ ಅಳುವುದು ಅಶುಭದ ಸೂಚನೆ ಅನ್ನುತ್ತಾರಲ್ಲ? ಏನು ಅಶುಭ ಘಟಿಸಲಿದೆಯೋ? ಬೆನ್ನ ಹುರಿಯಲ್ಲಿ ಹಿಮ ಗಡ್ಡೆ ಜಾರಿದಂತೆ ಅನ್ನಿಸಿ ಅವಳ ಒಡಲು ಇನ್ನಷ್ಟು ನಡುಗತೊಡಗಿತು. ಕೆಳಗೆ ಹಾಲಲ್ಲಿದ್ದ 'ಬಿಗ್ ಬೆನ್' ಗಡಿಯಾರದ ಟಿಕ್ ಟಿಕ್ ಶಬ್ದಕ್ಕೆ ಸರಿಯಾಗಿ ಅವಳ ಹೃದಯ ವೇಗವಾಗಿ ಬಡಿದುಕೊಳ್ಳ ತೊಡಗಿತು. ಹದಿನೈದು ನಿಮಿಷಗಳಿಗೊಮ್ಮೆ ಅದರಿಂದೆದ್ದ ಘಂಟಾಮೇಳವನ್ನು ಆಲಿಸುತ್ತ ' ಈಗೆಷ್ಟು ಗಂಟೆ ಆಗಿರಬಹುದು? ' ಎಂದು ಅಂದಾಜಾಗಿ ಲೆಕ್ಕ ಹಾಕುತ್ತ ಹೊದಿಕೆಯನ್ನು ಮುಖದಮೇಲೆ ಎಳೆದುಕೊಂಡು ಕೈಕಾಲು ಮುದುಡಿ ಮಲಗಿದಳು! ರಕ್ತ ಸಂಚಾರವೇ ನಿಂತು ಹೋಗಿ ಮೈಯೆಲ್ಲ ಮರಗಟ್ಟಿಹೋದಂತೆ ಭಾಸವಾಯಿತು!

'ಒಂದು ವೇಳೆ ಭೂತವಿರುವುದು ನಿಜವೇ ಏನೋ?! ಈ ಹಾಳು ನಾಯಿ ಅದರ ಇರುವನ್ನೇ ಸೂಚಿಸುತ್ತಿದೆಯೋ ಏನೋ? ಈ ಹೇಮಂತ ಬೇಗನೆ ಬರಬಾರದೇ? ಅವನು ಹೇಳಿದಂತೆ ಸ್ನೇಹಿತೆಯ ಮನೆಗೇ ಹೋಗಿದ್ದರೆ ಈ ಅವಸ್ಥೆ ತಪ್ಪುತ್ತಿತ್ತು!' ತಲ್ಲಣಗೊಂಡ ಮನಸ್ಸು ಏನೇನೋ ಚಿಂತಿಸುತ್ತ ಪರಿತಪಿಸಿತು

ಕಡೆಗೊಮ್ಮೆ ನಾಯಿ ಊಳಿಡುವುದನ್ನು ನಿಲ್ಲಿಸಿತ್ತು. ಗಾಳಿ, ಮಳೆ, ಕಿಟಕಿಯ ದಡ ದಡ ಎಲ್ಲವೂ ಸಹ ನಿಂತು ಎಲ್ಲೆಡೆ ಆವರಿಸಿದ ನಿಶಬ್ದ ಕೂಡ ಭೀಕರವೆನಿಸಿತು!

ಇದ್ದಕ್ಕಿದ್ದಂತೆ ತೇಲಿ ಬಂದ ವೀಣಾ ವಾದನ ಶಾಲಿನಿಯನ್ನು ಚಕಿತಗೊಳಿಸಿತು! ಯಾರೋ ವೀಣೆ ನುಡಿಸುತ್ತಿದ್ದರು! ಅತ್ತೆಯವರ ಕೋಣೆಯಲ್ಲಿ! ಅತ್ತೆಯವರೇ ನುಡಿಸಿದಂತೆ!

'ಜಗದೋದ್ಧಾರನ ಆಡಿಸಿದಳೆಶೋದಾ..... ' ಅದೇ ಭಾವ! ಅದೇ ಲಯ! ಅತ್ತೆಯವರೇ ನುಡಿಸುತ್ತಿದ್ದ ಶೈಲಿಯಲ್ಲಿ....

ಶಾಲಿನಿಗೆ ಹೃದಯ ಎಗರಿ ಬಾಯಿಗೆ ಬಂದಂತಾಯಿತು!

'ಅಯ್ಯೋ! ಅತ್ತೆ! ದೊಡ್ಡಪ್ಪ ಹೇಳಿದ ಹಾಗೆ ನೀವು ಇಲ್ಲೇ ನನ್ನ ಜೊತೆಯಲ್ಲೇ ಇದ್ದೀರಾ? ಸೂಕ್ಷ್ಮ ಶರೀರದಲ್ಲಿ ನೀವೇ ಬಂದು ವೀಣೆ ನುಡಿಸ್ತಿದ್ದೀರಾ ? ಅಯ್ಯೋ ಹೆದರಿಕೆಯಾಗ್ತಿದೆ ಅತ್ತೆ! ಹೊರಟು ಹೋಗಿ ಅತ್ತೆ! ನಾನು ಏನಾದ್ರೂ ತಪ್ಪು ಮಾಡಿದ್ರೆ

ಕ್ಷಮಿಸ್ಬಿಡಿ ಅತ್ತೆ ಪ್ಲೀಸ್! ಹೋಗಿ ಅತ್ತೆ ಪ್ಲೀಸ್! '

ಶಾಲಿನಿ ಕಂಪಿಸುತ್ತ ಕಂಬಳಿಯೊಳಗೆ ಇನ್ನಷ್ಟು ನುಸುಳಿಕೊಂಡು 'ಪ್ಲೀಸ್ ಅತ್ತೆ! ಪ್ಲೀಸ್ ಅತ್ತೆ '! ಎನ್ನುತ್ತಿದ್ದಳು. ಅವಳು ಬೇಡಿಕೊಂಡ ನಂತರ ಸ್ವಲ್ಪ ನಿಂತಂತೆ ನಿಂತು ಮತ್ತೆ ಶುರುವಾಯಿತು....

'ಜಗದೋದ್ಧಾರನ ಆಡಿಸಿದಳೆಶೋದಾ..... '

ಬಹಳ ಹೊತ್ತಿನವರೆಗೆ ನಿಲ್ಲಿಸಿ ನಿಲ್ಲಿಸಿ ವೀಣೆಯನ್ನು ನುಡಿಸುತ್ತಲೇ ಇದ್ದರು ಅತ್ತೆ!

'ಬೇಡಿ ಅತ್ತೆ! ಬೇಡಿ ಅತ್ತೆ!' ಬಿಕ್ಕಿ ಬಿಕ್ಕಿ ಅಳುತ್ತ ಬಹಳ ಹೊತ್ತಿನವರೆಗೆ ಕನವರಿಸುತ್ತಿದ್ದಳು ಶಾಲಿನಿ.

ಗಾಳಿ, ಮಳೆ, ಕಿಟಕಿಯ ದಡ ದಡ , ವೀಣಾ ವಾದನ ಎಲ್ಲವೂ ನಿಂತು ಈಡೀ ಮನೆಯೇ ಈಗ ನಿಶಬ್ದವಾದ ಅಂಧಕಾರದಲ್ಲಿ ಮುಳುಗಿತ್ತು .

"ಶಾಲು!" ದಿಡೀರೆಂದು ಒಂದು ಕೈ ಅವಳ ಮುಖದಿಂದ ಕಂಬಳಿಯನ್ನು ಸರಿಸಿತು!

'ಅಯ್ಯೋ!' ಕಿರುಚಬೇಕೆನ್ನಿಸಿದರೂ ನಾಲಿಗೆ ಹೊರಳದೆ ಬಾಯೊಳಗೆ ಅಂಟಿಕೊಂಡಿತು!

ಚಕ್ಕೆಂದು ಕರೆಂಟ್ ಬಂದು ಒಮ್ಮೆಗೇ ದೀಪ ಪ್ರಕಾಶವಾಗಿ ಉರಿಯ ತೊಡಗಿತು. ಅವಳು ಬಹಳ ಕಷ್ಟಪಟ್ಟು ಕಿರಿದಾಗಿ ಕಣ್ಣು ಬಿಟ್ಟಳು.

ಎದುರಲ್ಲಿ ಅವಳನ್ನೇ ದಿಟ್ಟಿಸುತ್ತ ನಿಂತಿದ್ದ ಹೇಮಂತ!

'ಇದೇನು ಶಾಲು! ಮುಖ ಮುಚ್ಕೊಂಡು ನಿದ್ದೆ ಹೊಡೆದೆಯಾ? ಕಾನ್ಫರೆನ್ಸ್ ಮುಗಿಯೋದು ಲೇಟ್ ಆಯಿತು! ಒಬ್ಬೆ ಇರ್ತೀಯಲ್ಲಾ ವಿಚಾರಿಸ್ಕೊಳ್ಳೋಣಾಂತ ಎಷ್ಟು ಬಾರಿ ಕರೆ ಮಾಡ್ದೆ! ನೀನು ಫೋನ್ ತೆಗೀಲಿಲ್ಲಾ! ಮನೆಗೆ ಬಂದ್ರೆ ಕರೆಂಟ್ ಇಲ್ಲ! ಬಾಗಿಲು ತಟ್ಟಿದೆ! ಕರೆ ಮಾಡ್ದೆ! ನೀನು ಯಾವುದಕ್ಕೂ ಉತ್ತರಿಸ್ಲಿಲ್ಲ! ನನಗೆ ಎಷ್ಟು ಆತಂಕವಾಯ್ತು ಗೊತ್ತಾ? ಸಧ್ಯ ಡ್ಯೂಪ್ಲಿಕೇಟ್ ಕೀ ಇತ್ತು! ಒಳಗೆ ಓಡಿಬಂದು ನೋಡಿದ್ರೆ ನೀನು ಕುಂಭಕರ್ಣನ ಅಕ್ಕನ ಹಾಗೆ ಮುಖ ಮುಚ್ಕೊಂಡು ನಿದ್ದೆ ಹೊಡೀತಿದ್ಯ! "

ಶಾಲಿನಿ ಅವನ ಯಾವ ಮಾತನ್ನೂ ಅರ್ಥಮಾಡಿಕೊಳ್ಳದೆ ಮಿಕಮಿಕ ಕಣ್ಣು ಬಿಟ್ಟು ಎದ್ದು ಕುಳಿತಳು.

"ಅದ್ಸರಿ ನೀನ್ಯಾಕೆ ಮೊಬೈಲ್ ರಿಸೀವ್ ಮಾಡ್ಲಿಲ್ಲ?" ಟೈ ಬಿಚ್ಚುತ್ತಲೇ ಪ್ರಶ್ನಿಸಿದ ಹೇಮಂತ.

"ಅದು, ಅದು ಅತ್ತೆ! ಅತ್ತೆ ರೂಮಲ್ಲಿ....!" ಅತ್ತೆಯ ಸೂಕ್ಷ್ಮ ಶರೀರ ವೀಣೆ ನುಡಿಸಿದ ವಿಷಯವನ್ನು ಹೇಗೆ ಹೇಳಬೇಕೋ ಅರಿಯದೆ ಡವಗುಟ್ಟುವ ಹೃದಯದೊಂದಿಗೆ ತಡವರಿಸಿ ತೊದಲಿದಳು ಶಾಲಿನಿ.

"ಹೌದು ಮಂಕೆ! ರಿಂಗ್ ಟೋನ್‌ಗೆ ಅಮ್ಮನ 'ಜಗದೋದ್ಧಾರನ' ಅಳವಡಿಸಿ, ಬೆಳಿಗ್ಗೆಯೇ ಅಮ್ಮನ ರೂಮಲ್ಲೇ ಚಾರ್ಜಿಗೆ ಹಾಕಿ ಹೋಗಿದ್ನಲ್ಲಾ! ತೆಗೆದುಕೊಳ್ಳೋದು ಮರೆತೇಬಿಟ್ಯಾ? " ಎಂದು ನಿಧಾನವಾಗಿ ಪ್ರಶ್ನಿಸಿದ ಹೇಮಂತ!

■

● **ದಂನಆ**

✓ ಡಿಸೆಂಬರ್ 25ರಂದು ಬರುವ ಸಂತಾ ಕ್ಲಾಸ್ ತಕ್ಷಣ 14 ದಿನಗಳ ಕಾಲ ಕ್ವಾರಂಟೈನ್‌ಗೆ ಹೋಗಬೇಕಾಗಿರುವುದರಿಂದ ಈ ವರ್ಷ ಕ್ರಿಸ್‌ಮಸ್ ತಡವಾಗಿ ಆರಂಭವಾಗುವ ನಿರೀಕ್ಷೆ ಇದೆ. ಎಲ್ಲರೂ ಸಹಕರಿಸಬೇಕಾಗಿ ವಿನಂತಿ.

✓ ಎರವಲು ಪಡೆದ ಪುಸ್ತಕ ವಾಪಸ್ ಮಾಡದಿರುವುದನ್ನು ದಿ ಆರ್ಟ್ ಆಫ್ ಬುಕ್ ಕೀಪಿಂಗ್ ಎಂದು ಕರೆಯಬಹುದು.

✓ ನೀವು ಸಂತೋಷವಾಗಿದ್ದೀರಿ ಎಂದರೆ ನಿಮ್ಮ ವಿಷಯದಲ್ಲಿ ಎಲ್ಲವೂ ಪರಿಪೂರ್ಣವಾಗಿದೆ ಎಂದರ್ಥವಲ್ಲ. ಎಲ್ಲ ಕುಂದು ಕೊರತೆಗಳನ್ನು ಮೀರಿ ಬದುಕನ್ನು ಗ್ರಹಿಸಲು ನಿರ್ಧರಿಸಿದ್ದೀರಿ ಎಂದರ್ಥ.

✓ ನಾನೇನೋ 'ಹ್ಯಾಪಿ ಮ್ಯಾರೀಡ್ ಲೈಫ್' ಎನ್ನುತ್ತೇನೆ. ಆದರೆ ಹೌ ವಿಲ್ ಯು ಮ್ಯಾನೇಜ್?

✓ ಮಗುವಿನ ಪ್ರಶ್ನೆ: ದೇವರೇ, ನೀನು ದೇವರು ಎಂದು ನಿನಗೆ ಹೇಗೆ ಗೊತ್ತಾಯಿತು?

✓ ಡೋಂಟ್ ಕ್ರಿಟಿಸೈಸ್ ವಾಟ್ ಯು ಕೆನಾಟ್ ಅಂಡರ್‌ಸ್ಟಾಂಡ್.

✓ ನಾಲಿಗೆ ಏನು ಹೇಳಬೇಕಾದರೂ ಹೇಳಬಹುದು ಆದರೆ ಕಣ್ಣುಗಳು ಬೇರೆ ಏನೆನ್ನೋ ಹೇಳುತ್ತಿರುತ್ತವೆ.

✓ ನೀವು ಮಾಡಲು ಹೊರಟಿರುವ ಕೆಲಸದ ಮೇಲೆ ಖ್ಯಾತಿಯನ್ನು ಪಡೆಯಲು ಸಾಧ್ಯವಿಲ್ಲ.

✓ ಇಫ್ ಐ ಮೇಕ್ ಎ ಮಿಸ್ಟೇಕ್ ಐ ವಿಲ್ ಬಿ ದಿ ಸೆಕೆಂಡ್ ಟು ಅಡ್ಮಿಟ್ ಇಟ್.

✓ ತರಗತಿಯೊಳಗೆ ಕಲಿಯುವ ಪಾಠಗಳನ್ನು ಬೇರೆಡೆ ಕಲಿಯಲು ಅವಕಾಶ ಇದ್ದೇ ಇರುತ್ತದೆ. ಆದರೆ ತರಗತಿ ಹೊರಗೆ ಕಲಿಯುವ ಪಾಠಗಳು ಮಾತ್ರ ಅಮೂಲ್ಯ.

✓ ಎಲ್ಲರೂ ನನ್ನ ಹಾಗೆ ಇದ್ದಿದ್ದರೆ ಸಮಾಜ ಹೇಗಿರಬಹುದು ಎಂದು ಯೋಚಿಸಿದ್ದೀರಾ?

✓ ಐ ಲವ್ ಮೈ ನ್ಯೂಸ್‌ಪೇಪರ್ಸ್. ದೆ ನೈದರ್ ಶ್ರೀಕ್ ನಾರ್ ಶೌಟ್. ಸಚ್ ಗುಡ್ ಬಿಹೇವಿಯರ್.

✓ ಘೋಷಣೆಗಳನ್ನೇ ಪರಿಹಾರ ಎಂದು ಭಾವಿಸದಿರುವ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ.

✓ ಯಾರೋ ಒಬ್ಬರು ನಿಮ್ಮ ಮನಸ್ಸಿನಲ್ಲೇ ಉಳಿದು ನಿಮಗೆ ಕಾಟ ಕೊಡುತ್ತಿರಬಹುದಲ್ಲವೆ? ಅಂದರೆ ಅವರ ಮನಸ್ಸಿನಲ್ಲಿ ನೀವು ಉಳಿದಿರುತ್ತೀರಿ ಎಂದರ್ಥ.

✓ ಟು ಬಾಯ್ಸ್ ಸ್ಟೋಲ್ ಎ ಕ್ಯಾಲೆಂಡರ್. ದೆ ಗಾಟ್ ಸಿಕ್ಸ್ ಮಂತ್ಸ್ ಈಚ್.

✓ ಉಪದೇಶ ಮಾಡುವ ಮೊದಲು ಶ್ರೀಮಂತನಾಗು. ಏಕೆಂದರೆ ಬಡವನ ಮಾತನ್ನು ಯಾರೂ ಗಂಭೀರವಾಗಿ ಪರಿಗಣಿಸುವುದಿಲ್ಲ. ■

# ಬಾಳು ಕನ್ನಡವೇ!

**● ಜಯಶ್ರೀ ದೇಶಪಾಂಡೆ**

"ಈ ಮೀಟಿಂಗಿನ ಉದ್ದೇಶವೇನು?" (ಮೀಟಿಂಗ್ ಮಾಡಲೇಬೇಕಿತ್ತೇ? ಎಂದರ್ಥ) ಧ್ವನಿ ಒಂದು.

"ಇಷ್ಟು ಅವಸರದಿಂದ ನಮ್ಮನ್ನು ಎಬ್ಬಿಸಿ (ಅರ್ಥಾತ್ ಹಾಸಿಗೆಯಿಂದ ಎಳೆದು) ಕೂರಿಸಿದ್ದುದರ ಕಾರಣವೇನು? ಧ್ವನಿ ಎರಡು.

ಇಲ್ಲಿ ಷೋ ಕಾಸ್ ನೋಟೀಸಿನ ಭಾವದ ಇರುವಿಕೆ ಸ್ಪಷ್ಟ!

"ನಾಳೆ ಮಾಡಿದ್ದರೆ ಆಗುತ್ತಿರಲಿಲ್ಲವೇ? " (ನಾಳೆ ಅಂದರೆ ನಾಳೆಗೂ 'ನಾಳೆ') ಧ್ವನಿ ಮೂರು.

ಅದರಲ್ಲೊಬ್ಬ ಮಾವ ಸೇರಿದಂತೆ ನನ್ನನ್ನೂ ಎಣಿಸಿ ಹಿಡಿದರೆ ನಾಲ್ವರು ಸೇರಿದ್ದ ನಮ್ಮ ಗೃಹಸಭೆಯಲ್ಲಿ ಉಳಿದ ಮೂವರೂ ಹೀಗೆ ಪುಂಖಾನುಪುಂಖವಾಗಿ ನನ್ನತ್ತ ಪ್ರಶ್ನೆಗಳ ಬಾಣಗಳನ್ನು ತೂರಿದರು. . ಅವಕ್ಕೆಲ್ಲ ಅಂಜಿದರೆ ನಾನು ಕಿತ್ತೂರು ಚೆನ್ನಮ್ಮನ ನಾಡಿನವಳಾಗಲಿಕ್ಕೆ ಲಾಯಕ್ಕಿಲ್ಲ!

"ಒಂದನೆಯ ತಾರೀಖು ಬಂದಿತಲ್ಲ" ನಾನು ಆ ಮೂರೂ ದುರುಗುಟ್ಟುವ ಕಣ್ಣುಗಳಲ್ಲಿದ್ದ ನಿದ್ರಾಪೂರಿತ ಪ್ರಶ್ನೆಗಳಿಗೆ ಏಕೋತ್ತರವಿತ್ತೆ.

ಮತ್ತೆ ದುರುಗುಟ್ಟಿದುವು ಆರು ಜೊತೆ ಕಣ್ಣುಗಳು. "ಇದೂ ನಮಗೆ ಹೇಳಬೇಕಾದಂಥ ಮಾತೆ? ಎಂಬರ್ಥದ ದೃಷ್ಟಿಯಲ್ಲಿ. ಬುದ್ಧಿಯಲ್ಲಿ ತಾನೇ ಅಪ್ರತಿಮನೆಂಬ ಭಾವನೆಯಲ್ಲಿರುವ ಮಗ ನಕ್ಕ " ನನ್ನ ಮುದ್ದಮ್ಮಾ, ಪ್ರತಿ ತಿಂಗಳಲ್ಲೂ ಒಂದು ಒಂದನೆಯ ತಾರೀಕು ಬಂದೆ ಬರುತ್ತದೆ ಎಂದು ಇಡೀ ಜಗತ್ತಿಗೆ ಗೊತ್ತಿದೆ ಅಲ್ಲವೇ?" ಅಂದ...

ನನ್ನ ಮಂದಮೆದುಳಿಗಾಗಿ ಅನುಕಂಪದ ಛಾಯೆ ಅವನ ದೊಡ್ಡ ಕಣ್ಣುಗಳಲ್ಲಿ.

"ಇದು ಸುಮ್ಮಸುಮ್ಮನೆ ಬಂದು ಹೋಗುವ ಸರ್ವೇ ಸಾಮಾನ್ಯ ಒಂದಲ್ಲ ಕಣೋ..ಎಲ್ಲೆಲ್ಲೂ ಹಬ್ಬ, ಉತ್ಸವ ನಡೆಯುವ, ನಡೆಯಬೇಕಾದ ಮಹಾನ್ ಮಾಸವಿದು" ನನ್ನ ಕೊರಳಶಿರೆಗಳಾಗಲೇ ಭಾವಪೂರ್ಣತೆಯಿಂದಾಗಿ ಉಬ್ಬಿಕೊಳ್ಳತೊಡಗಿದ್ದುವು.

ಇದೀಗ ನಮ್ಮ ಗೃಹಸಭಾ ಸದಸ್ಯರು ಕೊಂಚ ವಿಚಲಿತ, ಕೊಂಚ ಚಿಂತಾಗ್ರಸ್ತರಾದರು..ಭಾರತವರ್ಷದಲ್ಲಿರುವ ಹಬ್ಬಗಳ ಅರಿವಿಲ್ಲದೆ ಮಾತನಾಡುತ್ತಿರುವಳೇ? ಅಥವಾ ಅಮ್ಮನಿಗೆ ಪ್ರಿಮೆಚೂರ್ ಮರುಳೇನಾದ್ರೂ ಆವರಿಸಿತೇ? ಅನ್ನುವ ಭಾವದೊಂದಿಗೆ ಪರಸ್ಪರ ಮುಖ ದರ್ಶನಗ್ರಸ್ತರಾದರು!

ಮಾವ ಕೊಂಚ ಇತ್ತತ್ತ ಸರಿದು "ಅಲ್ಲ ನಮ್ಮ ಜಂಬೂದ್ವೀಪದ ಸಂಪೂರ್ಣ ವರ್ಷವನ್ನು ನಾನಾ ವಿಧದ ಹಬ್ಬ, ಜಾತ್ರೆಗಳು ಅಲಂಕರಿಸಿ, ಮರಳಿ ಹೋಗುವಾಗ ಕಸ ತುಂಬಿಸಿ ಹೋಗುತ್ತವಲ್ಲ...ನೀನು ಹೇಳುವ ಹಬ್ಬ ಇನ್ನು ಬೇರೆಯಾವುದಪ್ಪ ಅದೂ?" ಅಂದ.

“ನೀವೆಲ್ಲರೂ ಕೊಂಚ ಬುದ್ಧಿಯನ್ನುಪಯೋಗಿಸುತ್ತೀರಿ ಎಂದುಕೊಂಡಿದ್ದೆ” ಅಂದು ನಾನು ಮುಂದುವರಿಸಿದೆ. “ಈ ತಿಂಗಳು ಕನ್ನಡದ ಹಬ್ಬ, ಕನ್ನಡದ ಉತ್ಸವಗಳು ನಡೆಯುತ್ತವೆ.ನಡೆಯಬೇಕು ಆದ್ದರಿಂದ ಇದು ನವಂಬರ್ ತಿಂಗಳು ತಿಳಿಯಿತೇ?”

‘ಇರಬಹುದು ಅದಕ್ಕೂ ನಮಗೂ ಏನು ಸಂಬಂಧ?’ ಅನ್ನುತ್ತಾ ನನಗೆ ಪಿತ್ತಪ್ರಕೋಪವೇನಾದರೂ ಆಗಿದ್ದೀತೆ ಅನ್ನುವ ಕಣ್ಣುಗಳಿಂದ ದಿಟ್ಟಿಸಿದರು.

“ಛೆ ಧಿಕ್ಕಾರವಿರಲಿ ನಿಮಗೆ. ಕನ್ನಡ ನಾಡಿನಲ್ಲಿ ಹುಟ್ಟಿ, ಕನ್ನಡ ಮಣ್ಣು ಮೆಟ್ಟಿ ನಿಲ್ಲುವ ನೀವು ಕನ್ನಡಕ್ಕಾಗಿ ಏನಾದರೂ ತ್ಯಾಗ, ಸೇವೆಗಳನ್ನು ಮಾಡಬೇಕೆಂದು ಕಾಣಸಿನಲ್ಲಾದರೂ ಎಣಿಸಿದ್ದೀರೋ? ನೀವಾಯ್ತು ನಿಮ್ಮ ಮೊಬೈಲಾಯ್ತು, ನೆಟ್ಟಾಯ್ತು ಅಂತ ಅದರಲ್ಲಿ ಕಣ್ಣು ನೆಟ್ಟು ಕೂರುವುದು ಬಿಟ್ಟು ನಿಮಗೆ ಯಾವತ್ತಾದರೂ ಇನ್ನೇನಾದರೂ ಆಲೋಚನೆ ಬಂತೆ?...ಬಾರಿಸು ಕನ್ನಡ ದಿಂಡಿಮವ ಎಂಬ ಅಮೃತವಾಣಿ ಕನ್ನಡಿಗರಾದ ನಮ್ಮ ಮನಸ್ಸಿನಿಂದಲೇ ಹಾರಿ ಹೋದರೆ ಮುಂದಿನ ಜನಾಂಗಕ್ಕೆ ಈ ಭಾಷೆಯ ಎಳೆಯೇ ಕಡಿದು ಹೋಗಲಾರದೆ? ಈ ಪ್ರಕಾರ ನಮ್ಮ ಭಾಷೆ ಉಳಿಯುವುದಾದರೂ ಹೇಗೆ?”

ನನ್ನ ಸ್ವಗತ ಬಹಿರ್ಗತಗಳ ಏರಿಳಿವಿನ ಕಾವು ತಟ್ಟಿದವರಂತೆ ಮೂವರೂ ಬೆಚ್ಚಿ ಬಿದ್ದರು..ತಮ್ಮತಮ್ಮಲ್ಲೇ ಕಣ್ಣಿನ ನೋಟಗಳ ವಿನಿಮಯಿಸಿ ಇದಕ್ಕೇನಾದರೂ ಮಾಡಲೇಬೇಕು ಎಂಬ ಸಂದೇಶವನ್ನು ಪರಸ್ಪರ ರವಾನಿಸಿಕೊಂಡರು...

“ಅಯ್ಯೋ ಬೇಜಾರು ಯಾಕಮ್ಮಾ ? ಆಯಿತು ಡಿಂಡಿಮ ಬಾರಿಸಬೇಕೇ? ಹಾಗೆ ಮಾಡೋಣ...ಯಾವಾಗ ಬಾರಿಸಬೇಕು? ಎಲ್ಲಿ ಬಾರಿಸಬೇಕು? ಎಷ್ಟು ಹೊತ್ತು ಬಾರಿಸಬೇಕು? ”ಅಂದನು ಮಗ.

ಉಗ್ರ ಕಾಳಿಯಾದೆ “ಕುಚೋದ್ಯ ಮಾಡಿದರೆ ಕೊಂದುಬಿಟ್ಟೇನು! ತಮಾಷೆ ಕಂಡಿತೇ ನಿನಗೆ? ”ಎಂದು ನಾನು ಗದರುವ ಹೊತ್ತಿಗೆ ಉಳಿದಿಬ್ಬರೂ ಪರಿಸ್ಥಿತಿಯ ಗಂಭೀರತೆಯನ್ನು ಗ್ರಹಿಸಿ ತೆಪ್ಪಗೆ ಕೂತರು.

“ಹಗಲಿರುಳು ಹಾಕ್ಕೊಳ್ಳುವ ಆ ಮೊಬೈಲು ಮುಸುಕು ಅತ್ಲಾಗಿಟ್ಟು ಕನ್ನಡದ ಉಳಿವಿಗಾಗಿ ಏನಾದರೂ ಪ್ರಯೋಜನ ಆಗುವಂಥ ಕೆಲಸವನ್ನು ನಿಮ್ಮಿಂದ ಮಾಡಿಸಬೇಕಾಗಿದೆ. ಅದಕ್ಕಾಗೇ ಈ ಸಭೆ ” ಎಂದೆ.

ಟಿ20 ಯಲ್ಲಿ ವಿರಾಟ್ ಕೊಹ್ಲಿ ಸಿಕ್ಸರ್ ಎತ್ತುತ್ತಿರುವಾಗ ಕರೆಂಟು ಹೋದರೆ ಉಂಟಾಗುವ ಸ್ತಬ್ಧತೆ ಮನೆಯಲ್ಲಿ!.

ಕಬ್ಬಿಣ ಕಾದಾಗಲೇ ಬಡಿಯಬೇಕು ತಾನೇ?

“ಗಮನ ಇಟ್ಟು ಕೇಳಿ. ಇಲ್ಲೀಗ ತುರ್ತಾಗಿ ಆಗಬೇಕಾಗಿರುವುದು ಕನ್ನಡ ಭಾಷೆಯ ಮಾನ ಸಮ್ಮಾನವನ್ನು ಕಾಪಾಡುವ ಕಾರ್ಯಗಳು. ತಮಾಷೆ ಅಲ್ಲ. ನೆರೆಹೊರೆ ಅಷ್ಟೇ ಯಾಕೆ ನಾಲ್ದಿಕ್ಕುಗಳಿಂದಲೂ ಇಲ್ಲಿ ಬಂದಿಳಿದಿರುವ ಬೇರೆ ಭಾಷಾ ಅಂಬೆಯರ ಅಗಾಧ ಭಾರದೊತ್ತಡಕ್ಕೆ ತಾಯಿ ಕನ್ನಡಾಂಬೆ ಮುದುರಿ ಮುದ್ದೆಯಾಗಿ ಬಿಸಿಲಿನಲ್ಲಿಟ್ಟ ಹಳೇ ಮೊಸಂಬಿಯಂತಾಗಿದ್ದಾಳೆ..ಅವಳ ಘಮದ ಪರಿಮಳಕ್ಕೆ ಪರಕೀಯ ಭಾಷೆಗಳ ನಾರು ಸೇರಿ ಆ ನಾರಿನ ಮುಗ್ಗಲು ನಾತಕ್ಕೆ ನಮ್ಮ ಮೂಗುಗಳೇ ಮುಚ್ಚಿಕೊಳ್ಳುತ್ತಿವೆ. ಈಗೀಗಲಂತೂ ಕಂಗ್ಲೀಷು ಕೂಡ ಮಾಯ ಆಗಿ ಬಾಗಿಲು

ಮುಚ್ಚಿಕೊಂಡು ಕವುಚಿ ಮಲಗಿ ಅದೆಂಥದೋ ಅರ್ಥವಾಗದ 'ಮೊಬೈಲಾಂಗ್ವೇಜು' ಎದ್ದು ಕುಣಿಯುತ್ತಿದೆ...ಇದನ್ನು ಹೀಗೆಯೇ ಮುಂದುವರಿಯಗೊಟ್ಟರೆ ಒಂದಿಲ್ಲ ಒಂದು ದಿನ ಇತಿಹಾಸವನ್ನು ಭೇಟಿ ಆಗಲು ಹೋಗುವ ಈ ಶತಮಾನಕ್ಕೆ ನಮ್ಮ ಉತ್ತರವೇನು? ನಮ್ಮ ಕೊಡುಗೆ ಏನು? ಯೋಚನೆ ಬೇಡವೇ?"

ಈ ನನ್ನ ಓತಪ್ರೋತ ಹರಿವಿಗೆ ಕಿವಿಗಳನ್ನು ತೆರೆದಿತ್ತು ಕೂತವರಿಗೆ ಒಮ್ಮೆಲೇ ಜಡಿಮಳೆ ನಿಂತ ಅನುಭವ ಆಗಿರಲೇಬೇಕು, ಆಗಿತ್ತೆಂದು ಅವರೆಲ್ಲರ ಮುಖದಲ್ಲಿ ಕವಿದ ಚಿಂತೆಯ ಕಾರ್ಮೋಡಗಳು ಸಾಕ್ಷಿ ನುಡಿದುವು...

"ಇಷ್ಟು ಹದಗೆಟ್ಟಿತೇ ಪರಿಸ್ಥಿತಿ? ನನಗಂತೂ ತಿಳಿದೇ ಇರಲಿಲ್ಲ "ಮಾವ ಹೀಗೇನೋ ಗೊಣಗಿದ.

"ಪ್ರಾಬ್ಲೆಮ್ ಸೀರಿಯಸ್ ಅನ್ಸುತ್ತೆ...ಸಾಲ್ವ್ ಮಾಡೋದು ಹೇಗೆ ಹೌ? ಹೌ? ಹೌ??"

ಮಗ ಮಗಳು ತಲೆ ಝಾಡಿಸಿ, ತುರಿಸಿ, ಅತ್ತಿತ್ತ ಮತ್ತು ಎತ್ತೆತ್ತಲೋ ಆಕಾಶವನ್ನೇ ನೋಡುತ್ತಾ ಮತ್ತೆ ತಲೆ ಕೆರೆದುಕೊಂಡರು!

ನಾನು ನಕ್ಕೆ..."ಅಷ್ಟು ತ್ರಾಸು ಮಾಡಿಕೊಳ್ಳಬೇಡಿ. ನಾ ಹೇಳುವ ಹಾಗೆ ಮಾಡಿ.ಹೆಚ್ಚು ಏನೂ ಬೇಡ. ನೀವೆಲ್ಲ ಶುದ್ಧ , ಸರಳ ಕನ್ನಡವನ್ನೇ ಮಾತಾಡುತ್ತೇವೆ ಎಂದು ನಿರ್ಧಾರ ಮಾಡಿ ಕನ್ನಡವನ್ನೇ ಬರೆದು ಓದಿ ಮಾತಾಡಿಬಿಟ್ಟರೆ ಅದೂ ಕೂಡ ನಿಮ್ಮಿಂದಾಗುವ ಅಳಿಲ ಸೇವೆ. ಹನಿ ಹನಿ ಕೂಡಿದರೆ ತಾನೇ ಹಳ್ಳ? ಅದಕ್ಕೆ ಮತ್ತು ಆ ಕಾರಣಕ್ಕೆ ಇಂದೇ ಈಗಿನಿಂದಲೇ ನಮ್ಮ ಮಾತೃಭಾಷೆಯಲ್ಲಿ ಪರಕೀಯ ಭಾಷೆಗಳ ಕಲಸು ಮೇಲೋಗರ ಆಗದಿರಲಿ. ನೀವು ಬರೆಯುವ ಶಬ್ದಗಳು ವ್ಯಾಕರಣಕ್ಕೆ ಬದ್ಧವಾಗಿರಲಿ. ಮತ್ತು ದಯವಿಟ್ಟು ಅಗತ್ಯವಿರುವಲ್ಲಿ ಮಹಾಪ್ರಾಣವನ್ನು ತಪ್ಪದೆ ಬಳಸಿ..." ಎಂದೆ ಅನುನಯಿಸುತ್ತ.

"ಮಾತೇನೋ ಸರಿ. ಆಡಬಹುದು ಆದರೆ ನಾನು ಕನ್ನಡ ಬರೆಯುವ ಪ್ರಮೇಯವೇ ಬರುವುದಿಲ್ಲವಲ್ಲ ..."ಮಾವ ಗೊಣಗಿದ. ಇತ್ತೀಚಿಗೆ ಇಂಗ್ಲೀಷೇ ಅವನ ಮಾತೃಭಾಷೆ ಆದಂಥ ಭ್ರಮೆಯಲ್ಲಿದ್ದವನ ಬಗ್ಗೆ ಸೇಡು ತೀರಿಸಿಕೊಳ್ಳಲು ಸಕಾಲ!

"ಮನಸ್ಸಿದ್ದಲ್ಲಿ ಮಾರ್ಗ ಮಾವಾ..." ನಾನು ಕೊಂಕು ನುಡಿದೆನೇ? ಇರಲೂಬಹುದು!

"ಆದರೂ ಗ್ರಾಸ್ ರೂಟ್ ಲೆವೆಲ್ಲಿನಲ್ಲಿ ನೀ ಹೇಳುವ ಪರಿವರ್ತನೆಗಳು ಮೊದಲು ಶುರು ಆಗಲಿ" ಅನ್ನುತ್ತಾ 'ನಿನ್ನ ಆರತಿ ಕೀರ್ತಿಗಳು ಮಾಡಲಿ ಮೊದಲು ನಂತರ ನಾನು" ಎನ್ನುವ ಸೂಕ್ಷ್ಮ ಸಂದೇಶ ಕೊಟ್ಟು ಮಾವ ಎದ್ದು ಹೋದ.

ಈಗ ಮಕ್ಕಳೇ ಮೊದಲ ಹೆಜ್ಜೆಯಿಡುವ ಕಾಲ ಬಂದಾಗಿತ್ತು.

"ಅಮ್ಮಮ್ಮ ಕೇಳು ಈ ಬಾರಿಯ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ನಾ ಕೆನೆಡಿಯನ್ ಟ್ರೆಂಡಿ ಸಾಂಗ್ ಹಾಡುವವನಿದ್ದೆ ಅದನ್ನು ಬಿಟ್ಟು ಬಿಡಲೇ ?" ಅಂದ ಮಗ.

"ಹಾಡುವುದನ್ನು,  ಬಿಡಬೇಡ ಅದರ ಜಾಗದಲ್ಲಿ ಕನ್ನಡ ಗೀತೆ ಹಾಡು" ಅವನಿಗೆ ಹೀಗೊಂದು ಕಡ್ಡಾಯದ ಸಲಹೆ ಕೊಟ್ಟು "ಇನ್ನು ನಾಳೆಯಿಂದ ಅಚ್ಚ ಕನ್ನಡದಲ್ಲೇ ಮಾತಾಡಿ ನೀವಿಬ್ಬರೂ ತಿಳಿಯಿತೇ?" ಎಂದು ಅಂದಿನ ಸಭೆಗೆ ಮುಕ್ತಾಯ ಹಾಡಿದೆ.  ಆದಾಗ್ಯೂ ಸಭಿಕರು ನನ್ನ ಸಲಹೆಗಳನ್ನು ಈ ಪ್ರಮಾಣದಲ್ಲಿ ಶಿರಸಾವಹಿಸುತ್ತಾರೆ ಎಂಬ ಕಲ್ಪನೆ ಲವಲೇಶವೂ  ಇಲ್ಲದೆ ನನ್ನ ಕಾಯಕಗಳಲ್ಲಿ ಮುಳುಗಿದೆ...

ಅಂದೇ ರಾತ್ರಿ ಟಿವಿಯಲ್ಲಿ ಕನ್ನಡ  ವಾಹಿನಿಗಳನ್ನು ಬಿಟ್ಟು ಉಳಿದೆಲ್ಲಾ ವಾಹಿನಿಗಳೂ  ಮಟಾಮಾಯವಾಗಿದ್ದುವು..

ಅದು ಹೇಗೆ ಎಂದು ನಾನು  ಮೂಗಿನ ಮೇಲೆ ಬೆರಳಿಟ್ಟೆ! ಯಾರು ಮಾಡಿದರೋ ಯಾವಾಗ ಮಾಡಿದರೋ ಒಂದೂ ಅರಿಯೆ. ಒಟ್ಟಿನಲ್ಲಿ ಟಿವಿ ಕನ್ನಡಮಯ ಆಯ್ತಲ್ಲ ಅದೇ ಸಂತಸ...

ಅರ್ಧ ಗಂಟೆ ಅದೇ ಟಿವಿಯ ಮುಂದೆ ಕೂತಿದ್ದೆ. ಇದ್ದಕ್ಕಿದ್ದಂತೆ ಎಚ್ಚರವಾಯಿತು. ಎಂದೂ ಇಲ್ಲದ ನಿದ್ದೆ ಇಂದೇಕೆ ಹೀಗೆ ಕವಿದುಬಿಟ್ಟಿತಲ್ಲ ಎಂದು ವಿಸ್ಮಿತಳಾಗುವಷ್ಟರಲ್ಲಿ ಒಳಕೋಣೆಯಿಂದ ಏರು ಜೋರಿನ ಧ್ವನಿಯ ಸಂಭಾಷಣೆ ಚಿಮ್ಮಿ ಹೊರಬಂದು ಕಿವಿಗೆ  ಬಿತ್ತು

"ಏಯ್ ದುರುಳನೇ ಮೊದಲು ನನ್ನ ಕೂದಲನ್ನು ಬಿಡು ನೋವಾಗುತ್ತದೆ..." ಮಗಳು.

"ಇಲ್ಲ ಸೋದರಿ. ನೀನು ಹೀಗೆ ಕಳ್ಳತನಕ್ಕಿಳಿಯಬೇಕೆ?  ಛಿ.. ಛಿ ನಾನಿದನ್ನು ಕನಸಲ್ಲೂ ಎಣಿಸಿರಲಿಲ್ಲ, ಮೊದಲು ನನ್ನ ಗಣಿತ ಶಾಸ್ತ್ರ ಸಹಾಯಕ ಲೆಕ್ಕಣಿಕ ಯಂತ್ರವನ್ನು  ಮರಳಿ ಕೊಡು ( ಕ್ಯಾಲ್ಕ್ಯುಲೇಟರ್?) ಅದುವರೆಗೆ ಬಿಡಲಾರೆ.."ಇದು ನನ್ನ ಮಗನ ಧ್ವನಿ!

"ಭಲೆ ಭಲೆ  ನಿನ್ನ ಮೆದುಳಿನ  ಅಗಾಧ ವಿಸ್ಮರಣೆಯ ದೋಷವನ್ನು ನನ್ನ ಮೇಲೆ ಆರೋಪಿಸಲು ನಿನಗೆಷ್ಟು ಧೈರ್ಯ? ನೀನೇ ಕಳೆದುಕೊಂಡು ನನ್ನ ಮೇಲೆ ಈ ಆಪಾದನೆಯೇ?  ಅಕಟಕಟಾ...  ಅದಷ್ಟೇ ಅಲ್ಲ, ನೀನೇ ನನ್ನ ಸುಗಮಸಂಗೀತದ ಅಡಕಮುದ್ರಿಕೆಯನ್ನು (ಸಿ ಡಿ) ಒಯ್ದು ಅದಾರೋ ನಿನ್ನ ಸ್ನೇಹಿತನಿಗೆ ಕೊಟ್ಟು ಅವನದನ್ನು ಕಳೆದು ಹಾಕಿರುವನಲ್ಲ  ಮರಳಿ ಹುಡುಕಿ ತರಿಸು ಅದನ್ನು..."

"ಮತ್ತೆ 'ನೀ ಕೊಡೆ– ನಾ ಬಿಡೆ' ಮುಂದುವರಿಯಿತು. ನನ್ನ ಎದೆಗುಂಡಿಗೆ ಡವಡವ ಬಾರಿಸಿಕೊಂಡಿತು. ಇವರಿಬ್ಬರೂ ಐತಿಹಾಸಿಕ ನಾಟಕದಲ್ಲಿ ಪಾತ್ರವಹಿಸಿರುವ ಲಕ್ಷಣಗಳೇ ಇವು? ಅನಿಸಿದರೂ ಐತಿಹಾಸಿಕ ನಾಟಕಕ್ಕೂ  ಗಣಿತ ಶಾಸ್ತ್ರಸಹಾಯಕ ಯಂತ್ರ ಅರ್ಥಾತ್ ಕ್ಯಾಲ್ಕುಲೇಟರಿಗೂ ಸಂಬಂಧ ಇರುವುದು ಕಡಿಮೆ ಎಂದು ಲೆಕ್ಕ ಹಾಕಿದೆ.

ಮುಂದೆ ಒಂದೇ ಗಳಿಗೆಯಲ್ಲಿ "ಅಂಮ್ಮಾ..ಅಮ್ಮಾ..ನೋಡು" ಎನ್ನುವ ಆರ್ತನಾದದೊಂದಿಗೆ ಮಗಳೂ "ಕಳ್ಳಿ ಕಳ್ಳಿ ...ಕೊಡು ಕೊಡು"ಎಂದು ಬೊಬ್ಬಿರಿಯುತ್ತ ಮಗನೂ ಕೋಣೆಯಿಂದ ಹೊರಗೋಡಿ ಬಂದು "ನೀನೇ  ಈಗ ನ್ಯಾಯ ತೀರ್ಮಾನಿಸು ಅಬ್ಬೆ" ಎನ್ನುತ್ತಾ ನನ್ನ ಎಡಬಲದ ತೋಳುಗಳನ್ನು ಹಿಡಿದು ನಿಂತರು.

ತಲೆ ಕೆಟ್ಟು ಹೋಗಿ ಇಬ್ಬರಿಗೂ ಒಂದೊಂದು ಗುದ್ದಿ ಅಟ್ಟಿದೆ!

"ಛೆ ಇದು ಅನ್ಯಾಯ..ಸಲ್ಲದು ಅಬ್ಬೆ ನಮ್ಮನ್ನು ಹೀಗೆ ಗುದ್ದುವುದೇ?" ಎಂದು ಗೊಣಗಿಕೊಂಡರು ಅವರಿಬ್ಬರೂ.

ಅಶುದ್ಧ ಕನ್ನಡ ಮತ್ತು ಕಂಗ್ಲೀಷು ಬಿಟ್ಟು ಶುದ್ಧ, ಒಳ್ಳೆಯ ಕನ್ನಡವನ್ನಷ್ಟೇ ಬಳಸಲು ನಾನವರಿಗೆ ಹೇಳಿದ್ದೆ. ಅದರದರ ಪರಿಣಾಮ ಹೀಗಿತ್ತು.

ಮರುದಿನ ಮುಂಜಾನೆ ಮಗ ಹಿಂದೆ ಬಂದು ನಿಂತ..ನಿನ್ನೆಯ ಅತಿಶುದ್ಧ ಕನ್ನಡ ಇವರನ್ನು ಬಿಟ್ಟು ಹೋಗಿದ್ದೀತು ಎನ್ನುವ ದೂರದ ನಿರೀಕ್ಷೆ ಸುಳ್ಳಾಗಿದ್ದು ಅವನ ಮಾತಿಗೆ "ಮಾತೆ, ಈ ತಿಂಗಳಿನ ಆರನೆಯ ದಿನಾಂಕದಂದು ನಾವು ಪ್ರಯಾಣ ಮಾಡುವುದಕ್ಕೆಂದು ಹೊಗೆ ಬಂಡಿಯ ಎರಡು ಮಜಲಿನ ಶಯನ ಕಕ್ಷೆಯಲ್ಲಿ ಸ್ಥಾನಗಳನ್ನು ಕಾದಿರಿಸಿದ್ದೆವಲ್ಲ ಅದರ ಆರಕ್ಷಣಾ ಚೀಟಿಗಳನ್ನು ನಮ್ಮ ಮನೆಯ ಕಿರುಮುದ್ರಣ ಯಂತ್ರದಲ್ಲಿ ಮುದ್ರಿಸಿ ಕೊಡಲೇ?"

ಅವನು ಏನು ಹೇಳುತ್ತಿದ್ದಾನೆ ಎಂದು ತಿಳಿಯಲೇ ಅರೆಕ್ಷಣ ಹಿಡಿಯಿತು. ಅದಾವುದೋ ಗಾದೆ ನೆನಪಾಯಿತು.'ಓದುವುದನ್ನು ಕೊಟ್ಟು ಬಾರಿಸುವುದನ್ನು ಕೊಂಡಂತೆ...ಇನ್ನೀಗ ಈ ಪರಿಸ್ಥಿತಿಯನ್ನು ಸರಿಪಡಿಸಬೇಕಾದವರು ನಾನಲ್ಲದೆ ಇನ್ನಾರು? ಸರಿ ಇನ್ನೊಂದು ತುರ್ತು ಸಭೆ ಕರೆದೆ.

"ಏನು ಕನ್ನಡ ಫೆಸ್ಟ್ ಸ್ಟಾರ್ಟ್ ಆಯಿತೇ?" ಅನ್ನುತ್ತಾ ಬಂದು ಸೇರಿದ ಮಾವ.

"ಮಾಡೋಣ ಮಾಡೋಣ. ಮೊದಲು ನಾನು ನಾಳೆಯಿಂದ ಮನೆಯಲ್ಲಿ ಸರಳ, ಶುದ್ಧ, ದಿನನಿತ್ಯದ ಕನ್ನಡ ಸಂಭಾಷಣೆ /ಮಾತಿನ ಪಾಠಗಳನ್ನು ಹೇಳಿಕೊಡುವೆ. ಪ್ರತಿದಿನ ಅದನ್ನು ಎರಡು ಗಂಟೆ ಕೇಳಿ ಅಭ್ಯಾಸ ಮಾಡಿದರೆ ಇನ್ನೇನೂ ಬೇಡ. ನಿಮ್ಮ ಕನ್ನಡ ಸೇವೆ ಅಲ್ಲಿಗೆ ಪರಿಪೂರ್ಣವಾಗುತ್ತೆ."ಎಂದು ಹೇಳಿ ಅವರನ್ನು ನೋಡಿ ಮುಗುಳುನಕ್ಕೆ.

ಬಾಣ ನಾಟಿತ್ತು. ಹಳೆಗನ್ನಡ ಮಾಯವಾಗಿ ಸರಳ, ಶುದ್ಧ ಕನ್ನಡದ ಮಾತುಗಳು ನನ್ನ ಕಿವಿಗಳಿಗೆ ಬಂದು ಬೀಳುತ್ತ ಸಕಲವೂ ಕರ್ಣಾನಂದಮಯ ಆಗಿಬಿಟ್ಟಿತು...

■

---

# ಕಿರು ಕಿರು ಕಿರುಗತೆಗಳು

**ಇಂಟರ್‌ನೆಟ್‌ನಿಂದ ಹಾರಿಸಿದ್ದು**

ಅವರು ಅವನ ತಂದೆಯನ್ನು ಬಾವುಟ ಸುತ್ತಿ ಹೊತ್ತು ಒಯ್ದರು,
ಆದರೆ ಬಾವುಟ ಮಾತ್ರ ಹಿಂದಕ್ಕೆ ಕೊಟ್ಟರು

***

ನನಗೆ 25 ಆದಾಗ ಒಂದು ಮಗುವಿಗೆ ತಾಯಿ ಆದೆ, 27ಕ್ಕೆ ಎರಡು
ಮಕ್ಕಳ ತಾಯಿ ಆದೆ
55ಕ್ಕೆ ಮೂರು ಮಕ್ಕಳ ತಾಯಿ ಆದೆ, ನನ್ನ ಹಿರಿ ಮಗ ಮದುವೆ ಆಗಿ
ಅವನ ಹೆಂಡತಿಯನ್ನು ಇವತ್ತು ಮನೆಗೆ ಕರೆ ತಂದ.

# ಮನೆ ಮಾರಾಟ

● **ಡಾ. ಶ್ಯಾಮಲಾ ರವಿಶಂಕರ್**

ಸುಬ್ಬ-ಸುಬ್ಬಿ ಊರಿಗೆ ಹೊಸದಾಗಿ ಬಂದವರು ಮನೆ ಕೊಂಡುಕೊಳ್ಳೋ ಪ್ಲಾನು ಹಾಕಿದ್ರು. ಒಳ್ಳೆದೊಂದು ಬಡಾವಣೆ ನೋಡಿ ಚಿಕ್ಕದಾದ ಚೊಕ್ಕದಾದ ಮನೆ ಬೇಕು ಅಂತ ಏಜೆಂಟ್ ವೆಂಕಪ್ಪನಿಗೆ ತಿಳಿಸಿದರು. ಕೂಡಲೇ ಎಷ್ಟೋ ಮನೆಗಳನ್ನ ಪಟ್ಟಿ ವಾಟ್ಸಾಪ್ ಮೂಲಕ ರವಾನೆ ಮಾಡಿದ ಏಜೆಂಟ್ ವೆಂಕಪ್ಪ. ಆದ್ರಲ್ಲಿ ಒಂದನ್ನ ಆರಿಸಿಕೊಂಡು ಸುಬ್ಬ ಸುಬ್ಬಿಯರು ವೆಂಕಪ್ಪನ ಸಮೇತ ಆ ಮನೆ ತಲುಪಿದರು. ಇದ್ದದ್ದನ್ನು, ಇಲ್ಲದ್ದನ್ನೂ ಸೇರಿಸಿ ಜೋರಾಗಿ ಶಿಫಾರಸಿನ ಮೇಲೆ ಶಿಫಾರಸು ಮಾಡಿದ ವೆಂಕಪ್ಪ. ಮನೆ ಚೆನ್ನಾಗಿದೆ, ಆದ್ರೆ ಫರ್ನಿಚರ್ ಸಮೇತ ಯಾಕೆ ಮಾರ್ತಾ ಇದ್ದಾರೆ ಅಂತ ಸುಬ್ಬಿಗೆ ಅನುಮಾನ. ಅದಿರಲಿ, ಹತ್ತಿರ ಪಕ್ಕದಲ್ಲಿ ಹರಿಶ್ಚಂದ್ರ ಘಾಟು ಇದೆಯಾ, ದೊಡ್ಡ ಮೋರಿ? ಸುಬ್ಬನ ಡೌಟು. ಇಲ್ಲ ಸರ್, ಅವೆಲ್ಲದಕ್ಕೂ ತುಂಬಾ ದೂರ ಹೋಗಬೇಕು. ಅದರ ಯೋಚನೆ ಯಾಕೆ ಈಗ. ಶುಭ್ ಶುಭ್ ಬೋಲೊ ಅಂತ ಬಾಯಿ ಮುಚ್ಚಿಸಿದ ವೆಂಕಪ್ಪ. ತಿಪ್ಪೆಗುಂಡಿ? ಸುಬ್ಬನ ಯೋಚನೆ. ಇಲ್ಲಲ್ಲೂ ಕಂಡಿಲ್ಲ. ಆದರೆ ಅಕ್ಕಪಕ್ಕದವರ ಜೊತೆ ಜಗಳ ಆಡ್ಕಂಡ್ರೆ ಬೆಳಗಾಗೋ ಹೊತ್ತಿಗೆ ಕಂಪೌಂಡ್‌ನಲ್ಲಿ ಕಸ ಆಗದೆ ಇರೋ ಹಾಗೆ ನೋಡ್ಕೋಬೇಕು, ಅದು ಎಲ್ಲ ಕಡೆಗೂ ಅನ್ವಯಿಸುತ್ತೆ ಅಲ್ವೆ?. ಸುಬ್ಬ ಕೇಳಿದ, ಓಕೇ, ಬಸ್ ಸ್ಟಾಪು? ಎಲ್ಲ ಒಂದು ಕಿಲೋ ಮೀಟರ್ ಒಳಗೆ ಇದೆ ಅಂತಾನೂ ತಿಳಿಯಿತು. ಹಣದ ವಿಷಯವೂ ಚೌಕಾಸಿ ಅದೂ ಇದೂ ನಡೆದು ಅಂತೂ ಒಪ್ಪಂದಕ್ಕೆ ಬಂದರು.

ಓನರ್ ಯಾರು, ಯಾತಕ್ಕೆ ಮಾರ್ತಾ ಇದ್ದಾರೆ ಅನ್ನೋ ವಿಷಯಕ್ಕೆ ಬಂದಾಗ, ವೃದ್ಧ ದಂಪತಿಗಳು, ಕೆನಡಾನಲ್ಲಿ ಮಗನ ಜೊತೆ ಇದ್ದಾರೆ, ಹಣದ ಅವಶ್ಯಕತೆ ಇದೆ ಅಂತ ಮಾರ್ತಾ ಇದ್ದಾರೆ, ಆತನ ಭಾವ ಮೈದುನ ಅವರ ಪರವಾಗಿ ಕೆಲಸ ನಡೆಸಿ ಕೊಡ್ತಾನೆ. ಇಷ್ಟು ವಿಷ್ಯ ಸಂಗ್ರಹಿಸಿದ ಸುಬ್ಬ ಇದ್ದಕ್ಕಿದ್ದಂತೆ ಹಾಗಾದ್ರೆ ಈ ಮನೆ ನಮಗೆ ಬೇಡಾಂತ ಆತ ಎದ್ದು ಹೊರಟೇ ಬಿಟ್ಟ. ಅಯ್ಯಯ್ಯೋ ಅಂತ ಓಡಿದ ಪಾಪ ಏಜೆಂಟ್ ಮಹಾಶಯ ಆತನ ಹಿಂದೆ ಹಿಂದೆ ... ಪೂಸಿ ಹೊಡೆದ... ಉಹೂಂ, ಬಾಯೇ ಬಿಡಲೊಲ್ಲರೂ ಸುಬ್ಬ ಸುಬ್ಬಿ! ಅಲ್ಲ, ಅಲ್ಲ, ಸುಬ್ಬಿ ಮುಂದೆ ಸುಬ್ಬ ಬಾಯಿ ಬಿಡಲೊಲ್ಲ.


ಅಂತೂ ನಮ್ಮ ಏಜೆಂಟ್ ಮಹಾಶಯ ಪತ್ತೇದಾರಿ ಕೆಲಸ ಮಾಡಿ ವಿಷಯ ತಿಳಿದು ಕೊಂಡ. ಸ್ವಲ್ಪ ದಿನ ಅವರ ಗೋಜಿಗೆ ಹೋಗದೆ ಇದ್ದ. ಒಂದು ದಿನ ತಾನೇ ಫೋನಾಯಿಸಿ ಸುಬ್ಬನಿಗೆ "ಸರ್, ಆ ಮನೆ ಮೇಲೆ ನಿಮಗೆ ಇನ್ನೂ ಇಷ್ಟ ಇದ್ರೆ ಹೇಳಿ, ಮನೆಯವರಿಗೆ ಹಣದ ಅಗತ್ಯ ಬಹಳವಾಗಿದೆಯಂತೆ. ನೀವು ಹೂಂ ಅಂದರೆ ಕೆಲಸ ನಾಳೆನೇ ಮುಗಿಸಬಹುದು. ಆ ಮನೆ ಕಡೆ ಬನ್ನಿ, ಅಲ್ಲಿ ಮಾತಾಡೋಣ. "ಏನೋ ಇರಲಿ ಚಾನ್ಸು ನೋಡೆ ಬಿಡೋಣ ಅಂತ ಹೊರಟರು ಸುಬ್ಬ ದಂಪತಿಗಳು. ಏಜೆಂಟು "ಸರ್ ನಿಮ್ಮ ಒಪ್ಪಿಗೇನ ಬೇಗ ಡಿಸೈಡ್ ಮಾಡಿ. ಕಾರ್ ಅಪಘಾತದಲ್ಲಿ ಆ ದಂಪತಿಗಳು ಸೀರಿಯಸ್ ಆಗಿ ಆಸ್ಪತ್ರೆ ಸೇರಿದ್ದಾರೆ. ಬೇರೆ ದೇಶಗಳ ಆಸ್ಪತ್ರೆ ಖರ್ಚು ಅಂದ್ರೆ ಸುಮ್ನೆನಾ? ಅದಕ್ಕೆ ಅವರು ಮಾರೋಕೆ ಸಿದ್ಧವಾಗಿರೋದು. ಎಚ್ಚರ ಬಂದಾಗೆಲ್ಲ ಮನೆ ಮಾರಾಟ ಆಯಿತಾ ಅಂತ ಹೇಳ್ಕೊಳ್ತ ಇದ್ದಾರಂತೆ. ಆತ, ಪಾಪ ತಮ್ಮಿಂದ ಮಗನಿಗೆ ಕಷ್ಟ ಆಯ್ತಲ್ಲ ಅಂತ ಇರಬೇಕು ಮನಸ್ಸಿನಲ್ಲಿ"

ಡೀಲು ಆಯ್ತು, ವೆಂಕಪ್ಪನಿಗೆ ಕಮಿಷನ್ ಸಿಕ್ತು. ಸುಬ್ಬುನ ಪ್ರೈವೇಟ್ ಆಗಿ ಮಾತಾಡಿಸಿದಾಗ ವೆಂಕಪ್ಪನ ಪತ್ತೇದಾರಿ ತಪ್ಪಾಗಲಿಲ್ಲ. ಈಗಲೋ ಆಗಲೋ ಹಿರಿಯರು ಶಿವನ ಪಾದ ಸೇರ್ತಾರೇ, ಹಾಗೆ ತಾವಿಬ್ರೂ ಸೇರ್ತೀವಿ, ಅಲ್ಲೂ ಜೊತೆಜೊತೆಯಾಗಿರ್ತೀವಿ ಅನ್ನೋ ಸೆಂಟಿಮೆಂಟ್ ಅಂತೇ ಅವರದ್ದು. ಭೇಷ್, ಪ್ರೀತಿ ಅಂದರೆ ಇದು!! ಅಥವಾ ಸುಬ್ಬಿ ಕೊಟ್ಟ ಟ್ರೈನಿಂಗ್ ಕ್ಯಾರಿ ಫಾರ್ವರ್ಡಾ?

ಸುಬ್ಬನಿಗೆ ಗೊತ್ತಿಲ್ಲದೇನೆ ಕೆನಡಾದಿಂದ ನಾಟಕ ಮಾಡಿದ್ದು ಮಾಜಿ ಓನರ್!! ■

# ಭಾವದ ಹಕ್ಕಿ, ಹನಿಗವನಗಳು

ಲೇಖಕಿ: **ಆರತಿ ಘಟಿಕಾರ್**




ಪ್ರಕಾಶಕರು:
ಶ್ರೀನಿವಾಸ ಪುಸ್ತಕ ಪ್ರಕಾಶನ,
ಬೆಂಗಳೂರು 560004.

ಮಿನಿಮಮ್ ಗವರ್ನನ್ಸ್ ಮ್ಯಾಕ್ಸಿಮಮ್ ಗವರ್ನಮೆಂಟ್ ಎಂಬುದು ಇತ್ತೀಚಿನ ರಾಜಕೀಯ ಮಂತ್ರ. ಇದನ್ನು ಹನಿಗವನಗಳ ಬಗ್ಗೆಯೂ ವ್ಯಾಖ್ಯಾನಿಸಬಹುದು. ಅಂದರೆ ಮಿನಿಮಮ್ ಪದಗಳು ಮ್ಯಾಕ್ಸಿಮಮ್ ಅರ್ಥ. ಕನ್ನಡದ ಇಂದಿನ ಹನಿಗವನಗಳಿಗೆ ದಿನಕರ ದೇಸಾಯಿ, ಮಿತ್ರ, ಪಾ.ವೆಂ. ಮುಂತಾದವರು ಸ್ಫೂರ್ತಿ. ನಂತರ ದುಂಡಿರಾಜರು ಇದನ್ನು ಇನ್ನೊಂದು ಎತ್ತರಕ್ಕೆ ಕೊಂಡೊಯ್ದರು. ಇದೀಗ ಅಪರಂಜಿ ಬಳಗದ ಆರತಿ ಘಟಿಕಾರ್ ಅವರು ಈ ಕ್ಷೇತ್ರದಲ್ಲಿ ಕೈ ಆಡಿಸತೊಡಗಿದ್ದಾರೆ. ಅವರ ಎರಡನೆಯ ಹನಿಗವನ ಸಂಕಲನ “ಭಾವದ ಹಕ್ಕಿ” ಇದೀಗ ಮುದ್ರಣ ಕಂಡಿದೆ. ಮಿನಿಮಮ್ ಸಾಲು/ಪದಗಳಲ್ಲಿ ರಚಿಸಿಕೊಳ್ಳುವ ಹನಿಗವನಗಳು ಅರ್ಥಪೂರ್ಣ ಪ್ರಾಸ, ಪಂಚ್, ವಿಡಂಬನೆ, ಮೂರ್ತಿ ಚಿಕ್ಕದಾದರೂ ಅರ್ಥದಲ್ಲಿ ಎತ್ತರವಾಗಿ, ಗುಟುಕು ಗುಟುಕಿನಲ್ಲೇ ರಸಾನುಭವದ ಸ್ವಾದ ನೀಡುತ್ತ ತುಟಿಯಲ್ಲಿ ನಗೆ ಅರಳಿಸಿ, ಮನಸನ್ನು ಕಾಡುವಂತಹವು. “ಒಬ್ಬ ಶ್ರೇಷ್ಠ ಸಂಗೀತಕಾರನ ಕಛೇರಿಯಲ್ಲಿ ಸಂಗೀತದ ಮತ್ತು ತಲೆಗೇರಿ ಹೇಗೆ ‘ವ್ಹಾ... ಕ್ಯಾ ಬಾತ್ ಹೈ’ ಎಂಬ ಸಂತೋಷದ ಉದ್ಗಾರ ಹೇಗೆ ತಂತಾನೇ ಹೊರಡುತ್ತದೆಯೋ ಹಾಗೆಯೇ ಆರತಿ ಘಟಿಕಾರರ ಹನಿಗವನಗಳನ್ನು ಓದುತ್ತಾ ಹೋದಂತೆ ‘ವ್ಹಾ... ಕ್ಯಾ ಬಾತ್ ಹೈ’ ಎಂಬ ಮೆಚ್ಚುಗೆಯ ಉದ್ಗಾರಗಳು ತಂತಾನೇ ಹೊರಡುತ್ತವೆ” ಎಂದು ಮುನ್ನುಡಿಯಲ್ಲಿ ಶ್ರೀನಿವಾಸ ವೈದ್ಯರು ಹೇಳುತ್ತಾರೆ. “ಆರತಿ ಅವರ ಹನಿಗವನಗಳಲ್ಲಿ ವಿಷಯದ ಗಾಂಭೀರ್ಯವಿದೆ. ಗಾಂಭೀರ್ಯಕ್ಕೆ ತಕ್ಕುದಾದ ಪದಲಾಲಿತ್ಯವಿದೆ, ಲಯವಿದೆ. ಗಾತ್ರದಲ್ಲಿ ಹನಿಗವನವೆಂದರೂ, ಸೃಜನಶೀಲತೆಯ ಮಟ್ಟದಲ್ಲಿ, ಕಾವ್ಯ ಪ್ರತಿಭೆಯಲ್ಲಿ, ಬೀರುವ ಪ್ರಭಾವದಲ್ಲಿ ಎಂತಹ ಪ್ರಬುದ್ಧ ಕವಿತೆಗೂ ಸಾಟಿಯಾಗಿ ನಿಲ್ಲಬಲ್ಲವೆಂಬುದು ಹನಿಗವನಗಳ ಭವಿಷ್ಯದ ಬಗ್ಗೆ ಭರವಸೆ ಮೂಡಿಸುತ್ತದೆ” ಎಂಬದು ವೈದ್ಯರ ಅಭಿಪ್ರಾಯ.

ದಿನನಿತ್ಯದ ಆಗುಹೋಗುಗಳು, ಸಾಮಾಜಿಕ, ರಾಜಕೀಯ ವಿದ್ಯಮಾನಗಳು, ಸುಂದರ ಪ್ರಕೃತಿ ಹೀಗೆ ನಾನಾ ಸಂಗತಿಗಳು ಆರತಿ ಅವರ ಹನಿಗವನ ರಚನೆಗೆ ಪ್ರೇರಣೆ. ಇವುಗಳನ್ನು ಕೆಲವೊಮ್ಮೆ ಹಾಸ್ಯದ ನೆಲೆಯಲ್ಲಿ ನೋಡಿದರೆ ಮಗದೊಮ್ಮೆ ಭಾವನಾತ್ಮಕ ಪರಿಧಿಯಲ್ಲಿ ರಚಿಸಲು ಪ್ರಯತ್ನಿಸಿದ್ದಾರೆ. ಅವುಗಳು ಈ ಸಂಕಲನದಲ್ಲಿ ಸೇರಿವೆ.

ಆಯ್ದ ಕೆಲವು ಹನಿಗವನಗಳು ಪುಟ 29ರಲ್ಲಿದೆ. ಆನಂದಿಸಿ.>>>

# ಅಡಿಗೆ ಮನೆ ಲವ್

● ಬೇಲೂರು ರಾಮಮೂರ್ತಿ

ಪ್ರೀತಿ ಹೇಗೆ ಬೇಕಾದರೂ ಹುಟ್ಟುತ್ತದೆ
ಆದರೆ ಎರಡು ಹೃದಯಗಳನ್ನು
ಹತ್ತಿರ ಮಾಡಲು ಅದು ಕಾಯುತ್ತದೆ

ಹೌದು ಪ್ರೀತಿ ಹೇಗೆ ಬೇಕಾದರೂ ಹುಟ್ಟಬಹುದು. ಅದನ್ನು ಹುಡುಕಿಕೊಂಡು ಹೋದವರನ್ನು ಅದು ಕಾಡಿಸಬಹುದು. ಗೊತ್ತೇ ಇಲ್ಲದಂತಿರುವವರ ಎದುರಿಗೆ ಅದು ಧುತ್ತೆಂದು ಬಂದು ನಿಲ್ಲಬಹುದು. ಅಂದ ಮೇಲೆ ಪ್ರೀತಿಯಾಗುವುದು ಒಂದು ದೈವ ಸಂಕೇತ ಎನ್ನಬಹುದೇ, ಯೋಗಾಯೋಗ ಎನ್ನಬಹುದೇ. ಇದಕ್ಕೊಂದು ನಿದರ್ಶನವೆನ್ನುವಂತಿದೆ ಹಿಂದೆ ನಡೆದಿರುವ ಈ ಘಟನೆ.

ಸುಮ ಒಂದು ಹಳ್ಳಿಯಲ್ಲಿ ಬೆಳೆದ ಹುಡುಗಿ. ಆಗಿನ ಕಾಲದಲ್ಲಿ ಟಿವಿ ಮೊಬೈಲ್ ಮುಂತಾದುವುಗಳೆಲ್ಲ ಇಲ್ಲದಿದ್ದುದರಿಂದ ಪ್ರೇಮಿಗಳ ಕಲ್ಪನೆ ಅವರು ನೋಡುತ್ತಿದ್ದ ಸಿನಿಮಾ, ಓದುತ್ತಿದ್ದ ಕಾದಂಬರಿಯ ಪಾತ್ರಗಳು ಇವುಗಳಿಗೆ ಸೀಮಿತವಾಗುತ್ತಿತ್ತು. ಹದಿನೆಂಟು ತುಂಬಿದ ಸುಮಳಿಗೆ ಒಳಗೊಳಗೇ ಇದೇನು ಆಗುತ್ತಿದೆ ಎನ್ನುವುದರ ಅರಿವು ಆಗಿರಲಿಲ್ಲ. ಬೆಳಗೆದ್ದರೆ ಏನೋ ಉಲ್ಲಾಸ, ದಿನಗಳೆಯುತ್ತಿದ್ದಂತೆ ಏನೋ ತಳಮಳ, ಒಮ್ಮೆ ಆತಂಕ, ಒಮ್ಮೆ ಆನಂದ, ಏನನ್ನೋ ನೋಡಿದರೆ ಸಂತಸ, ಇನ್ನೇನನ್ನೋ ನೋಡಿದರೆ ಗಲಿಬಿಲಿ ಹೀಗೆ. ಇಂಥಾ ಪರಿಸ್ಥಿತಿಗಳನ್ನು ಅವಳ ಓರಗೆಯವರ ಬಳಿ ಮಾತ್ರ ಹೇಳಿಕೊಳ್ಳಬಹುದು. ಇದರ ಜೊತೆಗೆ ಈಚೆಗೆ ಅವಳು ದೇವಸ್ಥಾನದ ಸಿಹಿನೀರಿನ ಭಾವಿಗೆ ಹೋಗಿ ಒಂದೆರಡು ಕೊಡ ನೀರು ಸೇದಿಕೊಂಡು ಬರುವಾಗ ಅವಳ ಮೇಲೆ ಬೀಳುತ್ತಿದ್ದ ಹುಡುಗರ ನೋಟ ಅವಳಿಗೆ ತಲ್ಲಣ ಮೂಡಿಸುತ್ತಿತ್ತು. ಅವರ ನೋಟ ಒಂದು ರೀತಿ ಹಿತ ತಂದುಕೊಟ್ಟರೂ ಮರುಕ್ಷಣವೇ ಭಯ ಉಂಟುಮಾಡುತ್ತಿತ್ತು. ಅವಳೇ ಒಂದೊಂದು ಬಾರಿ ಅಂಗಡಿಗೆ ಹೋಗಿ ಮನೆಗೆ ಬೇಕಾದ ಸಣ್ಣಪಟ್ಟ ಪದಾರ್ಥಗಳನ್ನು ತರುವುದಿತ್ತು. ಆಗ ಅಂಗಡಿಯವನು ಕೈ ಮುಟ್ಟಿ ಚಿಲ್ಲರೆ ಕೊಡುತ್ತಿದ್ದ. ಪಕ್ಕದಲ್ಲಿ ನಿಲ್ಲುತ್ತಿದ್ದವರು ಅವಳಿಗೆ ಮೈ ತಾಕಿಸುತ್ತಿದ್ದರು. ಇವೆಲ್ಲಾ ಅವಳಿಗೆ ಹೊಸ ಅನುಭವ. ಇಷ್ಟು ದಿನ ಮಾತಾಡಿಸದೇ ಇದ್ದವರೂ ಕೂಡಾ ಏನೋ ವಿಚಾರ ತೆಗೆದು ಮಾತಾಡಿಸುತ್ತಿದ್ದರು. ಏನು ಏನು ಏನು ಅಂತ ನೂರು ಪ್ರಶ್ನೆಗಳನ್ನು ಅವಳಲ್ಲಿಯೇ ಕೇಳಿಕೊಳ್ಳುತ್ತಿದ್ದಳು. ತನ್ನ ಓರಗೆಯ ಹುಡುಗಿಯರ ಬಳಿ ಕೇಳಿದರೆ ಅವರು ಏನೆಂದುಕೊಳ್ಳುತ್ತಾರೋ ಎನ್ನುವ ಸಂಕೋಚ. ಅಮ್ಮನಲ್ಲಂತೂ ಕೇಳುವ ಹಾಗೇ ಇಲ್ಲ. ಅಮ್ಮ ಬೇರೆ ಈಚೀಚೆಗೆ ಸುಮ್ಮಸುಮ್ಮನೆ ಎಚ್ಚರಿಕೆಯ ಮಾತುಗಳನ್ನು ಹೇಳುತ್ತಿರುತ್ತಾಳೆ.

ಇಂಥಾ ಸಂದರ್ಭದ ಒಂದು ದಿನ ಪಕ್ಕದ ಮನೆಗೆ ಬಂದ ಬೆಂಗಳೂರಿನ ಹುಡುಗಿ ನಯನ ಪರಿಚಯವಾಯಿತು. ನಗರದ ಬದುಕಿಗೂ ಹಳ್ಳಿಯ ಬದುಕಿಗೂ ಅಜಗಜಾಂತರ. ನಯನ ಹೇಳುತ್ತಿದ್ದ ನಗರದ ಸಮಾಚಾರಗಳನ್ನು ಕೇಳಿ ಸುಮ ಮತ್ತವರ ಗೆಳತಿಯರು ಕಣ್ಣರಳಿಸುತ್ತಿದ್ದಳು. ನಯನ ಮಾತಾಡುತ್ತಾ ನನಗೆ ಸಿಂಚನ ಜೊತೆ ಕ್ರಷ್ ಆಗದೆ ಅಂದಳು. ಸುಮಗೆ ಹಾಗೆಂದರೇನೆಂದೇ ಗೊತ್ತಾಗಲಿಲ್ಲ. ನಂತರ ನಯನ ಬಿಡಿಸಿ ಹೇಳಬೇಕಾಯಿತು. ಕ್ರಷ್ ಹೇಗಾಗುತ್ತೆ, ಅದಕ್ಕೆ ತಯಾರಿ ಏನು

ಇತ್ಯಾದಿ ತಿಳಿದಿರಲಿಲ್ಲ. ನೋಡ್ರೇ ಯಾವುದಾದರೂ ಹುಡುಗ ನೋಡುವ ನೋಟಕ್ಕೆ ನಿಮ್ಮ ಕಣ್ಣಲ್ಲ, ಹೃದಯ ಪ್ರತಿಕ್ರಿಯೆ ನೀಡಿದರೆ ಕ್ರಷ್ ಆಗಿದೆ ಅಂದಳು. ಒಂದೇ ನೋಟದಲ್ಲಿ ಪ್ರೀತಿ ಹುಟ್ಟಿಬಿಡುತ್ತೆ ಕಣ್ರೇ. ನಾನು ಅವನನ್ನು ನೋಡೇ ಇರಲಿಲ್ಲ. ಒಂದು ದಿನ ನಮ್ಮ ಮನೆಗೆ ಬಂದು ನಮ್ಮ ತಂದೆ ಹತ್ರ ಮಾತಾಡ್ತಾ ಕೂತಿದ್ದ. ನಮ್ಮ ದೂರದ ಬಂಧುವಂತೆ. ನಾನು ಕಾಫಿ ಕೊಟ್ಟಾಗ ನನ್ನನ್ನು ನೋಡಿದ. ನಾನೂ ನೋಡಿದೆ. ಅಷ್ಟೆ. ಅದೇ ಕ್ರಷ್. ಆಮೇಲೆ ಕಾಫಿ ಚನ್ನಾಗಿ ಮಾಡಿದ್ರಿ. ನೀವೇ ಮಾಡಿದ್ದಾ. ನಿಮ್ಮ ಜಡೆ ಚನ್ನಾಗಿದೆ ಅಲ್ಲೊಂದು ಹೂವು ಇದ್ದರೆ ಇನ್ನೂ ಚನ್ನಾಗಿರುತ್ತೆ ಅಂದ ಕಣ್ರೇ ಅದೇ ಕ್ರಷ್. ಇನ್ನೊಂದು ತಮಾಷೆ ಗೊತ್ತಾ ನನ್ನ ಹೃದಯ ಅವನ ಹೃದಯ ಎರಡೂ ಒಂದಾಗೋ ತೀರ್ಮಾನ ಮಾಡಿಬಿಟ್ಟು ನಮ್ಮನ್ನು ನಿಯಂತ್ರಿಸುತ್ತಿದ್ದವು. ಅವನು ಹೊರಡುವಾಗ ಕಾಫಿ ಚನ್ನಾಗಿತ್ತು ಅಂತ ಕೈ ನೀಡಿದಾಗ ನಾನೂ ಕೈ ನೀಡೇಬಿಟ್ಟೆ. ಇದೇ ಕಣ್ರೇ ಕ್ರಷ್.

ನಯನ ಇನ್ನೂ ಏನೇನು ಹೇಳ್ತಾ ಇದ್ದಳೋ ಆದರೆ ಅಮ್ಮನ ಧ್ವನಿ ಕೇಳಿ ಸುಮ ಮನೆಗೋಡಿಬಂದಳು. ಆದರೆ ಮುಂದಿನ ಒಂದು ವಾರ ಅವಳ ವಿಹಾರ ಕಲ್ಪನಾ ಲೋಕದಲ್ಲಿ. ಒಳಗೊಳಗೇ ಬಯಕೆ ನನಗೂ ಅಂಥಾ ಒಂದು ಅನುಭವ ಅಗಬಾರದೇ ಅಂತ. ಅಂದಿನಿಂದ ಸುಮ ಪ್ರಪಂಚವನ್ನು ನೋಡುವ ದೃಷ್ಟಿಯೇ ಬೇರೆಯಾದರೆ ಪ್ರಪಂಚವೂ ಅವಳನ್ನು ನೋಡುವ ದೃಷ್ಟಿ ಬೇರೆಯಾಯಿತು.

ಅಪ್ಪ ಎಂದಿನಂತೆ ಜಮೀನಿನ ಬಳಿ ಹೋಗಿದ್ದರು. ಸುಮಗೆ ದಿನಾಗಲೂ ಸಾಕಷ್ಟು ಮನೆಗೆಲಸಗಳು ಇರುತ್ತವೆ. ಅವಳು ಏನೇ ಕೆಲಸ ಮಾಡುತ್ತಿದ್ದರೂ ಮನದ ಚಿಂತೆ ಕ್ರಷ್ ಬಗ್ಗೆ. ಅಮ್ಮ " ಒಂದರ್ಧ ಗಂಟೆ ದೇವಸ್ಥಾನಕ್ಕೆ ಹೋಗಿಬರ್ತೀನಿ, ನಿಮ್ಮಪ್ಪ ಬರೋದರೊಳಗೆ ಅಡಿಗೆ ಆಗಿರಲಿ" ಅಂದು ಹೋದರು. ಸುಮಗೆ ಕೈ ತುಂಬಾ ಕೆಲಸ. ಆದರೂ ಇತ್ತೀಚಿನ ದಿನಗಳಲ್ಲಿ ಅವಳ ಮನದಲ್ಲಿ ಮೂಡಿರುವ ಭಾವನೆಗಳಿಂದ ಜೀವನ ಸೊಗಸಾಗಿತ್ತು.

ಯಾರದೋ ಧ್ವನಿ ಯಾರ್ರೀ ಒಳಗೆ, ಗೌರಮ್ನೋರೇ ಏನ್ ಮಾಡ್ತಿದೀರ ಅಂದುಕೊಂಡು ಒಬ್ಬ ಯುವಕ ಮನೆಯೊಳಗೆ ಬಂದ. ಓ ಸುಮ ನೀನಾದ್ರೂ ಇದೀಯಲ್ಲ ಒಂದು ಕಪ್ ಬಿಸಿಬಿಸಿ ಕಾಫಿ ಕೊಡು ತಲೆ ನೋಯ್ತಿದೆ ಅಂದ. ಸುಮ ಹೊರಗೆ ಬಂದು ನೋಡಿದರೆ ಪುಟ್ಟ. ಏನೋ ನಮ್ಮನೆಗೆ ಬಂದು ಒಂದು ವರ್ಷ ಆಗಿತ್ತೇನೋ ಇರು ಕಾಫಿ ತಂದುಕೊಡ್ತೀನಿ ಅಂದು ಅಡಿಗೆ ಮನೆಗೆ ಹೋದಳು. ಪುಟ್ಟ ಹಿಂದೆಯೇ ಬಂದು ನಿಂತಿದ್ದು ಅವಳಿಗೆ ಗೊತ್ತಾಗಲಿಲ್ಲ. ಕಾಫಿ ಮಾಡಿ ಸರಕ್ಕನೆ ತಿರುಗಿದಾಗ ಪುಟ್ಟ ಹಿಂದೆಯೇ ನಿಂತಿದ್ದು ಅವಳಿಗೆ ಗಾಬರಿಯಾಗದಿದ್ದರೂ ಅಚ್ಚರಿಯಾಯಿತು. ಇದೇನೋ ಇಲ್ಲಿ ಬಂದು ನಿಂತಿದೀಯ ಅಂದಳು. ನಾನು ಬರಲಿಲ್ಲ ಕಣೆ ನನ್ನ ಮನಸ್ಸು ಕರ್ಕೊಂಡು ಬಂತು ಅಂದ. ಕಾಫಿ ಲೋಟದೊಂದಿಗೆ ಅವಳ ಕೈ ಕೂಡಾ ತಾಕಿತು. ಅವನು ಸವರಲಿಲ್ಲ. ಇಬ್ಬರೂ ಅದೂ ಇದೂ ಹರಟಿದರು. ನಡುನಡುವೆ ನಕ್ಕರು, ಇನ್ನೇನು ಅಮ್ಮ ಬರ್ತಾಳೆ ಇರು ಅಂದು ಅಡಿಗೆ ಮನೆ ಕಡೆ ಹೊರಟಳು. ಇಲ್ಲಿ ಒಬ್ಬನೇ ಬೇಜಾರು ನನಗೂ ಏನಾದರೂ ಕೆಲಸ ಕೊಡು ನಾನೂ ಅಡಿಗೆ ಮನೆಯಲ್ಲಿ ಇರ್ತೀನಿ ಅಂದು ಹಿಂದೆ ಹೊರಟ. ಇದೇನೇ ನಿನ್ನ ಜಡೆ ಇಷ್ಟುದ್ದ ಇದೆ. ಚೌರಿ ಹಾಕ್ಕೊಂಡಿದೀಯ ಅಂತ ಕೇಳಿದ. ನಕ್ಕಳು. ನಾನು ಚೌರಿ

ಹೇಗೆ ಬೇಕಾದರೂ ಹಾಕ್ಕೊಳ್ತೀನಿ ಅದನ್ನು ಕಟ್ಕೊಂಡು ನಿನಗೇನೋ ಅಂದು ಹುಸಿಮುನಿಸು ತೋರಿದಳು. ಪುಟ್ಟ ಅವಳ ಜಡೆ ಹಿಡಿದು ಇನ್ನು ಮುಂದೆ ನಿನ್ನನ್ನು ಕಟ್ಕೊಂಡು ನನಗೆ ಎಲ್ಲ ಆಗಬೇಕಾಗಿದೆ ಅಂದ. ಅಂದ್ರೆ ನೀನು ನನ್ನ ಮದುವೆ ಮಾಡ್ಕೊತೀಯಾ ಅಂದು ಹುಬ್ಬು ಕುಣಿಸಿದಳು ಸುಮ.

ಮನೆಯುವರಿಗೆ ಈ ವಿಚಾರ ತಿಳಿದಾಗ ಎರಡೂ ಮನೆಯುವರು ನಿಟ್ಟುಸಿರುಬಿಟ್ಟರು. ನಮ್ಮ ಪುಟ್ಟನಿಗೆ ಹುಡುಗಿ ತೋರಿಸಿ ತೋರಿಸಿ ಸಾಕಾಗಿತ್ತು. ಕಡೆಗೆ ಅವನೇ ಒಂದು ಹುಡುಗಿ ಒಪ್ಪೊಂಡ್ನಲ್ಲ ಅದೇ ಸಮಾಧಾನ ಅಂದರು. ಸುಮನ ಮನೆಯವರು ಅವಳು ನೋಡಿದ ಮೊದಲ ಹುಡುಗನನ್ನೇ ಮೆಚ್ಚಿದ್ದಲ್ಲ ಇದನ್ನೇ ಋಣಾನುಬಂಧ ಅನ್ನಬಹುದು. ಹಿರಿಯರೊಬ್ಬರು ಇವರಿಬ್ಬರೂ ಪ್ರೀತಿ ತೋಡಿಕೊಂಡಿದ್ದು ಅಡಿಗೆ ಮನೆಯಲ್ಲಾದ್ದರಿಂದ ಇದನ್ನು ಅಡಿಗೆ ಮನೆ ಲವ್ ಎನ್ನಬಹುದೇ ಅಂದಾಗ ಎಲ್ಲರೂ ನಕ್ಕರು. ಪ್ರೀತಿಯೂ ನಕ್ಕು ನಾನು ಯಾವಾಗ ಯಾರಲ್ಲಿ ಹೊಕ್ಕು ಯಾರನ್ನು ಯಾರ ತೆಕ್ಕೆಗೆ ಬೀಳಿಸುತ್ತೀನಿ ಅನ್ನೋದು ನನಗೆ ಮಾತ್ರ ಗೊತ್ತು. ಎಲ್ಲರೂ ನನಗೆ ಅಧೀನ ಎಂದದ್ದು ಮಾತ್ರ ಯಾರಿಗೂ ಕೇಳಿಸಲಿಲ್ಲ.

■

---

## 'ಭಾವದ ಹಕ್ಕಿ' ಸಂಕಲನದಿಂದ ಆಯ್ದ ಕೆಲವು ಹನಿಗವನಗಳು.

**ರಾಜಕಾರಣ**

ಇಲ್ಲಿ ಯೋಗ್ಯರೂ ಇರುವರೇ
ಎಂಬುದೇ ಅನುಮಾನ
ಭಲೆ ಎನ್ನಬೇಕು
ಉಳಿಸಿಕೊಂಡು ಸತ್ತರೆ
ಅವರವರ ಮಾನ

**ಸಾವು**

ಉಣ್ಣುತ್ತಿರುವ
ಬದುಕಿನ ತಟ್ಟೆಯನ್ನು
ಯಮ ಬಂದು
ಕಸಿದುಕೊಂಡಂತೆ

**ಮಾತು ಮೌನ**

ಕೆಲವು ಮೌನಗಳಿಗೆ
ನೂರಾರು ಅರ್ಥಗಳಿವೆ
ಕೆಲವು ಮಾತುಗಳು
ಅರ್ಥವನ್ನೇ ಕಳೆದುಕೊಂಡಿವೆ

**ಪಯಣ**

ಕಾಲವನ್ನೆಲ್ಲಾ ಹೊತ್ತು
ಹೋಗುವ ಹೊತ್ತು
ಹಸಿ ಬಯಕೆಗಳ ಬೆನ್ನೇರಿ
ದಾರಿ ಸವೆದಿತ್ತು

**ಆಯಸ್ಸು**

ನಾವೆಷ್ಟು ಮುಂದೂಡಿದರೂ
ಕೈ ಮುಗಿದು ಬೇಡಿಕೊಂಡರೂ
'ಅವ' ತೃಣ ಮಾತ್ರವೂ
ಕರಗದೆ ನೀಡುತ್ತಾನೆ
ಒಬ್ಬೊಬ್ಬರಿಗೂ ಇಂತಿಷ್ಟ ಕಾಲ
ತೀರಿಸಲು ಜೀವನವೆಂಬ ಸಾಲ

# ಪಕೋಡ ಮತ್ತು ಥಿಂಕಿಂಗ್ ಪವರು.... !

● ಎಚ್. ಗೋಪಾಲಕೃಷ್ಣ

ಹೊರಗಡೆ ಮಳೆ ಜಿಟಿ ಜಿಟಿ ಅಂತ ಹೊಡಿತಿದೆ.ಮನೇಲೆ ಇದೀರಿ, ಹೆಂಡತಿ ಒಂದು ಸೋಫಾ ಮೇಲೆ ಒರಗಿದಾಳೆ, ಸೊಸೆ ಫೋನ್ ಹಿಡಿದು ಆನ್ ಲೈನ್ ಕ್ಲಾಸ್ ನಲ್ಲಿ ಮುಳುಗಿದಾಳೆ. ಮೊಮ್ಮಕ್ಕಳು ಅಲ್ಲೇ ಎಲ್ಲೋ ಸಂದಿಲಿ ಕೂಗುತ್ತಾ ಆಡ್ತಾ ಇವೆ ಮತ್ತು ಮಗ ಟಿವಿ ನೋಡ್ತಿದೆ. ಮಗಳು ಕುರ್ಚಿ ಮೇಲೆ ಕೂತು ಯು ಟ್ಯೂಬಿ ನಲ್ಲಿ ಬೆಳ್ಳುಳ್ಳಿ ಸಿಪ್ಪೆ ಸುಲಭವಾಗಿ ಬಿಡಿಸುವ ವಿಧಾನ ನೋಡ್ತಾ ಇದಾಳೆ.

ನೀವು ಅಲ್ಲೊಂದು ಮೂಲೆಯಲ್ಲಿ ಕೂತು ಕೊಂಡು ಸಾಯಂಕಾಲ ಅನ್ಯಾಯವಾಗಿ ಹಾಳಾಗುತ್ತಾ ಇದೆಯಲ್ಲಾ ಅಂತ ತಲೆ ಮೇಲೆ ಕೈ ಹೊತ್ತಿದೀರಿ...

ಇದ್ದಕ್ಕಿದ್ದ ಹಾಗೆ ನಿಮ್ಮ ತಲೇಲಿ ಒಂದು ಐಡಿಯಾ ಬರುತ್ತೆ. ಅದೇನಪ್ಪಾ ಅಂದರೆ ಈ ಚಳಿಯಲ್ಲಿ ಪಕೋಡ ತಿಂದರೆ ಹೇಗೆ ಅಂತ....

ಆಗ ನೀವೇನು ಮಾಡ್ತೀರಿ?

ನಾನೂ ಅದನ್ನೇ ಮಾಡಿದ್ದು.

ಕೋವಿಡ್ಡಿನ ಹಾವಳಿ ನೋಡಿ, ಪ್ರಪಂಚದ ಇಡೀ ಆರ್ಥಿಕ ಸ್ಥಿತಿ ಕುಸಿದು ಹೋಗಿ ಇನ್ನೂರು ರೂಪಾಯಿ ಕೆಜಿ ಇದ್ದ ಈರುಳ್ಳಿ ನೂರು ರೂಪಾಯಿಗೆ ಆರು ಕೆಜಿಗೆ ಬಿದ್ದು ಹೋಯ್ತಲ್ಲ, ಅವತ್ತಿಂದ ಮನೆ ಮುಂದೆ ತಳ್ಳೋ ಗಾಡೀಲಿ ಈರುಳ್ಳಿ ರಾಶಿ ರಾಶಿ ತಂದು ಮಾರ್ತಾ ಇದಾರೆ. ನಾವೂ ಮೂರು ಮೂರು ದಿವಸಕ್ಕೆ ಒಂದು ಸಲ ಆರಾರು ಕೆಜಿ ಕೊಂಡು ಕೊಂಡು ಉಪಯೋಗ ಮಾಡ್ತೀವಿ. ಪಾಪ ತಳ್ಳೋ ಗಾಡೀಲಿ ಬೆವರು ಸುರಿಸಿ ತರ್ತಾರೆ, ಅವರೂ ಬದುಕಬೇಕು ಅನ್ನುವ ಕಕ್ಕುಲಾತಿ ನಮಗೆ.

ಯಾವಾಗಲು ಮನೇಲಿ ಈರುಳ್ಳಿ ಇರೋದರಿಂದ ಈರುಳ್ಳಿ ಹುಳಿ, ಈರುಳ್ಳಿ ಸಾಂಬಾರ್, ಈರುಳ್ಳಿ ಚಟ್ನಿ, ಈರುಳ್ಳಿ ಪಲ್ಯ..... ಹೀಗೆ ಈ ಕೋವಿಡ್ ಶುರು ಆದಾಗಲಿಂದ .

ಯು ಟ್ಯೂಬಿನಲ್ಲಿ ಯಾರೂ ಈವರೆಗೆ ಈರುಳ್ಳಿ ಕಾಫಿ ಮಾಡೋದು ಹಾಕಿಲ್ಲ, ಅದರಿಂದ ಕಾಫಿ ಪುಡಿ ಹಾಕಿದ ಕಾಫೀನೇ ಕುಡೀತಾ ಇದೀವಿ. ರಸ್ತೆಗೆ ಹತ್ತು ಸಲ ಈರುಳ್ಳಿ ಮಾರುವ ಜನ ಬರೋದರಿಂದ ಆಗಾಗ ವ್ಯಾಪಾರ ಮಾಡ್ತೀವಿ. ಹೀಗಾಗಿ ಮನೇಲಿ ಈರುಳ್ಳಿ ಧಂಡಿಯಾಗಿ ಇರುತ್ತೆ.ಇಷ್ಟು ಯಾಕೆ ಹೇಳಿದೆ ಅಂದರೆ ಅಂದರೆ ಪಕೋಡ ಮಾಡಲು ಅತಿ ಮುಖ್ಯವಾದ ಮೂಲ ವಸ್ತು ಮನೇಲಿ ಸಿದ್ಧ ! ಪಕೋಡ ತಯಾರಿಕೆಗೆ ನಾನು ಸಿದ್ಧನಾದೆ..

ಇಂತಹ ಸಮಯ ದಲ್ಲಿ ಮಾಮೂಲು ಮನುಷ್ಯ ಆದರೆ ಹೆಂಡತಿನೋ, ಸೊಸೆನೋ, ಮಗಳನ್ನೋ ಈರುಳ್ಳಿ ಹೆಚ್ಚಿ ಕೊಡ್ತೀಯಾ, ಬಾಂಡ್ಲೆ ಹುಡುಕಿ ಕೊಡ್ತೀಯಾ, ಕಡ್ಲೆ ಹಿಟ್ಟು ಎಲ್ಲಿದೆ... ಅಂತೆಲ್ಲಾ ಕೇಳಿ ತಲೆ ಗೊಬ್ಬರ ಮಾಡ್ಕೊಂಡು ಒದ್ದಾಡ್ತಾ ಸಾಯ್ತಾನೆ. ಆದರೆ ನಾನು ಹಾಗಲ್ಲ. ನೇರ ಅಡುಗೆ ಮನೇಗೆ ಹೋಗ್ತೀನಿ, ಈರುಳ್ಳಿ ತೆಗೆದು ಚೆನ್ನಾಗಿ ತೊಳೆದು ಕಟ್ಟೆ ಮೇಲೆ ಇಟ್ಟು ಚಾಕು, ಹೆಚ್ಚಿನ ಮಣೆ ಇಟ್ಕೋತೀನಿ.

ಆಮೇಲೆ ಈರುಳ್ಳಿ ಹೆಚ್ಚಲು ಶುರು ಮಾಡ್ತೀನಿ.

ಮೊದಲು ಈರುಳ್ಳಿ ಸಿಪ್ಪೆ ಬಿಡಿಸಿ, ಅರ್ಧಕ್ಕೆ ಅದನ್ನ ಕೊಯಿದು ಅಂಚಿನ ಗಡ್ಡೆ ಕ್ಲೀನ್ ಆಗಿ ತೆಗೆದು ಉದ್ದು ಉದ್ದುದ್ದಕ್ಕೆ ಈರುಳ್ಳಿನ ಸಣ್ಣಗೆ ಹೆಚ್ಚಿದೊಡ್ಡ ಬೇಸಿನ್ನಿ ಗೆ ಹಾಕೋದು. ಅದಕ್ಕೆ ಕಡ್ಲೆ ಹಿಟ್ಟು, ಅಕ್ಕಿ ಹಿಟ್ಟು, ಕೆಂಪು ಕಾರದ ಪುಡಿ ರುಚಿಗೆ ತಕ್ಕಂತೆ ಉಪ್ಪು, ಒಂದು ಚಮಚ ಓಂ ಕಾಳು ಚೆನ್ನಾಗಿ ಪುಡಿ ಮಾಡಿ ಎಲ್ಲಾ ಮಿಕ್ಸ್ ಮಾಡಿ ಕೊಂಚ ಕೊಂಚ ನೀರು ಹಾಕ್ತಾ ಒಂದು ಲೆವೆಲ್ ಗೆ ತಂದ್ರ...? ಇಷ್ಟ ಇದ್ರೆ ಬೆಳ್ಳುಳ್ಳಿ ರುಚಿ ಬೇಕು ಅನಿಸಿದರೆ ಬೆಳ್ಳುಳ್ಳಿ ಜಜ್ಜಿ ಬೆರೆಸಿ ಕೊಳ್ಳಿ ಇದಕ್ಕೆ.

ಈಗ ಒಲೆ ಹಚ್ಚಿ, ಅದರ ಮೇಲೆ ಬಾಂಡ್ಲಿ ಇಡಬೇಕು, ಅದಕ್ಕೆ ಮೊದಲು ಅಡಿಗೆ ಮನೆಯ ಎಲ್ಲಾ ದೀಪ ಹಾಕಬೇಕು, ಬಾಂಡ್ಲಿಲಿ ಜಿರಳೆ ಮೊಟ್ಟೆ ಇಲ್ಲ ಅಂತ ಖಚಿತ ಮಾಡಿಕೊಂಡು ಅದನ್ನ ಗಲಬರಿಸಬೇಕು. ಅದನ್ನ ಅಂದರೆ ಜಿರಳೆ ಮೊಟ್ಟೆ ಅಲ್ಲ, ಬಾಂಡ್ಲಿನ.

ಆಯ್ತಾ ಈಗ ಬಾಂಡ್ಲಿ ಕಾದು ಅದರಲ್ಲಿ ಇದ್ದ ನೀರು ಆವಿಯಾಗಿ ಹೋದ ಮೇಲೆ, ಎಣ್ಣೆ ಸುರಕೋಬೇಕು.

ಎಣ್ಣೆ ಕಾದ ಮೇಲೆ, ಒಂದೇ ಒಂದು ಚೂರು ಪಕೋಡಹಸಿ ಹಿಟ್ಟು ಎಣ್ಣೆಗೆ ಹಾಕಿ. ಅದು ಚುರ್ ಅಂತ ಎಣ್ಣೆಲಿ ವಿಲ ವಿಲ ಆಡ್ತಾ ಮೇಲೆ ಬಂದರೆ ಎಣ್ಣೆ ಕಾದಿದೆ ಅಂತ ಅರ್ಥ. ಈಗ ಕಾದ ಎಣ್ಣೆಗೆ ಈರುಳ್ಳಿ ಮಿಶ್ರಣದ ಹಿಟ್ಟು ಹಾಕ್ತಾ ಹೋಗಿ. ಮೂರು ಬೆರಳಿ ನಲ್ಲಿ ತೆಗೆದು ತೆಗೆದು ತೆಗೆದು ಹಾಕಬೇಕು. ಎಣ್ಣೆಯಲ್ಲಿ ಅದು ಚೆನ್ನಾಗಿ ಬೇಯೋ ಹೊತ್ತಿಗೆ ಮೊದಲು ಮಗಳು ಎಂಟ್ರಿ ಹಾಕ್ತಾಳೆ.

ಓ ಪಕೋಡ !ಅಂತ ಹೇಳ್ತಾ ಹಸಿ ಹಿಟ್ಟು ರುಚಿ ನೋಡುತ್ತೆ. ಉಪ್ಪು ಸಾಲದು, ಖಾರ ಬೇಕು ಅಂತ ಮೊದಲನೇ ಸಲಹೆ ಬರುತ್ತೆ. ಮೊದಲನೇ ಒಬ್ಬೆ ರೆಡಿ ಆದಹಾಗೆ ಅದು ಹೊರಗಡೆ ಹೋಗುತ್ತೆ. ಎಲ್ಲರಿಗೂ ಡಿಸ್ಟ್ರಿಬ್ಯೂಟು ಆಗುತ್ತಾ....

ನಿಮ್ಮ ಮಗ, ಸೊಸೆ ಬರುತ್ತೆ, ಚೆನ್ನಾಗಿದೆ ಅಂತ ಎರಡೂ ಕೈಯಲ್ಲಿ ಉಫ್ ಉಫ್ ಉಫ್ ಅಂತ ಊದುತ್ತಾ ಬೊಗಸೆಯಲ್ಲಿ ತುಂಬಿ ಕೊಂಡು ಹೊರಗೆ ಹೋಗುತ್ತವೆ. ಎಲ್ಲರಿಗೂ ಡಿಸ್ಟ್ರಿಬ್ಯೂಟು ಆಗುತ್ತಾ....ಮೊಮ್ಮಕ್ಕಳು ಸಹ ರುಚಿ ನೋಡುತ್ತಾವಾ..? ನಂತರ....

ಆಮೇಲೆ ನಿಮ್ಮ ಶ್ರೀಮತಿ ಎಂಟ್ರಿ ಕೊಡೋದು. ಬಾಂಡ್ಲಿ ತೊಳೆದರೀ ತಾನೇ? ಜಾಲರಿ ಸೌಟು ತೊಳಿಬೇಕಿತ್ತು, ಕರಿದ ಪಕೋಡ ಈ ಪೇಪರ್ ಮೇಲೆ ಹಾಕ್ತಿರಾ ಅದರ ಮೇಲೆ ಜಿರಳೆ ಓಡಾಡಿದೆ, ಕೊಳೆ ಪಂಚೆ ಮುಟ್ಟಿಲ್ಲ, ಅದಕ್ಕೆ ಕೈ ಹಾಕಿಲ್ಲ ತಾನೇ? ಕೈ ಕ್ಲೀನ್ ಆಗಿತ್ತು ತಾನೇ?, ಕೈ ಚೆನ್ನಾಗಿ ತೊಳೆದು ಕೊಂಡ್ರಿ ತಾನೇ, ಬಾಂಡ್ಲಿಗೆ ಇಷ್ಟೊಂದು ಎಣ್ಣೆ ಸುರಿತಾರ? ಎಣ್ಣೆ ಹೀಗೆ ಸುರಿದರೆ ನಿಮಗೆ ಈಗ ಬರ್ತಿರೋ ಪೆನ್ಷನ್ನ ನೂರರಷ್ಟು ಬರಬೇಕು.... ...ಇಷ್ಟು ಉರಿ ಇಟ್ಕೋ ತಾರ? ಪಕೋಡ ಕರಕಲು ಆಗಿ ನಿಮ್ಮ ಬಣ್ಣಕ್ಕೆ ಬರುತ್ತೆ... ಉರಿ ಕಡಿಮೆ ಇರಲಿ ಅಂತ ಆಕೆನೇ ಉರಿ ಕಡಿಮೆ ಮಾಡಿ..... ಇನ್ನೂ ಸಾವಿರ ಸಲಹೆ, ಸೂಚನೆ ನೀಡಿ, ಬೇಕಾದ ವಿವರಣೆ ಪಡೆದು ಎಲ್ಲಾ ಸರಿಯಿದೆ ಅಂತ ಕನ್ಫರ್ಮ್ ಮಾಡಿಕೊಂಡು ಆಚೆ ಹೋಗುತ್ತೆ. ಆಚೆ ಹೋಗ್ತಾ ಒಂದು ತಟ್ಟೆಲಿ ಪಕೋಡ ತುಂಬಿ ಕೊಳ್ತಾಳೆ.

ನೀವು ನಿರಾಳ ಆಗಿ ಪಕೋಡ ಕರಿದು ಕರಿದು ಕರೆದು ತಟ್ಟೆಯಲ್ಲಿ ಹಾಕ್ತಾ ಹೋಗ್ತೀರಿ. ಆಚೆ ಕೂತಿರೋರು ಒಂದೊಂದು ಒಬ್ಬೆ ಆಗ್ತಾ ಆಗ್ತಾ ಆಗ್ತಾ ಬಂದು ಒಯ್ತಾ ರೆ. ಎರಡು ಮೂರು ಗಂಟೆ ನಂತರ ಅವರು ಒಳಗೆ ಬರೋದು ನಿಲ್ಲಿಸಿದ ಮೇಲೆ ನಿಮಗೂ ಅಂತ ಒಂದು ಎರಡೂ ಮೂರು ಪಕೋಡ ಚೂರು ಕಾದಿರುತ್ತ....? ನೀವು ಮುಖ ತೊಳೆದು ಕೊಂಡು ಫ್ರೆಷ್ ಆಗಿ ಬಂದು ಕೂತು ಟಿವಿ ನೋಡ್ತಾ ತಿನ್ನೋಣ ಅಂತ ಪ್ಲಾನ್ ಹಾಕಿ ಬಚ್ಚಲು ಮನೆಗೆ ಹೋಗ್ತೀರಿ. ಫ್ರೆಷ್ ಆಗ್ತೀರಿ,ರೂಮಿಗೆ ಹೋಗ್ತೀರಿ, ಮುಖ ಮೈಗೆ ಸ್ವಲ್ಪ ಸೆಂಟ್ ಹಾಕಿ ಕೊಂಡು ಅಡಿಗೆ ಮನೆಗೆ ಬಂದ್ರಿ....

ಅಲ್ಲಿ ನಿಮಗೆ ಅದೇನು ಶಾಕ್ ಕಾದಿದೆ?

ನಿಮ್ಮ ಪಕೋಡ ಇಟ್ಟಿದ್ದ ತಟ್ಟೆ ಪಕ್ಕದಲ್ಲಿ ಒಂದು ಎರಡೂವರೆ ಇಂಚು ಉದ್ದದ ಜಿರಳೆ ಸರ ಸರ ಅಂತ ಪಾಸ್ ಆಗಬೇಕೆ..? ಪಾಸ್ ಆಗಿ ಅದ್ಯಾವುದೋ ಸಂದೀಲಿ ನುಸಳಬೇಕೇ...?

ಜಿರಳೆ ಪಕೋಡದ ಮೇಲಿಂದ ಹೋಗಿದೆಯಾ, ಅಥವಾ ಪಕ್ಕದಲ್ಲಿ ಹೋಯ್ತಾ? ಅಕಸ್ಮಾತ್ ಪಕೋಡದ ಮೇಲಿಂದ ಹೋಗಿದೆ ಅಂದರೆ ಅದು ಎಲ್ಲಿಂದ ಬಂತು?

ಈಗ ಇದು ನಾನು ತಿನ್ನಬಹುದಾ ತಿನ್ನಬಾರದ...? ಹೆಂಡತಿನ ಕೇಳಿದರೆ ಹೇಗೆ? ತಿನ್ನಿ ಪರವಾಗಿಲ್ಲ ಅಂದರೆ ಸರಿ. ಹೇಳಿದ್ದು ಎಲ್ಲಾ ಕೇಳಿ ತಿನ್ನಬೇಡಿ ಅಂದರೆ ಏನು ಮಾಡೋದು....?

ಟು ಬಿ, ಆರ್.. ನಾಟ್ ಟು ಬಿ.

ಡೋಲಾಯದಲ್ಲಿ ಹತ್ತು ನಿಮಿಷ ಹೋಗುತ್ತೆ.

ಹೆಂಡತಿನ ಸಲಹೆ ಕೇಳಿದರೆ ಅವಳು ಖಂಡಿತ ಪಕೋಡದ ತಟ್ಟೆ ಆಚೆ ಎಸಿತಾಳೆ ಅಂತ ನಿಮಗೆ ಚೆನ್ನಾಗಿ ಗೊತ್ತು, ಅನುಭವ ಪಾಠ ಕಳಿಸಿದೆ. ಹಿಂದೆ ಇದೇ ರೀತಿಯ ಬೇರೆ ಬೇರೆ ಸಂದರ್ಭದಲ್ಲಿ ನೀವು ಬಲವಂತವಾಗಿ ಕಳೆದುಕೊಂಡ ಬೇಯಿಸಿದ ಕಡ್ಲೆ ಕಾಯಿ, ಬೇಳೆ ಒಬ್ಬಟ್ಟು, ಕಳೆದ ವಾರದ ಓಂ ಪುಡಿ, ಐದು ದಿವಸ ಹಿಂದೆ ನಿಮ್ಮ ಕೈ ಉಹೂ ಕೈ ಅಲ್ಲ ಬಾಯಿ ತಪ್ಪಿದ ಕಡಲೆ ಬೀಜ... ಇದೆಲ್ಲಾ ಕಣ್ಣ ಮುಂದೆ ಪೆರೇಡ್ ಮಾಡುತ್ತವೆ.... ಇಂತಹ ಸಮಯದಲ್ಲೇ ಗಂಡಸು ಒಂದು ಖಚಿತವಾದ ತೀರ್ಮಾನ ತಗೋಬೇಕಾಗಿರೋದು.

ಆಮೇಲೆ ನೀವು ಯಾರನ್ನೂ ಕೇಳದೇ ಒಂದು ಡಿಸಿಶನ್‌ಗೆ ಬರ್ತೀರಿ. ಪಕೋಡ ತಿನ್ನಬಹುದು ಅಂತ. ಪಕೋಡ ತಟ್ಟೆ ಹಿಡಿದು ಟಿವಿ ಮುಂದೆ ಕೂಡ್ತೀರಿ...

ಇದೇ ನೋಡಿ ಪಕೋಡ ನೋಡಿದ ನಂತರ ಗಂಡಸಿನ ತಿಂಕಿಂಗ್ ಪವರ್ ಅನ್ನೋದು....! ಲಾಗಾಯ್ತ್‌ನಿಂದ ಗಂಡಸು ಪರ್ಫೆಕ್ಟ್ ಥಿಂಕರ್, ಧೀಮಂತ ಅಂತ ಹೆಸರು ಮಾಡಿಕೊಂಡು ಬದುಕು ನಡೆಸಿಕೊಂಡು ಬರ್ತಿರೋದೇ ಆತನ ಈ ಪಕೋಡ ನೋಡುವ ಹಾಗೂ ಮುಕ್ಕುವ ಸ್ವತಂತ್ರ ಗುಣದಿಂದ.....!

ಸ್ವತಂತ್ರವಾಗಿ ಯಾವುದೇ ನಿರ್ಧಾರಕ್ಕೆ ಬರಬೇಕಾದರೂ ಯಾವುದಕ್ಕೂ ಕೇರ್ ಮಾಡದೇ ಕಣ್ಣು ಮುಚ್ಚಿ ಪಕೋಡ ತಿನ್ನಿರಿ..... !

■

# ನಿಮ್ಮ ಟಿ.ವಿ. ಕಾರ್ಯಕ್ರಮಗಳಲ್ಲಿ ಮನರಂಜನೆ ಇದೆಯೇ?

**● ಕೆ.ಎಸ್.ಸೋಮೇಶ್ವರ**

ಇದೆಂಥಾ ಪ್ರಶ್ನೆ. ಅದಿರುವುದೇ ನಮಗೆ ನಮ್ಮ ನಮ್ಮ ಮನೆಗಳಲ್ಲೇ ಮನರಂಜನೆ ಒದಗಿಸುವುದಲ್ಲವೇ. ಅದು ಬಿಟ್ಟು ಇನ್ಯಾವ ಕೆಲಸ ಅದಕ್ಕೆ. ನಮ್ಮನ್ನು ರಂಜಿಸಲು ತಾನೇ ಅಗಣಿತ ಚಾನೆಲ್‌ಗಳು ಹುಟ್ಟಿಕೊಂಡಿರುವುದು. ಆದರೆ, ಈ ಅಗಣಿತಗಳ ಗುಣ, ಕಾಗುಣಿತಗಳ ಬಗ್ಗೆ ಹೇಳಬೇಕೆಂದರೆ ಅದೊಂದು ಗಣಿ ಕರ್ಮಕಾಂಡವೇ ಸರಿ.

ಇಲ್ಲಿ ಮೊದಲಿಗೆ ಹೇಳಬೇಕೆಂದರೆ ಸದಾ 'ಬ್ರೇಕಿಂಗ್ ನ್ಯೂಸ್' ನೀಡುವ ಅಸಂಖ್ಯಾತ ಸುದ್ದಿ ಚಾನೆಲ್‌ಗಳು. ಈ ಬ್ರೇಕಿಂಗ್ ನ್ಯೂಸ್ ನಲ್ಲಿ ಸಿಡಿ ಮದ್ದಿನ ಹಿಮ್ಮೇಳದ ಜೊತೆಯಲ್ಲಿ ಖಠಿಣ(ಕಠಿಣ) ಶಬ್ದಗಳು ಮತ್ತು ಅದನ್ನೇ ಒತ್ತಿ ಒತ್ತಿ ಹೇಳುವ ನಿರೂಪಕರು ಹೇಳುವ ವಿಷಯವನ್ನು ಘನಘೋರವಾಗಿ ಮಾಡುತ್ತಾರೆ ಎಂಬುದನ್ನು ಹೊಸದಾಗಿ ಹೇಳ ಬೇಕಿಲ್ಲ. ನಿಶಬ್ದವಾಗಿರುವಾಗ ಸೂಜಿ ಮೊನೆ ಬಿದ್ದರೂ ಸದ್ದು ಮಾಡುತ್ತದೆ ಎಂಬುದು ಒಂದು ಆಡು ಮಾತು. ಇಲ್ಲಿ ಸೂಜಿ ಮೊನೆಯಷ್ಟರ ಸುದ್ದಿ ಕೂಡ ಕಬ್ಬಿಣದ ಗುಂಡಿನ ಶಬ್ದವಾಗಿ ನಿಮ್ಮ ಕರ್ಣಗಳನ್ನು ಕೊರೆಯುತ್ತದೆ. ಅವರುಗಳೇ ಇಲ್ಲಿ ನ್ಯಾಯ ಪ್ರದಾನಿಕರೂ ಆಗಿ ನಿಮಗೆ ಖರ್ಚಿಲ್ಲದೇ ನ್ಯಾಯ ಒದಗಿಸುತ್ತಾರೆ.

ಇನ್ನು ಅಲ್ಲಿ ದಿನವಿಡೀ ಪ್ರಸಾರವಾಗುವ ಕಥಾನಕಗಳು ಮನ ಭಂಜನೆಯಷ್ಟೇ ಹೊರತು ಮನರಂಜನೆಯಲ್ಲ. ಯಾವ ಯಾವ ರೀತಿಯಲ್ಲಿ ಮನೆ ಒಡೆಯುವ ಸಂಚು. ಹಿಂಸೆ, ಕೊಲೆ ಪ್ರಯತ್ನ ಎಲ್ಲ ನಿಮಗೆ ರಂಜನೀಯವಾಗಿ ನಿಮ್ಮ ಮನೆಯಲ್ಲೇ ದೊರೆಯುತ್ತದೆ. ಇದೊಂದು ರೀತಿಯಲ್ಲಿ 'ಮನೆ ಕ್ರಿಮಿನಲ್ ಶಾಲೆ' ಎನ್ನಬಹುದೆನಿಸುತ್ತದೆ. ಇದು ಯಾವೊಂದು ಭಾಷೆಗೂ ಸೀಮಿತವಾಗಿಲ್ಲ. ಆ ಪರಿಯಲ್ಲಿ ನಾವೆಲ್ಲರೂ ಒಂದೇ ಎನ್ನುವುದು ಅವರ ಧ್ಯೇಯ. ನಮ್ಮ ಕನ್ನಡದಲ್ಲಿ ಹೊಸ ಸ್ವರೂಪವಾಗಿ ಬೇರೆ ಭಾಷೆಯ ಧಾರಾವಾಹಿಗಳು ಬರುತ್ತಿವೆ. ಇಲ್ಲಿ ದೇವಾನುದೇವತೆಗಳಿಂದ ಮೊದಲಾಗಿ ನಾಗ ಕನ್ನಿಕೆಯೂ ಸೇರಿದಂತೆ ಅವರುಗಳ ಭಾವ ಎಲ್ಲೋ ಭಾಷೆ ಎಲ್ಲೋ. ನಮ್ಮ ಕನ್ನಡಿತಿಯರ/ಕನ್ನಡಿಗರ ಭಾಷೆಯೋ ಕನ್ನಡಮ್ಮನ ಸೌಭಾಗ್ಯ!!

ಇವುಗಳ ಮಧ್ಯೆ ನೀವು ಕೇಳುವ ಮನರಂಜನೆ ಎಲ್ಲಿದೆ ಅಂದಿರಾ? ಖಂಡಿತಾ ಇದೆ. ಅದಕ್ಕಾಗಿಯೇ ತಾನೆ ನಮಗೆ ಅದನ್ನು ಉಣ ಬಡಿಸಲು ಇರುವುದು ಈ ಚಾನೆಲ್‌ಗಳು. ಅಲ್ಲಿ ಪ್ರಸಾರವಾಗುವ ಹಲವು ಕಾರ್ಯಕ್ರಮಗಳ ಮಧ್ಯ ನುಸುಳಿ ಅಲ್ಲ ಹೆಬ್ಬಾಗಿಲಿನಿಂದಲೇ ಬರುವ ಜಾಹೀರಾತುಗಳು. ಇವುಗಳನ್ನೊಮ್ಮೆ ನೋಡಿ ಆಸ್ವಾದಿಸಿದರೆ ನಿಮಗೆ ಊಹಿಸಲಾರದಷ್ಟು ಮನರಂಜನೆ ಸಿಗುತ್ತದೆ.

ಇದನ್ನು ಎಲ್ಲಿಂದ ಆರಂಭಿಸಲಿ. ಮೊದಲಿಗೆ ರಾತ್ರಿ ಒಂಭತ್ತರ ಸಮಯದಲ್ಲಿ ಎಲ್ಲರ ಮನೆಯಲ್ಲೂ ಊಟದ ಸಮಯ. ಆ ಸಮಯಕ್ಕೆ ಪ್ರತ್ಯಕ್ಷವಾಗುವವ ಒಬ್ಬ ಬಹು ಬೇಡಿಕೆ ಸಿನಿಮಾ ನಟ. ಅವನು ಎಲ್ಲರ ಮನೆಯ ಪಾಯಖಾನೆ ತೊಳೆಯಲು ಸಜ್ಜಾಗಿ ಬಂದಿರುತ್ತಾನೆ. ಆ ಮನೆಯವರಿಗೆ ಅವನೊಬ್ಬ ದೈವ ಸ್ವರೂಪಿಯಾಗಿ ಕಾಣುತ್ತಾನೆ. ಇಲ್ಲಿ ಅವರಿಗೆ ತಿಳಿಯದ ವಿಷಯವೆಂದರೆ ಆತನಿಗೆ ತನ್ನ ಮನೆಯ ಬಚ್ಚಲು ತೊಳೆದೇ ಗೊತ್ತಿಲ್ಲ. ಇದೆ ರೀತಿ ಸೊಳ್ಳೆಗಳು. ಇದಂತೂ ನಮ್ಮೆಲ್ಲರ 'ಆಪ್ತ ಮಿತ್ರ'. ಇದಕ್ಕಾಗಿ ಇರುವ ಬತ್ತಿಗಳು ದ್ರಾವಣಗಳು ಅನೇಕ. ಇದರ ಸುಮಾರು

ಜಾಹೀರಾತುಗಳಲ್ಲಿ ಬರುವವರು ಮಕ್ಕಳೇ. ಅವರ ಬಾಯಲ್ಲಿ ಎಲ್ಲರಿಗೂ ಗುಡ್ ನೈಟ್ ಹೇಳಿಸುತ್ತಾರೆ. ಇನ್ನೊಂದರಲ್ಲಿ ಒಬ್ಬ ಧಡೂತಿ ಪೋಲೀಸಪ್ಪನಿಗೆ ದೊಡ್ಡ ದೊಡ್ಡ ಕಳ್ಳರನ್ನು ಹಿಡಿಯಲು ಗೊತ್ತೇ ಹೊರತು ಪುಟ್ಟ ಪುಟ್ಟ ಸೊಳ್ಳೆಗಳನ್ನಲ್ಲ ಎಂದು ಅವನ ಮಗನೇ ತೀರ್ಮಾನಿಸುತ್ತಾನೆ. ಇನ್ನು ದಂತ ಮಂಜನಗಳು. ಇಲ್ಲಂತೂ ಉಪ್ಪಿಗೆ ಬಹಳ ಮಹತ್ವ. ಗಾಂಧೀಜಿಯವರು ನಡೆಸಿದ ದಂಡೀ ಯಾತ್ರೆ, ಉಪ್ಪಿನ ಸತ್ಯಾಗ್ರಹ ಎಲ್ಲ ಇಲ್ಲಿ ನಮ್ಮ ಟೂತ್ ಪೇಸ್ಟಗಳೇ ನಡೆಸುತ್ತವೆ. ಇದು ಆಗಲೇ ಬಂದಿದ್ದರೆ ಬ್ರಿಟಿಷರಿಗೆ ಮಹಾತ್ಮನನ್ನು ಜೈಲಿಗೆ ಕಳಿಸುವ ಪ್ರಮೇಯವೇ ಬರದೆ ಜಾಗ ಖಾಲಿ ಮಾಡುತ್ತಿದ್ದರೆನಿಸುತ್ತದೆ. 'ಎಲ್ಲಿಂದಲೋ ಬಂದವಳು' ಪ್ರತ್ಯಕ್ಷಳಾಗಿ ನಿಮ್ಮ ಟೂತ್ ಪೇಸ್ಟನಲ್ಲಿ ಉಪ್ಪು ಇದೆಯೇ ಎಂದು ನೋಡುಗರನ್ನು ಕಕ್ಕಾಬಿಕ್ಕಿಗೊಳಿಸುತ್ತಾಳೆ. ಇದರ ಮುಂದುವರಿದ ಭಾಗ ಸಣ್ಣ ಬಿಸ್ಕೆಟ್ ಕಡಿದು ನೋವಾದಾಗ ಅವರೇ ಹಲ್ಲು ಹಲ್ಲು ಬಿರಿದುಕೊಂಡು 'ಉಪ್ಪಿನ ಜ್ಞಾನ' 'ಉಪ್ಪಿನ ಜ್ಞಾನ' ಎಂದು ಹಾಡುತ್ತ ಕುಣಿಯುತ್ತಾರೆ.

ಈಗಂತೂ ಅದೆಂತಹುದೋ ವೈರಸ್ ಬಂದು ನಮ್ಮೆಲ್ಲರ ದೈನಂದಿನ ಶುಚಿತ್ವವನ್ನೇ ತಿರುವಿ ಹಾಕಿದೆ. ಯಾರಿಗೆ ಎಷ್ಟು ಪ್ರಯೋಜನವೋ ಗೊತ್ತಿಲ್ಲ ಆದರೆ, ಅದರ ಹೆಸರು ಬಳಸಿಕೊಂಡು ನಾ ಮುಂದು ತಾ ಮುಂದು ಎಂದು ವಿವಿಧ ಜಾಹೀರಾತುಗಳು ನಮ್ಮ ಮೇಲೆ ಮುಗಿ ಬೀಳುತ್ತಿವೆ. ಅದರ ಹೆಸರು ಬಳಕೆಗೆ ಪೇಟೆಂಟ್ ಇದ್ದಿದ್ದರೆ ಚೆನ್ನಿತ್ತು. ಇದುವರೆಗೂ ನೀವು ಬಳಸುವ ಸಾಬೂನುಗಳು ಶೇಕಡಾ 99.99 ರಷ್ಟು ಕೀಟಾಣುಗಳನ್ನು ಕೊಲ್ಲುತ್ತಿತ್ತಂತೆ. ಉಳಿದ ಭಾಗಕ್ಕೆ ಏನು ಗೊತ್ತಿಲ್ಲ. ಆದರೆ, ಈಗ ಈ ಸಾಬೂನುಗಳೇ ಈ ವೈರಸ್ ಅನ್ನು ಕೂಡ ಅಷ್ಟೇ ಪ್ರಮಾಣದಲ್ಲಿ ಹೊಡೆದೋಡಿಸುತ್ತದಂತೆ. ಕೈ ತೊಳೆಯಲು, ಮನೆಯ ಎಲ್ಲ ಭಾಗಗಳಿಗೆ ಸಿಂಪಡಿಸಲು ಬಂದಿರುವ ದ್ರಾವಣಗಳ ಸಂಖ್ಯೆ ಅನೇಕ. ಇನ್ನು ನೆಲ ಒರೆಸುವ ದ್ರಾವಣಗಳೇ ನಿಮ್ಮ ಮನೆಯ ಕಿಟಕಿ, ಬಾಗಿಲುಗಳ ಹಿಡಿಯನ್ನೂ ಕ್ಲೀನ್ ಮಾಡುತ್ತದಂತೆ. ಮೊದಲೆಲ್ಲ ಗಂಟಲ ಕಿರಿ ಕಿರಿಯಾದರೆ ಬಿಸಿ ನೀರಿಗೆ ಕೊಂಚ ಉಪ್ಪು ಹಾಕಿ ಮುಕ್ಕಳಿಸುವುದು ಅಭ್ಯಾಸವಾಗಿತ್ತು. ಇದು ಈಗ ಎಲ್ಲರಿಗೆ 'ಆರೋಗ್ಯ ಸೇತು'ವಾಗಿ ಕಾಣುತ್ತಿದೆ. ಇದಕ್ಕಾಗಿಯೇ ಹೊಸ ಹೊಸ ದ್ರಾವಣಗಳು ಬಂದಿಳಿದಿವೆ. ಒಂದು ಕೆಮ್ಮಿನ ಔಷಧ ತಯಾರಕರು ಅದೇ ಹೆಸರಿನಲ್ಲಿ ಬಾಯಿ ಮುಕ್ಕಳಿಸುವ ದ್ರಾವಣವನ್ನೂ ನಮಗೆ ಕೊಡುತ್ತಿದ್ದಾರೆ. ಅದರ ಬದಲು ಆ ಕೆಮ್ಮಿನ ಔಷಧವನ್ನು ಇಟ್ಟುಕೊಂಡು ಅದರಲ್ಲಿ ಕೊಂಚ ಭಾಗಕ್ಕೆ ನೀರು ಬೆರೆಸಿ ಬಳಸಿದರೆ ಅದೇ ಒಂದಕ್ಕೆರಡು ಉಪಯೋಗವಾಗಬಹುದಲ್ಲವೇ.

ಇನ್ನು ವಿವಿಧ ರೀತಿಯ ಸುಗಂಧ ದ್ರವ್ಯಗಳು. ನಮ್ಮ ಮಾನ ಹೋದರೂ ಅದರ ಸುವಾಸನೆ ನಮ್ಮನ್ನು ಆವರಿಸಿರುತ್ತದಂತೆ. ಒಂದು ಜಾಹೀರಾತಿನಲ್ಲಿ ಸಮುದ್ರ ತೀರದ ಬಿರುಗಾಳಿಯಲ್ಲಿ ಒಬ್ಬ ತನ್ನ ಮಾನ ಮುಚ್ಚುವಷ್ಟು ಬಿಟ್ಟು ಎಲ್ಲವನ್ನೂ ಕಳೆದುಕೊಂಡಿರುತ್ತಾನೆ. ಆತನ ಸ್ನೇಹಿತೆ ಅದನ್ನು ನೋಡಿ ಎಲ್ಲ ಹೋದರೇನಂತೆ ನಿನ್ನ ದೇಹದ ಸುವಾಸನೆ ಚೆನ್ನಾಗಿದೆ ಎನ್ನುತ್ತಾಳೆ. ಇನ್ನೊಂದು ಸಾಬೂನಿನ ಜಾಹೀರಾತಿನಲ್ಲಿ ಒಬ್ಬ ಮಹಿಳೆ ಕ್ರಿಕೆಟ್ ಪಂದ್ಯ ನೋಡುವ ಉತ್ಸಾಹದಲ್ಲಿ ಕುಣಿಯುತ್ತಿರುತ್ತಾಳೆ. ಅದನ್ನು ನೋಡಿದ ಅಲ್ಲಿದ್ದ ಒಬ್ಬ ಸಿನಿಮಾ ನಟ ಅವಳನ್ನೇ ತನ್ನ ಚಿತ್ರಕ್ಕೆ ನಾಯಕಿ ಅನ್ನುತ್ತಾನೆ. ಅದೇ ಸಮಯದಲ್ಲಿ ಅಲ್ಲಿ ಬಂದ ಒಂದು ಚಿಕ್ಕ ಮಗು ಮಮ್ಮೀ ಎನ್ನುತ್ತ ಅವಳ ತೆಕ್ಕೆಗೆ ಬೀಳುತ್ತದೆ. ಅಲ್ಲಿಗೆ ಅವಳ ನಾಯಕಿಯ ಪಾತ್ರ ಮುಕ್ತಾಯ. ಇದರ ಪರಿಷ್ಕೃತ ಭಾಗವಾಗಿ ಒಬ್ಬಾಕೆ ನೃತ್ಯ ಮಾಡುತ್ತಿರುತ್ತಾಳೆ. ಅಲ್ಲಿ

ಅದನ್ನು ಕಂಡ ಅ ನಟ ನೀನು ವಿದ್ಯಾರ್ಥಿಯೇ ಎನ್ನುತ್ತಾನೆ. ಇಲ್ಲಿ ಮತ್ತೆ ಮಗುವಿನ ದೃಶ್ಯ ಮರುಕಳಿಸುತ್ತದೆ. ಒಂದು ಬದಲಾವಣೆ ಎಂದರೆ ಅವಳಿಗೆ ಗುರುವಿನ ಪಟ್ಟ.

ಇನ್ನು ಬಿಳಿ ಬಣ್ಣದ ಚರ್ಮದ ಜಾಹೀರಾತು ಈಗ ಬದಲಾಗಿ ಹೋಳೆಯುವುದಾಗಿದೆ. ಇದರಲ್ಲಿ ಈಗ ಮಲ್ಟಿ ವಿಟಮಿನ್ ಗಳು ಸೇರಿವೆ. ಅದನ್ನು ಕನ್ನಡದಲ್ಲಿ ಉಚ್ಚರಿಸುವವರು 'ಪಲ್ಟಿ ವಿಟಮಿನ್' ಎನ್ನುತ್ತಾರೆ. ಅದನ್ನು ಹಚ್ಚಿ ಯಾಕೆ ತಿಪ್ಪರ ಲಾಗ ಹಾಕ ಬೇಕೋ ತಿಳಿಯದು. ಇನ್ನೊಂದು ತಂಪು ಪಾನೀಯದ ಜಾಹೀರಾತಿನಲ್ಲಿ ಯುವ ಪ್ರೇಮಿಗಳು ಒಟ್ಟಿಗಿರುವುದನ್ನು ಪರಿಚಯದವನು ನೋಡಿ ಮನೆಯಲ್ಲಿ ದೂರು ಹೇಳುತ್ತಾನೆಂಬ ದೃಷ್ಟಿಯಿಂದ ಆ ಪಾನೀಯದ ಅಣಕು ಚಿತ್ರ ಆ ಹುಡುಗನಿಗೆ ಅದನ್ನು ನಿವಾರಿಸಿಕೊಳ್ಳುವ ಸಲಹೆ ನೀಡುತ್ತದೆ. ಇನ್ನೊಂದು ಹಣ್ಣಿನ ಪಾನೀಯದಲ್ಲಿ ಪಾತ್ರಧಾರಿಗಳೆಲ್ಲ ಅಣಕು ಚಿತ್ರಗಳೇ. ಅಲ್ಲಿ ಬರುವ ಒಂದು ಮಂಗ ಬೇರೆ ಪ್ರಾಣಿಗಳು ಮಾಡಿದ ಪಾನೀಯವನ್ನು ಇದೇನು ಆರೆಂಜ್ ಜ್ಯೂಸಾ ಇಲ್ಲ ಅರ್ಥರ್ಂಬರ್ಥ ಜ್ಯೂಸಾ ಎನ್ನುತ್ತದೆ. ಹೊಟ್ಟೆಯಲ್ಲಿ ವಾಯು ಪರಿಹಾರಕ್ಕೂ ಬ್ರೇಕಿಂಗ್ ನ್ಯೂಸ ಆಗಿ ಒಂದು ಗುಳಿಗೆ ಬರುತ್ತದೆ. ಇನ್ನೊಂದು ಜಾಹೀರಾತಂತೂ ದುರ್ವ್ಯಸನಗಳಿಂದ ಒಬ್ಬ ವ್ಯಕ್ತಿಯನ್ನು ಬಿಡಿಸಲು ಅವನ ಪಾನೀಯ/ಊಟದಲ್ಲಿ ಈ ಪುಡಿಯನ್ನು ಸೇರಿಸಿ ಕೊಡಿ ಎಂಬ ಬಾಲಿಶ ಸಲಹೆ ನೀಡುತ್ತದೆ.

ಇನ್ನು ಜಾಹೀರಾತುಗಳಲ್ಲಿ ವೈದ್ಯ ಮಹಾಶಯರುಗಳು ವೈದ್ಯೋ ನಾರಾಯಣೋ ಹರಿ ಆಗಿ ಬಿಳಿಕೋಟು ಮತ್ತು ಕುತ್ತಿಗೆಗೆ ರಬ್ಬರ್ ಹಾರ ಧರಿಸಿ ಬರುತ್ತಾರೆ. ಸಣ್ಣ ಮಗು ಬಳಸುವ ಡೈಪರ್ ನಿಂದ ಹಿಡಿದು ತಲೆನೋವಿನ ಗುಳಿಗೆಗೂ ಇವರದೇ ಪುಕ್ಕಟೆ ಸಲಹೆ. ಈ ಧನ್ವಂತರಿಗಳು ಸರ್ವರೋಗಕ್ಕೂ ಮದ್ದು ನೀಡಿ ನಿಮ್ಮ ಆರೋಗ್ಯವನ್ನು ಕಾಪಾಡುತ್ತಾರೆ!

ಈ ಎಲ್ಲ ಜಾಹೀರಾತುಗಳಲ್ಲಿ ಬರುವ ದೇವಾನುದೇವತೆಗಳು ನಮ್ಮ ನೆಚ್ಚಿನ ಸಿನಿ ತಾರೆಯರು ಅಥವಾ ಕ್ರೀಡಾಪಟುಗಳು ಅದರಲ್ಲೂ ಮುಖ್ಯವಾಗಿ ಕ್ರಿಕೆಟಿಗರು. ಒಬ್ಬ ಆಟಗಾರನಿಗಂತೂ ಗಂಟಲು ಕೆರೆತದಿಂದ ದೇಹವೇ ಕುಗ್ಗಿ ಹೋಗುತ್ತದೆ. ಅವನು ತಿನ್ನುವ ಜಾಹೀರಾತಿನ ಗುಳಿಗೆ ಕೆಲವೇ ಸೆಕೆಂಡುಗಳಲ್ಲಿ ಅವನ್ನು ಫಿಟ್ ಮಾಡಿ ಬಿಡುತ್ತದೆ. ಇವರುಗಳಿಗೆ ತಮ್ಮ ಕ್ಷೇತ್ರಗಳಲ್ಲಿ ಜನರನ್ನು ರಂಜಿಸುವ ಅವಕಾಶ ಹೇಗಿದೆಯೋ ತಿಳಿಯದು. ಆದರೆ, ಇಲ್ಲಿ ಮಾತ್ರ ನಿಮಗೆ ಪೂರ್ಣ ಮನರಂಜನೆ ಕಟ್ಟಿಟ್ಟ ಬುತ್ತಿ. ಹಾಗೆಂದು ನೀವು ಹೊಟ್ಟೆ ಹುಣ್ಣಾಗುವಷ್ಟು ನಕ್ಕು ಬಿಡಬೇಡಿ. ಹಾಗೇನಾದರೂ ಆದರೆ ಅಲ್ಲೊಬ್ಬ ಬಿಳಿ ಕೋಟಿನ ಹಕೀಮ ಪ್ರತ್ಯಕ್ಷನಾಗಿ ಯಾವ ದ್ರಾವಣವನ್ನು ಕುಡಿಸುತ್ತಾನೆಯೋ ದಾರಿ ಕಾಣದಾಗಿದೆ ಭಗವಂತ.

ಇಲ್ಲಿ ಒಂದಂತೂ ನಿಜ ಟಿವಿ ಕಾರ್ಯಕ್ರಮಗಳಲ್ಲಿ ನಿಮಗೆ ಯಾವ ರೀತಿಯ ಮನರಂಜನೆ ದೊರೆಯುತ್ತದೆ ಎನ್ನುವುದು ನಿಮಗೆ ಬಿಟ್ಟ ವಿಚಾರ. ಆದರೆ, ಈ ಜಾಹೀರಾತುಗಳು ಇನ್ನು ಮುಂದೆಯೂ ನಮ್ಮನ್ನ ರಂಜಿಸಬಲ್ಲುದು ಎಂಬುದು ನನ್ನ ಅಭಿಪ್ರಾಯ. (ಜಾಹೀರಾತುದಾರರಿಗೆ ಪುಕ್ಕಟೆ ಜಾಹೀರಾತು ಸಿಗಬಾರದೆಂದು ಇಲ್ಲಿ ಯಾವುದೇ ವಸ್ತುಗಳ ಹೆಸರು ತಿಳಿಸಿಲ್ಲ. ಓದುಗರಿಗೆ ಅದು ಖಂಡಿತಾ ಕೈಗೆಟಕುವಂತಿರುತ್ತದೆ.)

■

# BEECHI VIDYA KENDRA

TEMPLE OF KNOWLEDGE

Email: admin@beechi.in
Web: www.beechi.in
Mob: 9740968677, 9035302302, 9035007003

PLACEMENT SERVICES FOR:

- BFSI
- SOFTWARE
- MANUFACTURING
- AUTOMOBILES
- REAL ESTATE
- HOSPITALITY
- FMCG

## ಬೀಚಿ ಪ್ರಕಾಶನ Beechi Prakashana

| ಪುಸ್ತಕದ ಹೆಸರು | ಲೇಖಕರು | ಬೆಲೆ |
|---|---|---|
| ರೇಡಿಯೋ ನಾಟಕಗಳು | ಬೀಚಿ | 70 |
| ಮಾತ್ರೆಗಳು | ಬೀಚಿ | 125 |
| ತಿಂಮನ ತಲೆ | ಬೀಚಿ | 70 |
| ಹುಚ್ಚು ಹುರುಳು | ಬೀಚಿ | 50 |
| ಸತೀ ಸೂಳೆ | ಬೀಚಿ | 110 |
| ಖಾದಿ ಸೀರೆ | ಬೀಚಿ | 170 |
| ಸತ್ತವನು ಎದ್ದು ಬಂದಾಗ | ಬೀಚಿ | 60 |
| ಕಾಣದ ಸುಂದರಿ | ಬೀಚಿ | 150 |
| ಕಲ್ಲು ಹೇಳಿತು | ಬೀಚಿ | 150 |
| ತಿಂಮ ರಸಾಯನ | ಬೀಚಿ | 120 |
| ದೇವನ ಹೆಂಡ | ಬೀಚಿ | 170 |
| ಮೇಡಮ್ಮನ ಗಂಡ | ಬೀಚಿ | 110 |
| ಟೆಂಟ್ ಸಿನಿಮಾ | ಬೀಚಿ | 100 |
| ಬೆಳ್ಳಿ ತಿಂಮ ನೂರೆಂಟು ಹೇಳಿದ | ಬೀಚಿ | 75 |
| ಮುರಿದ ಬೊಂಬೆ | ಬೀಚಿ | 100 |
| ಸೀತೂ ಮದುವೆ | ಬೀಚಿ | 80 |

| ಪುಸ್ತಕದ ಹೆಸರು | ಲೇಖಕರು | ಬೆಲೆ |
|---|---|---|
| ಲೇವಡಿ ಟೈಪಿಸ್ಟ್ | ಬೀಚಿ | 100 |
| ಬೆಳ್ಳಿ ಪತ್ರಗಳು | ಬೀಚಿ | 100 |
| ಮಹಾಯುದ್ಧ | ಬೀಚಿ | 100 |
| ಅಮ್ಮಾವ್ರ ಕಾಲ್ಗುಣ | ಬೀಚಿ | 100 |
| ಕತ್ತಲಲ್ಲಿ ಬಂದವಳು | ಬೀಚಿ | 90 |
| ಮಾತನಾಡುವ ದೇವರುಗಳು | ಬೀಚಿ | 75 |
| ಮನೆತನದ ಗೌರವ | ಬೀಚಿ | 100 |
| ಗರತಿಯ ಗುಟ್ಟು | ಬೀಚಿ | 60 |
| ನಂಬರ್ ಐವತ್ತೈದು | ಬೀಚಿ | 60 |
| ಉತ್ತರ ಭೂಪ | ಬೀಚಿ | 250 |
| ನರಪ್ರಾಣಿ | ಬೀಚಿ | 75 |
| ನನ್ನ ಭಯಾಗ್ರಫಿ | ಬೀಚಿ | 270 |
| ಹುಲಿಯ ಬೆನ್ನು ಮೇಲಿಂದ | ಬೀಚಿ | 125 |
| ಅಂದನಾ ತಿಂಮ | ಬೀಚಿ | 125 |
| ಹೆಂಡತಿ ನಕ್ಕಾಗ | ಬೀಚಿ | 125 |
| ಕಮಲಮ್ಮನ ಕುಂಕುಮ ಬಲ | ಬೀಚಿ | 125 |

| ಪುಸ್ತಕದ ಹೆಸರು | ಲೇಖಕರು | ಬೆಲೆ |
|---|---|---|
| ಬೀchi ಬುಲ್ಲೆಟಿನ್ | ಕೇಶವ ರಾವ್ | 200 |
| ಬೀchi ತೋಚಿದ್ದು ಗೀಚಿದ್ದು | ಸ್ವಾಮಿ ರಾವ್ ಕುಲ್ಕರ್ಣಿ | 120 |
| ಬೊಂಬಾಟ್ ಬೀಚಿ | ಬೇಲೂರು ರಾಮಮೂರ್ತಿ | 60 |
| ವಾಗ್ಬಾಣಗಳು | ಗಂಗಾವತಿ ಪ್ರಾಣೇಶ್ | 50 |
| ನಗಿಸುವವನ ನೋವುಗಳು | ಗಂಗಾವತಿ ಪ್ರಾಣೇಶ್ | 50 |
| ಪೊಲೀಸ್ ಎನಕೌಂಟರ್ | Dr..ಡಿ.ವಿ.ಗುರುಪ್ರಸಾದ್ IPS | 200 |
| ಪೊಲೀಸ್ ಜೀವನದಲ್ಲಿ ಹಾಸ್ಯ | Dr.ಡಿ.ವಿ.ಗುರುಪ್ರಸಾದ್ IPS | 200 |
| ವಿಶ್ವಪರ್ಯಟನೆ | Dr.ಡಿ.ವಿ.ಗುರುಪ್ರಸಾದ್ IPS | 300 |
| ರಾಜೀವ್ ಗಾಂಧಿ ಭೀಕರ ಹತ್ಯಾ | Dr.ಡಿ.ವಿ.ಗುರುಪ್ರಸಾದ್ IPS | 250 |

ಇಂಗ್ಲಿಷ್ ಮೂಲ: ಪದ್ಮಶ್ರೀ ಡಿ ಆರ್ ಕಾರ್ತಿಕೇಯನ್

**ಪ್ರತಿಗಳಿಗೆ ಸಂಪರ್ಕಿಸಿ.: 9845264304**

# ಸಾವಿನ ಮನೆಯಲ್ಲಿ..

**● ವಸುಮತಿ ಉಡುಪ**

ತೀರಾ ಇತ್ತೀಚೆಗೆ ನಮ್ಮ ಮನೆಯ ಸರೂತ ಎದುರಿಗಿರುವ ಮನೆಯಲ್ಲಿ ಒಂದು ಸಾವು ಸಂಭವಿಸಿತು. ತೀರಾ ಮಾಗಿದ ವಯಸ್ಸಿನವರೂ ಅಲ್ಲ, ನಡುವಯಸ್ಕರೂ ಅಲ್ಲ. ಅವೆರಡರ ಮಧ್ಯದವರು. ಈ ಸಾವು ಅನ್ನುವುದು ಕಣ್ಣು ಮುಚ್ಚಿ ಕಣ್ಣು ತೆರೆಯುವುದರೊಳಗೆ ಹೇಳದೆ ಕೇಳದೆ ಹೇಗೆ ಎರಗಿ ಬಿಡುತ್ತದೆ ಎಂದು ನೆನೆದರೆ ಅಚ್ಚರಿಯಾಗುತ್ತದೆ. ಬೆಳಿಬೆಳಿಗ್ಗೆ ನಾನು ಪೋರ್ಟಿಕೋ ತೊಳೆಯುವಾಗ ಆತ ತಮ್ಮ ಮನೆಯ ಕಾಂಪೌಂಡಿನೊಳಗೆ ಪೂರ್ವದಿಕ್ಕಿಗೆ ತಿರುಗಿ ಕೈ ಮುಗಿದು ನಿಂತು ಬಾಲಸೂರ್ಯನಿಗೆ ವಂದನೆ ಅರ್ಪಿಸುತ್ತಿರುವುದನ್ನು ಕಣ್ಣಾರೆ ಕಂಡಿದ್ದೆ. ಮತ್ತು ಇದು ಆ ಯಜಮಾನರ ದಿನನಿತ್ಯದ ಕಾರ್ಯಕ್ರಮ ಕೂಡಾ. ಮನೆಯೊಳಗಿನ ಸಣ್ಣಪುಟ್ಟ ಕೆಲಸ ಮುಗಿಸಿ ತಿಂಡಿಯ ತಯಾರಿ ನಡೆಸುವಾಗ ನಮ್ಮ ರಾಯರು ಒಳಗೆ ಧಾವಿಸಿ ಬಂದರು,

"ಗೌಡ್ರು ಹೋಗ್ಬಿಟ್ರಂತೆ ಕಣೇ, ಛೇ.." ಎಂದು ವಸಗೆ ಮುಟ್ಟಿಸಿದರು.

"ಯಾವ ಗೌಡ್ರು?" ಕೇಳಿದೆ.

"ಎದುರು ಮನೆಯೋರು.."

"ಈಗಿನ್ನೂ ನೋಡಿದ್ದೆ.." ಎನ್ನುತ್ತಾ ಅಪನಂಬುಗೆಯಿಂದ ಎದುರಿನ ಕಿಟಕಿಯ ಕಡೆ ಧಾವಿಸಿದರೆ ಹೌದೇ ಹೌದು. ಒಬ್ಬೊಬ್ಬರಾಗಿ ಸನಿಹದಲ್ಲಿದ್ದ ಆಪ್ತೇಷ್ಟರು ಬಂದು ಸೇರತೊಡಗಿದ್ದಾರೆ. ನೋಡನೋಡುತ್ತಿದ್ದಂತೆ ಗೇಟಿನ ಹೊರಭಾಗದ ಒಂದು ಬದಿಯಲ್ಲಿ ಒಣಕಟ್ಟಿಗೆಯ ತುಣುಕುಗಳನ್ನಿಟ್ಟು ಬೆಂಕಿ ಹಚ್ಚಿ ಸಾವಿನ ಸುದ್ದಿಯನ್ನು ಹೊರಜಗತ್ತಿಗೆ ಜಾಹೀರುಪಡಿಸಲಾಯ್ತು. ಮನೆಯೆದುರು ಶಾಮಿಯಾನ ಎದ್ದು ನಿಂತಿತು. ಒಂದಿಷ್ಟು ಕುರ್ಚಿಗಳೂ. 'ಸುಖ ಮರಣ' ಅನ್ನುತ್ತಿದ್ದರು ಯಾರೋ. ಹಾಸಿಗೆ ಹಿಡಿದು ನರಳಿ ಸಾಯದೆ ಫಕ್ಕನೆ ಹಣ್ಣೆಲೆಯಂತೆ ತೊಟ್ಟು ಕಳಚಿಕೊಂಡು ಉದುರುವುದೆಲ್ಲಾ ಸುಖಮರಣವೇ. ಆದರೆ ಅದಕ್ಕೂ ಒಂದು ವಯಸ್ಸು ಎನ್ನುವುದು ಇರುವುದಿಲ್ಲವಾ? ಅಂದಹಾಗೆ ಸಾಯುವುದಕ್ಕೆ ಇಂತಿಷ್ಟು ವಯಸ್ಸಾಗಿದ್ದರೆ ಸೂಕ್ತ ಅನ್ನುವುದಕ್ಕೆ ಇರುವ ಮಿತಿ ಯಾವುದು? ಯಾರ ಮನೆಯಲ್ಲೇ ಆಗಿರಲಿ, ಸಾವು ಸಾವೇ. ಆ ಪದದಲ್ಲೇ ಮನಸ್ಸನ್ನು ಆವರಿಸಿಕೊಳ್ಳುವ ಒಂದು ಗಾಢ ವಿಷಾದವಿದೆ. ಮುಂದೆ ಏನೇನು ಕಲಾಪ ನಡೆಯಬೇಕೋ ಎಲ್ಲಾ ಸಾಂಗೋಪಾಂಗವಾಗಿ ನಡೆದು ಶವ ಸ್ಮಶಾನಕ್ಕೆ ರವಾನೆಯಾಯ್ತು. ನಮ್ಮ ಪರಿಚಿತರೊಬ್ಬರು ಆಗೀಗ ಒಂದು ಜೋಕ್ ಹೇಳುತ್ತಿದ್ದರು. ಅವರ ಆಫೀಸಿನಲ್ಲಿ ಯಾರಾದರೂ ಹೇಳದೆ ಕೇಳದೆ ಕೆಲಸಕ್ಕೆ ಚಕ್ರ ಹಾಕಿದರೆ 'ಹೊಗೆ ಹಾಕಿಸ್ಕೊಂಡಿದಾನೇಂತ ಕಾಣುತ್ತೆ' ಎನ್ನುವ ಕೀಟಲೆ ಮಾತು ಚಲಾವಣೆಯಲ್ಲಿತ್ತಂತೆ. ಅಂದಹಾಗೆ ಈ ಸಾವಿಗೆ ಅದೆಷ್ಟೊಂದು ಹೆಸರುಗಳು. ವೈಕುಂಠವಾಸಿ, ಕೈಲಾಸವಾಸಿಗಳಾಗುವುದರಿಂದ ತೊಡಗಿ ಪೆಟ್ಟಿಗೆ ಕಟ್ಟಿದರು, ಚಿರನಿದ್ರೆಗೆ ಸಂದರು ಅನ್ನುವಂತಾ ಹಲವಾರು ಪದಪ್ರಯೋಗಗಳು. 'ಇಂತವರಿಗೆ ಚೀಟಿ ಬಂತಂತೆ' ಅನ್ನುವ ಹೇಳಿಕೆ ಕೂಡಾ ಕೆಲವು ಕಡೆ ಬಳಕೆಯಲ್ಲಿದೆ. 'ನೆಗೆದು ಬಿದ್ದ' ಅನ್ನುವುದು ಶಾಶ್ವತವಾಗಿ ಅಗಲಿ ಹೋದ ಜೀವದ ಕುರಿತು ಬಳಸುವುದು ಅನಾಗರೀಕವಾದರೂ

ಸತ್ತವನು ವೈರಿವರ್ಗಕ್ಕೆ ಸೇರಿದವನಾದರೆ ಇಂತಾ ಮಾತೂ ಬಾಯಿಂದ ಉದುರಿ ಬೀಳಬಹುದು.

ಹೀಗೇ ಪರಿಚಿತರೊಬ್ಬರ ಮನೆಯಲ್ಲಿ ಒಂದು ಸಾವು ಸಂಭವಿಸಿತು. ಸತ್ತವನು ಮನೆ ಯಜಮಾನ. ಮಕ್ಕಳ ಕುರಿತಾದ ಕರ್ತವ್ಯಗಳನ್ನೆಲ್ಲಾ ತೀರಿಸಿ ಬಿಡುಬೀಸಾಗಿ ನಿವೃತ್ತ ಜೀವನ ಕಳೆಯಬೇಕಾದಂತಾ ವಯಸ್ಸಿನವನು. ಸಾವಿನ ಮನೆಗೆ ಹೋದರೆ ಸಂತೈಕೆಯ ಎರಡು ಮಾತಾಡುವುದು ಅದೆಷ್ಟು ಕಷ್ಟ ಎಂದು ಕೆಲವರಿಗಾದರೂ ಅನಿಸಬಹುದು. ಏನೇ ಮಾತಾಡಿದರೂ ಎಲ್ಲಾ ಹಳಸಲು. ತಲೆತಲಾಂತರಗಳಿಂದ ಆಡಿ ಬಿಟ್ಟಂತವು. ಇಂತಲ್ಲಿ ಒಂದು ಹೊಸ ರೀತಿಯ ಸಂತೈಕೆಯ ಮಾತು ನನ್ನ ಕಿವಿದೆರೆಗೆ ತಲುಪಿತು. ಆಡಿದವರು ಅನುದ್ದೇಶಪೂರ್ವಕವಾಗಿ ಆಡಿರಬಹುದು ಅಥವಾ ಸತ್ತವರ ಮನೆಯ ಒಳಗುಟ್ಟುಗಳನ್ನು ಬಲ್ಲ ಸನಿಹದವರೂ ಆಗಿರಬಹುದು. ಅಥವಾ ಹೀಗೇ ಅರ್ಥಪರ್ಥದ ಗೋಜಿಗೆ ಹೋಗದೆ ಸುಮ್ಮನೆ ಆಡಿರಲೂ ಬಹುದು. ಸತ್ತವರ ಹೆಂಡತಿಗೆ ಒಬ್ಬಾಕೆ ಸಮಾಧಾನಿಸುತ್ತಿದ್ದರು,

"ಇನ್ನು ನೀನು ಫ್ರೀ ಬರ್ಡ್. ಹೆಚ್ಚು ಯೋಚ್ನೆ ಮಾಡೋಕೆ ಹೋಗದೆ ಆರಾಮಾಗಿರು"

ಹೀಗೂ ಸಂತೈಕೆಯ ಮಾತಾಡುವವರಿರುತ್ತಾರಾ? ಅದರಲ್ಲೂ ಹತ್ತಾರು ಜನ ಸೇರಿರುವಲ್ಲಿ? 'ಫ್ರೀ ಬರ್ಡ್' ಎನ್ನುವ ಪದಪುಂಜಗಳ ಹಿಂದೆ ನಾನಾರ್ಥಗಳು ಅಡಗಿರಲಿ, ಅಥವಾ ಬಾಯಿ ಜಾರಿ ಬಂದ ಮಾತಾಗಿರಲಿ, ಒಂದಷ್ಟು ದಿನ ಈ ಪದ ನನ್ನನ್ನು ಕಾಡದೆ ಬಿಡಲಿಲ್ಲ.

ಎಂತಾ ದುಃಖವೇ ಆಗಿರಲಿ, ಅದು ಕಡಿಮೆಯಾಗುತ್ತಾ ಬರಲಿ ಎಂದು ದೇವರು ದಿನಾ ಒಂದೊಂದು ಕಲ್ಲು ಎಸೆಯುತ್ತಾನೆ ಎನ್ನುವುದು ಹೇಳಿಕೆ ಮಾತು. ಸಾವಿನಮನೆಯಲ್ಲಿ ಕರ್ಮಾಂತರಕ್ಕೆ ಸೇರಿಕೊಂಡ ಬಂಧುವರ್ಗಕ್ಕೆ ಕೆಲವೊಮ್ಮೆ ತಾವು ಅಲ್ಲಿ ಒಟ್ಟುಗೂಡಿರುವುದೇಕೆ ಎನ್ನುವ ವಾಸ್ತವ ಮರೆತುಹೋಗಿ, ಯಾರದೋ ತಮಾಷೆಯ ಮಾತಿಗೆ ಇದ್ದಕ್ಕಿದ್ದಂತೆ ನಗು ಸ್ಫೋಟಿಸಿ, ತಕ್ಷಣ ವಸ್ತುಸ್ಥಿತಿಯ ಅರಿವಾಗಿ ತುದಿನಾಲಿಗೆ ಕಚ್ಚಿಕೊಂಡು, ಗಪ್‌ಚುಪ್ಪಾಗುವುದು ನನ್ನಂತೆ ಎಲ್ಲರ ಅನುಭವವೂ ಆಗಿರಬೇಕೆಂದೇನಿಲ್ಲ.

ಮನೆಯ ಹಿರಿ ತಲೆ ಹೊಗೆ ಹಾಕಿಸಿಕೊಂಡಿತ್ತು. ಹದಿಮೂರನೆಯ ದಿನ ವೈಕುಂಠಸಮಾರಾಧನೆಗೆ ಮನೆ ತುಂಬಾ ಜನ ಸೇರಿತ್ತು. ಊಟದ ಹೊತ್ತಿಗೆ ಅಗಲಿದ ಯಜಮಾನರ ಪತ್ನಿ ಮೊಮ್ಮಗಳನ್ನು ಕರೆದು ಪಿಸುದನಿಯಲ್ಲಿ ಗುಸುಗುಟ್ಟಿದ ಮಾತು ನನ್ನ ಕಿವಿಗೆ ಯಾಕೆ ಬಿತ್ತೋ ಪರಮಾತ್ಮ ಬಲ್ಲ. ನನ್ನ ಕಿವಿ ಭಾರೀ ಸೂಕ್ಷ್ಮ ಎನ್ನುವ ಭ್ರಮೆ ನನಗಿಲ್ಲ. ಮತ್ತು ಬೇರೆಯವರ ಮಾತನ್ನು ವಿನಾಕಾರಣ ಕೇಳಬೇಕೆಂಬ ಚಪಲ ಕೂಡಾ ಇಲ್ಲ ಅಂದುಕೊಂಡಿದ್ದೇನೆ. ಯಜಮಾಂತಿ ಮೊಮ್ಮಗಳಿಗೆ ಹೇಳುತ್ತಿದ್ದರು,

"ಒಂದು ಸ್ಟೀಲ್ ಡಬ್ಬೀಲಿ ಏಳೆಂಟು ಜಿಲೇಬಿ ಹಾಕಿ ಬೀರೂನಲ್ಲಿ ತಂದಿಡೇ. ಕೊನೇ ಪಂಕ್ತಿಗೆ ಉಳಿಯುತ್ತೋ, ಇಲ್ವೋ.."

ತಪ್ಪೇನಲ್ಲ, ಇರಬೇಕು ಹೀಗೇ. ಎಂತಾ ಸಂದರ್ಭದಲ್ಲೂ ಜೀವನ ಪ್ರೀತಿ ಉಳಿಸಿಕೊಂಡಿರಬೇಕು. ಜೀವನದಿ ಮುಂದಕ್ಕೆ ಹರಿಯುತ್ತಿರಬೇಕು. ಆ ಅಜ್ಜಿಯ ಕುರಿತು ಮೆಚ್ಚುಗೆ ಅನಿಸಿದ್ದು ಸುಳ್ಳಲ್ಲ. ■

# ಟೈಪಾಯಣ – ನೋ ಕರೆಕ್ಷನ್ಸ್

● ಧಾರಿಣಿ ಮಾಯಾ

ನಾನಾಗ ಹೈಸ್ಕೂಲಿನಲ್ಲಿ ಓದುತ್ತಿದ್ದೆ. ಮುಂದೆ ಯಾವುದೇ ಕೆಲಸಕ್ಕೆ ಸೇರಿದರೂ ಟೈಪಿಂಗ್ ಹಾಗು ಶಾರ್ಟ್ ಹ್ಯಾಂಡ್ ಕಲಿಯುವುದು ಅನಿವಾರ್ಯವೆಂಬತಿತ್ತು.ಈ ದೂರಾಲೋಚನೆ ಇಟ್ಟುಕೊಂಡುನನ್ನಮ್ಮ ನನಗೂ, ನನ್ನಕ್ಕನಿಗೂ ಟೈಪಿಂಗ್ ತರಗತಿಗೆ ಸೇರಿಸಿದರು. ಆದರೆ ನನಗೆ ಅಷ್ಟೇನು ಆಸಕ್ತಿಯಿರಲಿಲ್ಲ. ಆದ್ರೂ ಅಮ್ಮನ ಬಲವಂತಕ್ಕೆ ನಾ ತಲೆಬಾಗಲೇಬೇಕಾಯಿತು.

ಮೊದಲನೆಯ ದಿನ ಟೈಪಿಂಗ್ ಕ್ಲಾಸಿಗೆ ಒಲ್ಲದ ಮನಸ್ಸಿನಿಂದಲೇ ಅಡಿಯಿಟ್ಟೆ. ಅಲ್ಲಿದ್ದ ಸುಮಾರು ಹನ್ನೆರಡು ಟೈಪಿಂಗ್ ಮೆಷೀನ್‌ಗಳಿಂದಲೂ ಕಟ...ಕಟ...ಸದ್ದು. ಅಬ್ಬಾ!! ತಲೆ ಸಿಡಿಯುವ ಶಬ್ದ. ವಿಧಿಯಿಲ್ಲ. ಮೇಷ್ಟು ಹೇಳಿದ ಸ್ಟೂಲಿನ ಮೇಲೆ ಕುಳಿತೆ. ಮೆಷೀನಿನೊಳಗೆ ಒಂದು ಬಿಳಿ  ಖಾಲಿ ಹಾಳೆ ಹಾಕಿದರು.ನನ್ನ ಎಡಗೈಕಿರುಬೆರಳಿನಿಂದ 'ಚ' ಅಕ್ಷರದ ಕೀಲಿಯನ್ನು ಜೋರಾಗಿ ಒತ್ತುವಂತೆ ಹೇಳಿದರು. ಹಾಗೆಯೇ ಮಾಡಿದೆ. ಬಿಳಿಯ ಹಾಳೆಯ ಮೇಲೆ ಕಪ್ಪು ಇಂಕಿನ 'ಚ' ಅಕ್ಷರ ಮೂಡಿತು. ಅದನ್ನು ನೋಡಿ ನನಗೊಂತರಾ ಥ್ರಿಲ್ ಆಯಿತು.ಪುನಃ ಅದನ್ನೇ ಒತ್ತು ಎಂದರು ಮೇಷ್ಟು. ಮತ್ತೆ ಒತ್ತಿದೆ. ಪುನಃ 'ಚ' ಬಂತು. ಮುಂದೆ ಏನು ಎಂಬಂತೆ ಅವರತ್ತ ಪ್ರಶ್ನಾತೀತ ನೋಟ ಬೀರಿದೆ. ಆ ಬಿಳಿ ಹಾಳೆ ಪೂರ್ತಿ 'ಚ' ಅಕ್ಷರವನ್ನು ತುಂಬಿಸು ಎಂದರು. ಒಂದು ಕ್ಷಣ ನಾ ಹೌಹಾರಿದೆ. ನಾಲ್ಕು ಬಾರಿ ಒತ್ತಿದ್ದಕ್ಕೇ ನನ್ನ ಎಡಗೈ ಕಿರುಬೆರಳು ನೋಯಲು ಶುರುವಾಗಿತ್ತು. ಇನ್ನು, ಆ ಹಾಳೆ ಪೂರ್ತಿ ಹೇಗಪ್ಪಾಟೈಪಿಸೋದುಎಂದು ಮಾಸ್ತರನ್ನು ಮನದಲ್ಲೇ ಶಪಿಸಿಕೊಂಡು, ಕೀಲಿ ಒತ್ತಲು ಶುರುಮಾಡಿದೆ. ನಖರಾ ಮಾಡುವಂತಿರಲಿಲ್ಲ. ಅವರು 'ಹ್ಞೂ' ಮುಂದುವರೆಸು ಎನ್ನುವ ನೋಟ ಬೀರಿ ಬೇರೆಡೆಗೆ ಹೊರಟುಹೋದರು.

ಈಗ ನನ್ನ ಟೈಪಿಂಗ್ ಮೆಷಿನ್ ಕುಟ...ಕುಟ...ಸದ್ದು ಮಾಡತೊಡಗಿತು. ಮಧ್ಯೆ ಮಧ್ಯೆ ವಿಶ್ರಾಂತಿ ಪಡೆಯಲುನನ್ನ ಕಿರುಬೆರಳು ಕಾತರಿಸುತ್ತಿತ್ತು. ಹಿಂದೆ ತಿರುಗಿ ನೋಡಿದೆ. ಅಲ್ಲಿ ಯಾರೂ ಇರಲಿಲ್ಲ. ಸ್ವಲ್ಪ ರೆಸ್ಟ್ ಮಾಡಿ ಪುನಃ ಮುಂದುವರಿಸಿದೆ. ನಾನು ಮಾಡುತ್ತಿರುವುದನ್ನು ನಿಗಾ ಇಡಲು ಈಗ ಮೇಷ್ಟು ಇರಲಿಲ್ಲ. ನನಗೆ ಒಂದು ಉಪಾಯ ಹೊಳೆಯಿತು. ಎಡಗೈ ಕಿರುಬೆರಳಿಗೆ ರೆಸ್ಟ್ ಕೊಟ್ಟು ಈಗ ಬಲಗೈ ತೋರುಬೆರಳಿನಿಂದ 'ಚ' ಅಕ್ಷರವನ್ನು ಕಟ...ಕಟ...ಕುಟ್ಟಲು ಶುರುಮಾಡಿದೆ. ಮಾಸ್ತರು ಅಲ್ಲಿಗೆ ಬರುವ ವೇಳೆಗೆ ಪೂರ್ತಿ ಹಾಳೆಮುಗಿಸುವ ಹುನ್ನಾರ ನನ್ನದಾಗಿತ್ತು. ಖುಷಿಯಿಂದ ಬೇಗ ಬೇಗ ಮಾಡಹತ್ತಿದೆ. ಅಷ್ಟರಲ್ಲಿ ನನ್ನ ಹಿಂದುಗಡೆ ಯಾವುದೋ ಆಕೃತಿ ನಿಂತಂತೆ ಭಾಸವಾಯಿತು. ತಿರುಗಿ ನೋಡಿದರೆ, ಮೇಷ್ಟು! ನಾನು ಏನು ಹೇಳಲೂ ತೋಚದೆ  ದಂಗಾಗಿ ಅವರನ್ನೇ ನೋಡುತ್ತಾ ಕುಳಿತುಬಿಟ್ಟೆ. ಅವರ ಹುಬ್ಬುಗಂಟಿಕ್ಕಿತ್ತು. ನನ್ನ ಕಿವಿ ಹಿಂಡಿ, ಮತ್ತೊಂದು ಖಾಲಿ ಹಾಳೆ ಕೊಟ್ಟು, ಪುನಃ 'ಚ' ಅಕ್ಷರವನ್ನು ಸರಿಯಾದ ಬೆರಳಿನಿಂದ ತುಂಬಿಸು ಎಂದು ಹೇಳಿ ಹೊರಟು ಹೋದರು. ನಾನು ತಲೆ ಚಚ್ಚಿಕೊಂಡೆ. ಶಾರ್ಟ್‌ಕಟ್ ಕೆಲಸ ಮಾಡಲು ಹೋಗಿ ಈಗ ಡಬಲ್ ಕೆಲಸ ಮಾಡುವಂತಾಗಿತ್ತು.

ಹಾಗೂ ಹೀಗೂ ಟೈಪಿಂಗ್ ಕ್ಲಾಸಿಗೆ ವಿಧಿಯಿಲ್ಲದೆ ಹೋಗುತಲಿದ್ದೆ. ಟೈಪಿಂಗ್ ಸಾಕಾಗಿ ಕ್ಲಾಸ್ ಬಿಟ್ಟುಬಿಡುವೆನೆಂದು ಅಮ್ಮನಿಗೆ ಹೇಳಿದಾಗ ಅವರು ನನಗೆ ಗೊತ್ತಿಲ್ಲದ ಹಾಗೆ ಟೈಪಿಂಗ್ ಮೇಷ್ಟನ್ನೇ ನಮ್ಮ ಮನೆಗೆ ಕರೆಯಿಸಿ, ಕ್ಲಾಸ್ ಮುಂದುವರೆಸದಿದ್ದರೆ ನೀನು ದಂಡ ಕಟ್ಟಬೇಕಾಗುತ್ತೆ ಅಂತ ನನಗೆ ಹೇಳಿಸಿದ್ದರು. ಅಯ್ಯೋ ವಿಧಿಯಾಟವೇ, ಇಷ್ಟವಿಲ್ಲದಿದ್ದರೂ ಇದೇನಪ್ಪಾ ಗೋಳು!! ದಿನಾ ಬೆಳಿಗ್ಗೆ 6.30 ಗಂಟೆಗೆ ಹಾಗೂ ಹೀಗೂ ಟೈಪಿಂಗ್ ಕ್ಲಾಸ್ ಮುಗಿಸಿ ಟೈಪಿಂಗ್ ಪರೀಕ್ಷೆ ಕಟ್ಟುವ ಮಟ್ಟಕ್ಕೆ ತಲುಪಿದೆ. ಮನಸ್ಸಿಲ್ಲದಿದ್ದರೂ ಪರೀಕ್ಷೆಗೆ ಕುಳಿತೆ. ತೇರ್ಗಡೆಯೂ ಆದೆ. ನನಗಿಂತ ನನ್ನಮ್ಮನಿಗೇ ಹೆಚ್ಚು ಖುಷಿ ಹಾಗು ನಿರಾಳ. ಸದ್ಯ, ನನಗೆ ಮಾತ್ರ ಅದರಿಂದ ಬಿಡುಗಡೆ ಸಿಕ್ಕಿತ್ತು.

ಯಾವ ರೀತಿಯಲ್ಲೂ ಕೆಲಸಕ್ಕೆ ಬಾರದ ಟೈಪಿಂಗ್ ನನಗೇಕೆ ಬೇಕು ಎಂಬ ಮೊಂಡು ಧೋರಣೆಯಲ್ಲೇ ಇದ್ದೆ. ಅಂದು ಕೆಲಸಕ್ಕೆ ಬಾರದ್ದು ಅಂದುಕೊಂಡ ವಿದ್ಯೆ, ಇಂದು ನನಗೆ ಲ್ಯಾಪ್‌ಟಾಪ್‌ನಲ್ಲಿ ಪಟಪಟನೆ ಟೈಪ್ ಮಾಡಲು 'ಸಾಥ್' ಕೊಡುತ್ತಿದೆ. ಇದರಿಂದ ನಾ ಕಲಿತ ಪಾಠ ಎಂದರೆ, 'ಎಂದೂ ಯಾವ ವಿದ್ಯೆಯೂ ನಿಷ್ಪ್ರಯೋಜಕವಲ್ಲ. ಎಂದಾದರೊಂದು ದಿನ ಆ ವಿದ್ಯೆ ನಮ್ಮ ಕೈ ಹಿಡಿದು ಬೆಳೆಸುತ್ತದೆ.'

ನನ್ನೆಲ್ಲಾ ನಖರಾಗಳನ್ನು ಮೌನವಾಗೇ ಸಹಿಸಿಕೊಂಡು ಇಂದಿನ ನನ್ನ ಬೆಳವಣಿಗೆಗೆ ಕಾರಣೀಭೂತರಾದ ನನ್ನ ಅಮ್ಮ ಹಾಗು ಟೈಪಿಂಗ್ ಮೇಷ್ಟರಿಗೆ ನನ್ನದೊಂದು ಸಲಾಂ...!

■

---

## ವಿದ್ಯಮಾನ – ವಿಹಂಗಮ

ಸಹನಾ ಪ್ರಸಾದ್

ಇಡೀ ಪ್ರಪಂಚವೇ ನೋಡುತ್ತಿತ್ತು
ಗೆಲ್ಲುವರು ಯಾರು ಚುನಾವಣೆಯಲ್ಲಿ
ಒಂದೆಡೆ ದೊಡ್ಡಣ್ಣನ ಊರು
ಇನ್ನೊಂದೆಡೆ ನಮ್ಮ ಊರಿನ ಕೇರಿ!!

***

ಅಯ್ಯೋ ನಿಂದಿಸಿದರು ಎಂದು ನೊಂದೆ ನಾನು
ಬಿದ್ದೇ ಹೋಯಿತು ನನ್ನ ತಲೆ ಮೇಲೆ ಬಾನು
ಆಗ ನೋಡಿದೆ ನಮ್ಮ ನಾಯಕರನ್ನು
ಎಷ್ಟು ಜರಿದರೂ ಮುಂದುವರೆಸುತ್ತಾರೆ
ತಮ್ಮದೇ ಕಾಯಕವನ್ನು!